ಸೋಮವಾರ, ಸೆಪ್ಟೆಂಬರ್ 25, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿಸರ್ಜನೆ ಗಣೇಶನ ಮೂರ್ತಿಯನ್ನು ಚೆನ್ನೈನ ಸಮುದ್ರದಲ್ಲಿ ಭಾನುವಾರ ವಿಸರ್ಜನೆ ಮಾಡಿದ ಭಕ್ತರು



ಅ. 1ರಂದು ಸ್ವಚ್ಛತೆಗಾಗಿ ಅಭಿಯಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಜನ ಅಕ್ಟೋಬರ್ 1ರಂದು ಸ್ವಚ್ಛತೆಗಾಗಿ ಶ್ರಮದಾನದಲ್ಲಿ ಪಾಲ್ಗೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಕರೆ ನೀಡಿದ್ದಾರೆ.

ಇದು ಅಕ್ಟೋಬರ್ 1ರಂದು ದೇಶದಾದ್ಯಂತ ಬೆಳಿಗ್ಗೆ 10 ಗಂಟೆಯಿಂದ 11 ಗಂಟೆಯವರೆಗೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

'ಸ್ವಚ್ಛತೆಗಾಗಿ ದೊಡ್ಡ ಕಾರ್ಯಕ್ರಮವೊಂದು ಭಾನುವಾರ ನಡೆಯಲಿದೆ. ನೀವು ಕೂಡ ಈ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕು. ನೀವು ನಿಮ್ಮ ಬೀದಿಗಳಲ್ಲಿ, ನೆರೆಹೊರೆಯಲ್ಲಿ, ಉದ್ಯಾನದಲ್ಲಿ ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಇದರಲ್ಲಿ ಭಾಗಿಯಾಗಬಹುದು' ಎಂದು ಮೋದಿ ಅವರು ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ಗಾಂಧಿ ಜಯಂತಿ ಸಂದರ್ಭದಲ್ಲಿ ಜನ ಖಾದಿ ಉತ್ಪನ್ನಗಳನ್ನು ಖರೀದಿಸಬೇಕು ಎಂದು ಮೋದಿ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣ

ಕೆನಡಾಕ್ಕೆ ಅಮೆರಿಕ ಗುಪ್ತಚರ ಮಾಹಿತಿ

ವಾಷಿಂಗ್ಟನ್ (ಪಿಟಿಐ): ಸಿಖ್ ಪ್ರತ್ಯೇಕತಾವಾದಿ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯ ನಂತರ ಆತನ ಬಗೆಗಿನ ಗುಪ್ತಚರ ಮಾಹಿತಿಯನ್ನು ಅಮೆರಿಕದ ಅಧಿಕಾರಿಗಳು, ಕೆನಡಾ ಜೊತೆ ಹಂಚಿಕೊಂಡಿದ್ದರು. ಆದರೆ, ಕೆನಡಾದ ಅಧಿಕಾರಿಗಳು ಕದ್ದಾಲಿಕೆಯ ಮೂಲಕ ಪಡೆದ ಮಾಹಿತಿ ಹೆಚ್ಚು ನಿರ್ಣಾಯಕವಾಗಿತ್ತು. ಆ ಮಾಹಿತಿ ಆಧರಿಸಿ, ಹತ್ಯೆಯ ಹಿಂದೆ ಭಾರತದ ಕೈವಾಡ ಇದೆ ಎಂದು ಕೆನಡಾ ಆರೋಪಿಸಿತು ಎಂದು ದಿ ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ತನ್ನ ಕೆಲವು ಮೂಲಗಳನ್ನು ಉಲ್ಲೇಖಿಸಿ ಪತ್ರಿಕೆ ಶನಿವಾರ ಈ ವರದಿ ಪ್ರಕಟಿಸಿದೆ.

ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಕೆನಡಾ ನಡುವೆ ಗುಪ್ತಚರ ಮಾಹಿತಿಯ ವಿನಿಮಯ ನಡೆಯುತ್ತದೆ. ಈ ಮಾಹಿತಿಯು, ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಖಾಲಿಸ್ತಾನಿ ಉಗ್ರವಾದಿ ನಿಜ್ಜರ್ ಹತ್ಯೆಯ ಹಿಂದೆ ಭಾರತದ ಕೈವಾಡ ಇದೆ ಎಂಬ ಆರೋಪ ಮಾಡಲು ಕಾರಣವಾಯಿತು ಎಂದು ಕೆನಡಾದಲ್ಲಿ ಅಮೆರಿಕದ ರಾಯಭಾರಿ ಆಗಿರುವ ಡೇವಿಡ್ ಕೊಹೆನ್ ಅವರು ಸಂದರ್ಶನವೊಂದರಲ್ಲಿ ಖಚಿತಪಡಿಸಿದ್ದಾರೆ.

ಭಾರತವು ನಿಜ್ಜರ್‌ನನ್ನು 2020ರಲ್ಲಿ ಭಯೋತ್ಪಾದಕ ಎಂದು ಘೋಷಿಸಿದೆ. ಈತನನ್ನು ಜೂನ್ 18ರಂದು ಬ್ರಿಟಿಷ್ ಕೊಲಂಬಿಯಾದಲ್ಲಿ ಹತ್ಯೆ ಮಾಡಲಾಗಿದೆ. ಈತ ನಿಷೇಧಿತ ಖಾಲಿಸ್ತಾನ್ ಟೈಗರ್ ಫೋರ್ಸ್‌ನ ಮುಖ್ಯಸ್ಥನಾಗಿದ್ದ.

'ಹತ್ಯೆಯ ನಂತರದಲ್ಲಿ ಅಮೆರಿಕದ ಗುಪ್ತಚರ ಸಂಸ್ಥೆಗಳು ಕೆನಡಾದ ಅಧಿಕಾರಿಗಳಿಗೆ ಕೆಲವು ವಿವರಗಳನ್ನು ಒದಗಿಸಿವೆ. ಆ ವಿವರಗಳನ್ನು ಆಧರಿಸಿ ಕೆನಡಾ, ಈ ಹತ್ಯೆಯ ಹಿಂದೆ ಭಾರತದ ಪಾತ್ರವಿದೆ ಎಂದು ತೀರ್ಮಾನಿಸಿದೆ' ಎಂದು ಮೂಲಗಳನ್ನು ಉಲ್ಲೇಖಿಸಿ ಪತ್ರಿಕೆ ವರದಿ ಮಾಡಿದೆ. ಆದರೆ ಮೂಲಗಳ ಹೆಸರು ಉಲ್ಲೇಖಿಸಿಲ್ಲ.

ನಿಜ್ಜರ್ ಹತ್ಯೆಯ ನಂತರದಲ್ಲಿ ಅಮೆರಿಕದ ಅಧಿಕಾರಿಗಳು, ಕೆನಡಾದ ಅಧಿಕಾರಿಗಳಿಗೆ 'ಹತ್ಯೆಗೆ ಯೋಜನೆ ರೂಪಿಸಲಾಗಿದೆ ಎಂಬ ಮಾಹಿತಿ ನಮ್ಮಲ್ಲಿ ಇರಲಿಲ್ಲ. ಅಂತಹ ಮಾಹಿತಿ ಇದ್ದಿದ್ದರೆ ಅದರ ಬಗ್ಗೆ ಕೆನಡಾ ಅಧಿಕಾರಿಗಳಿಗೆ ತಕ್ಷಣವೇ ತಿಳಿಸಲಾಗುತ್ತಿತ್ತು' ಎಂದು ಹೇಳಿದ್ದರು ಎಂಬ ವಿವರ ವರದಿಯಲ್ಲಿ ಇದೆ.

ನಿಜ್ಜರ್ ಹತ್ಯೆ ಕುರಿತು ಕೆನಡಾ ನಡೆಸುತ್ತಿರುವ ತನಿಖೆಗೆ ಸಹಕರಿಸುವಂತೆ ಅಮೆರಿಕದ ವಿದೇಶಾಂಗ ಸಚಿವ ಆ್ಯಂಟನಿ ಬ್ಲಿಂಕನ್ ಭಾರತಕ್ಕೆ ಸಲಹೆ ಮಾಡಿದ್ದಾರೆ.

ಪ್ರತ್ಯೇಕತಾವಾದಿಗಳಿಗೆ ಬೆಂಬಲ: ಟ್ರುಡೊ ವಿರುದ್ಧ ಪ್ರತಿಭಟನೆ



ನವದೆಹಲಿಯಲ್ಲಿ ಯುನೈಟೆಡ್ ಹಿಂದೂ ಫ್ರಂಟ್ ಸಂಘಟನೆ ನೇತೃತ್ವದಲ್ಲಿ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ವಿರುದ್ಧ ಪ್ರತಿಭಟನೆ ನಡೆಸಲಾಯಿತು —ಎಎಫ್‌ಪಿ ಚಿತ್ರ

ನವದೆಹಲಿ (ಪಿಟಿಐ): ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಖಾಲಿಸ್ತಾನಿ ಪ್ರತ್ಯೇಕತಾವಾದಿಗಳನ್ನು ಬೆಂಬಲಿಸುತ್ತಿದ್ದಾರೆ ಎಂದು ಆರೋಪಿಸಿ ಯುನೈಟೆಡ್ ಹಿಂದೂ ಫ್ರಂಟ್ ಸಂಘಟನೆ ನೇತೃತ್ವದಲ್ಲಿ ಭಾನುವಾರ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು.

ಸಂಘಟನೆ ಮುಖ್ಯಸ್ಥ ಜೈ ಭಗವಾನ್ ಗೋಯಲ್ ನೇತೃತ್ವದಲ್ಲಿ ಪ್ರತಿಭಟನಕಾರರು, ಕೆನಡಾ ಮತ್ತು ಭಾರತದ ಪ್ರಧಾನ ಮಂತ್ರಿಗಳನ್ನು ಉದ್ದೇಶಿಸಿ ಬರೆದ ಪತ್ರವನ್ನು ಅಧಿಕಾರಿಗಳಿಗೆ ಸಲ್ಲಿಸಿದರು ಎಂದು ಹೇಳಿಕೆ ತಿಳಿಸಿದೆ.

'ಹಲವು ತಿಂಗಳುಗಳಿಂದ ಕೆನಡಾದ ಪ್ರಧಾನಿ ಭಾರತ ವಿರೋಧಿ ಖಾಲಿಸ್ತಾನಿಗಳನ್ನು ಬಹಿರಂಗವಾಗಿ ಬೆಂಬಲಿಸುತ್ತಿದ್ದಾರೆ ಮತ್ತು ರಕ್ಷಿಸುತ್ತಿದ್ದಾರೆ. ಭಾರತ ಸರ್ಕಾರದಿಂದ ಪದೇ ಪದೇ ಆಕ್ಷೇಪಣೆಗಳ ಹೊರತಾಗಿಯೂ, ಟ್ರುಡೊ ಪ್ರತಿಕ್ರಿಯಿಸಿಲ್ಲ' ಎಂದು ಗೋಯಲ್ ಹೇಳಿದರು.

'ಟ್ರುಡೊ ಅವರು ಭಾರತ ವಿರೋಧಿ ಖಾಲಿಸ್ತಾನಿಗಳನ್ನು ತುಂಬಾ ಪ್ರೀತಿಸುತ್ತಿದ್ದರೆ, ಅವರು ಕೆನಡಾದ ಒಂದು ಭಾಗವನ್ನು ಬಿಟ್ಟು ಹೊಸ ಖಾಲಿಸ್ತಾನಿ ರಾಷ್ಟ್ರವನ್ನು ಏಕೆ ರಚಿಸುವುದಿಲ್ಲ? ಅದನ್ನು ಗುರುತಿಸುವವರಲ್ಲಿ ನಾವು ಮೊದಲಿಗರಾಗುತ್ತೇವೆ' ಎಂದರು.

ಸುದ್ದಿ 2 ನಿಮಿಷ

ಸಂಸತ್ ಹೊರಗೂ ನನ್ನ ಮೇಲೆ ದಾಳಿಗೆ ಸಂಚು: ಅಲಿ


ನವದೆಹಲಿ (ಪಿಟಿಐ): 'ಬಿಜೆಪಿ ಸಂಸದರು ನನ್ನ ವಿರುದ್ಧ ಮಾಡಿರುವ ಆರೋಪಗಳು ಆಧಾರರಹಿತವಾಗಿದ್ದು, ಇದರ ಬಗ್ಗೆಯೂ ತನಿಖೆ ನಡೆಸುವಂತೆ ಸ್ಪೀಕರ್‌ಗೆ ಮನವಿ ಮಾಡುತ್ತೇನೆ' ಎಂದು ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ಹೇಳಿದ್ದಾರೆ.

ಸಂಸದ ನಿಶಿಕಾಂತ್ ದುಬೆ ಆರೋಪಗಳಿಗೆ ಪ್ರತಿಕ್ರಿಯಿಸಿದ ಅಲಿ, 'ನನ್ನ ವಿರುದ್ಧದ ಆಧಾರರಹಿತ ಆರೋಪದ ಬಗ್ಗೆ ತನಿಖೆ ನಡೆಸುವಂತೆ ಸ್ಪೀಕರ್‌ಗೆ ಮನವಿ ಮಾಡುತ್ತೇನೆ. ನಿಶಿಕಾಂತ್ ದುಬೆ ಅವರಿಂದ ಹಕ್ಕುಚ್ಯುತಿಯಾಗಿದೆ'ಎಂದರು.

'ಬಿಜೆಪಿ ಸಂಸದ ರಮೇಶ್ ಬಿಧೂಡಿ ಅವರನ್ನು ಪ್ರಚೋದಿಸುವ ರೀತಿಯಲ್ಲಿ ಮಾತನಾಡಿದ್ದ ಬಿಜೆಪಿಯ ಮತ್ತೊಬ್ಬ ಸಂಸದ ನಿಶಿಕಾಂತ್ ದುಬೆ ವಿರುದ್ಧ ನಾನು ವಾಗ್ದಾಳಿ ನಡೆಸಿದ್ದೆ. ಈ ಕಾರಣಕ್ಕಾಗಿ, ಸಂಸತ್‌ನಲ್ಲಿ ನನ್ನ ಮೇಲೆ ನಿಂದನೀಯ ಪದ ಬಳಸಿ ವಾಗ್ದಾಳಿ ಮಾಡಿದ್ದಲ್ಲದೆ, ಈಗ ಸಂಸತ್ ಹೊರಗೂ ನನ್ನ ಮೇಲೆ ಹಲ್ಲೆ ನಡೆಸಲು ಸಂಚು ರೂಪಿಸಲಾಗಿದೆ' ಎಂದು ಅಲಿ ಆರೋಪಿಸಿದ್ದಾರೆ.

'ನೈಜ ಸಮಸ್ಯೆ ಬೇರೆಡೆಗೆ ಸೆಳೆಯಲು ಯತ್ನ': 'ಜಾತಿ ಗಣತಿಯಂತಹ ನೈಜ ಸಮಸ್ಯೆಗಳಿಂದ ಜನರನ್ನು ಬೇರೆಡೆಗೆ ಸೆಳೆಯಲು ಸಂಸದ ರಮೇಶ್ ಬಿಧೂಡಿ ಅವರ ಆಕ್ಷೇಪಾರ್ಹ ಹೇಳಿಕೆಗಳನ್ನು ಬಿಜೆಪಿ ಬಳಸುತ್ತಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಹೇಳಿದ್ದಾರೆ.

ವಾಗ್ದಾಳಿ: ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ಅವರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. 'ಒಬ್ಬ ಲೋಕಸಭಾ ಸದಸ್ಯ ಇನ್ನೊಬ್ಬ ಸಂಸದನನ್ನು ಭಯೋತ್ಪಾದಕ ಮತ್ತು ಉಗ್ರಗಾಮಿ ಎಂದು ಕರೆಯುತ್ತಾನೆ. ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅವರ ಧರ್ಮ ಮತ್ತು ಜಾತಿ ಬಗ್ಗೆ ಟೀಕೆಗಳನ್ನು ಮಾಡುತ್ತಾರೆ' ಎಂದು ತಿಳಿಸಿದ್ದಾರೆ.



'ಬಿಜೆಪಿ ಜತೆ ಮೈತ್ರಿ ಇಲ್ಲ'

ಚೆನ್ನೈ (ಪಿಟಿಐ): ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ.ಪಳನಿಸ್ವಾಮಿ ಅಧ್ಯಕ್ಷತೆಯಲ್ಲಿ ಪಕ್ಷದ ಪ್ರಮುಖ ಪದಾಧಿಕಾರಿಗಳು, ಶಾಸಕರು ಮತ್ತು ಜಿಲ್ಲಾ ಮಟ್ಟದ ಕಾರ್ಯದರ್ಶಿಗಳ ಸಭೆ ಸೆ.25 ರಂದು ನಡೆಯಲಿದೆ.

ಸಭೆಯ ಕಾರ್ಯಸೂಚಿಯನ್ನು ಈವರೆಗೂ ಬಹಿರಂಗಪಡಿಸಿಲ್ಲ. ಹಿಂದಿನ ಮಿತ್ರ ಪಕ್ಷ ಬಿಜೆಪಿಯೊಂದಿಗಿನ ಸಂಬಂಧವು ಹದಗೆಟ್ಟ ಹಿನ್ನೆಲೆಯಲ್ಲಿ ಈ ಸಭೆ ಮಹತ್ವ ಪಡೆದಿದೆ.

'ಬಿಜೆಪಿಯೊಂದಿಗೆ ಯಾವುದೇ ಮೈತ್ರಿ ಇಲ್ಲ ಎಂಬ ಪಕ್ಷದ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಎಐಎಡಿಎಂಕೆ ಹಿರಿಯ ಮುಖಂಡ ಡಿ. ಜಯಕುಮಾರ್ ಹೇಳಿದ್ದಾರೆ.

ಈ ವಿಚಾರವಾಗಿ ಹೆಚ್ಚಿನ ಮಾಹಿತಿ ನೀಡಲು ನಿರಾಕರಿಸಿದ ಅವರು, ಸೋಮವಾರ ಈ ವಿಷಯ ಚರ್ಚೆಗೆ ಬರುವ ಸಾಧ್ಯತೆ ಇದೆ ಎಂದರು.

ದಿವಂಗತ ದ್ರಾವಿಡ ನಾಯಕ ಸಿ.ಎನ್.ಅಣ್ಣಾದೊರೈ ಅವರ ಬಗ್ಗೆ ನೀಡಿದ ಹೇಳಿಕೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಕ್ಷಮೆಯಾಚಿಸಬೇಕು ಎಂದು ಎಐಎಡಿಎಂಕೆ ಒತ್ತಾಯಿಸಿದೆ. ಈ ವಿಚಾರ ಕುರಿತು ಉಭಯ ನಾಯಕರ ನಡುವೆ ವಾಕ್ಸಮರ ನಡೆಯಿತು. ಸೆ. 18 ರಂದು ಬಿಜೆಪಿಯೊಂದಿಗಿನ ಮೈತ್ರಿಯನ್ನು ಜಯಕುಮಾರ್ ರದ್ದುಗೊಳಿಸಿದ್ದರು.

'ಮಧ್ಯಪ್ರದೇಶ, ಛತ್ತೀಸಗಢದಲ್ಲಿ ಗೆಲುವು ನಿಶ್ಚಿತ'

ತೆಲಂಗಾಣದಲ್ಲೂ ಗೆಲ್ಲಬಹುದು; ರಾಜಸ್ಥಾನದಲ್ಲಿ ಜಯದ ನಂಬಿಕೆಯಿದೆ —ರಾಹುಲ್‌ಗಾಂಧಿ



ರಾಹುಲ್‌ಗಾಂಧಿ

ನವದೆಹಲಿ (ಪಿಟಿಐ): 'ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿ ಕಾಂಗ್ರೆಸ್ ಗೆಲುವು ನಿಶ್ಚಿತ. ತೆಲಂಗಾಣದಲ್ಲಿಯೂ ಗೆಲ್ಲುವ ಸಾಧ್ಯತೆಗಳಿವೆ. ರಾಜಸ್ಥಾನದಲ್ಲಿ ತೀವ್ರ ಸ್ಪರ್ಧೆ ಇದ್ದು, ಅಲ್ಲಿಯೂ ಗೆಲ್ಲುವ ನಂಬಿಕೆ ಇದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಜಸ್ಥಾನ, ಮಧ್ಯಪ್ರದೇಶ, ಛತ್ತೀಸಗಢ, ತೆಲಂಗಾಣ, ಮಿಜೋರಾಂ ವಿಧಾನಸಭೆಗಳಿಗೆ ಚುನಾವಣೆ ನಡೆಯಬೇಕಿದೆ. ಇಲ್ಲಿ, ಕಾಂಗ್ರೆಸ್ ಗೆಲುವಿನ ಸಾಧ್ಯತೆ ಕುರಿತು ಪ್ರತಿಕ್ರಿಯಿಸಿದ ಅವರು, 'ಪರಿಸ್ಥಿತಿ ಹೀಗೆ ಕಾಣಿಸುತ್ತಿದೆ. ಬಿಜೆಪಿ ಆಂತರಿಕ ವಲಯದಲ್ಲಿಯೂ ಇಂಥ ಅಭಿಪ್ರಾಯವಿದೆ' ಎಂದರು.

ಮುಖ್ಯಾಂಶಗಳು

- ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಆಶ್ಚರ್ಯ ಕಾದಿದೆ
- ಬಿಧೂಡಿ ಹೇಳಿಕೆ ಜಾತಿ ಗಣತಿ ಬೇಡಿಕೆ ಮರೆಮಾಚುವ ಯತ್ನ
- ಮಹಿಳಾ ಮೀಸಲು ಮಸೂದೆ ತಕ್ಷಣದಿಂದ ಜಾರಿ ಸಾಧ್ಯ

ಅಸ್ಸಾಂನ ಪ್ರತಿದಿನ್ ಮೀಡಿಯಾ ನೆಟ್‌ವರ್ಕ್ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದೇಶದಲ್ಲಿ ಈಗ ಪ್ರತಿಪಕ್ಷಗಳು ಒಟ್ಟುಗೂಡಿವೆ. 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಆಶ್ಚರ್ಯ ಕಾದಿದೆ' ಎಂದು ಅಭಿಪ್ರಾಯಪಟ್ಟರು.

ಬಿಎಸ್‌ಪಿ ಸಂಸದ ಡ್ಯಾನಿಷ್ ಅಲಿ ವಿರುದ್ಧ ಬಿಜೆಪಿ ಸದಸ್ಯ ರಮೇಶ್ ಬಿಧೂಡಿ ಅವರು 'ಆಕ್ಷೇಪಾರ್ಹ ಪದ' ಬಳಸಿದ್ದನ್ನು ಉಲ್ಲೇಖಿಸಿದ ಅವರು, ಜಾತಿ ಗಣತಿ ಕುರಿತ ಬೇಡಿಕೆಯಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಬಿಜೆಪಿ ಇಂಥ ತಂತ್ರಗಾರಿಕೆಯಲ್ಲಿ ತೊಡಗಿದೆ. 'ಒಂದು ರಾಷ್ಟ್ರ, ಒಂದೇ ಚುನಾವಣೆ' ಚಿಂತನೆಯೂ ಜನರ ಗಮನ ಬೇರೆಡೆ ಸೆಳೆಯುವ ಕಾರ್ಯತಂತ್ರವೇ ಆಗಿದೆ' ಎಂದು ಹೇಳಿದರು.

'ಭಾರತದ ನಿಜವಾದ ಸಮಸ್ಯೆಗಳೆಂದರೆ ಆಸ್ತಿಯ ಕ್ರೋಢೀಕರಣ, ಆಸ್ತಿಯಲ್ಲಿನ ಅಸಮಾನತೆ, ನಿರುದ್ಯೋಗ ಸಮಸ್ಯೆ, ಕೆಲವು ಜಾತಿಗಳು, ಇತರೆ ಹಿಂದುಳಿದ ವರ್ಗ ಮತ್ತು ಬುಡಕಟ್ಟು ಜನರೆಡೆಗಿನ ದೊಡ್ಡ ಮಟ್ಟದ ತಾರತಮ್ಯ ಮತ್ತು ಬೆಲೆ ಏರಿಕೆ ವಿಷಯಗಳಾಗಿವೆ' ಎಂದು ಹೇಳಿದರು.

'ಆದರೆ, ಈ ವಿಷಯಗಳ ಆಧಾರದಲ್ಲಿ ಬಿಜೆಪಿಯು ಚುನಾವಣೆಯನ್ನು ಎದುರಿಸಲಾಗದು. ಹಾಗಾಗಿ ಬಿಧೂಡಿ ಹೇಳಿಕೆ, ಇಂಡಿಯಾ ಹೆಸರು ಬದಲಿಸೋಣ ಎಂಬ ಚಿಂತನೆಗಳು ಬರಲಿವೆ. ಇವು, ಕಾರ್ಯತಂತ್ರ. ನಮಗೆ ಗೊತ್ತಿದೆ, ಅರ್ಥವಾಗಿದೆ. ಇದಕ್ಕೆ ಅವಕಾಶ ನೀಡೆವು' ಎಂದರು.

'ಜಾತಿ ಗಣತಿಯು ಈಗ ಆಗಬೇಕಾಗಿರುವ ಮೂಲಭೂತ ಅಗತ್ಯ. ಆದರೆ, ಇದರ ಚರ್ಚೆ ಬಿಜೆಪಿಯವರಿಗೆ ಅಗತ್ಯವಿಲ್ಲ. ಹೀಗಾಗಿಯೇ ಬಿಧೂಡಿ, ನಂತರ ನಿಶಿಕಾಂತ್ ದುಬೆ ದಿಢೀರನೆ ಹೇಳಿಕೆ ನೀಡುತ್ತಾರೆ. ಜಾತಿ ಗಣತಿ ಚರ್ಚೆ ಮರೆಸಲು ಯತ್ನಿಸುತ್ತಾರೆ' ಎಂದು ವ್ಯಾಖ್ಯಾನಿಸಿದರು.

'ಮಹಿಳಾ ಮೀಸಲು ಮಸೂದೆಯನ್ನು ನಾಳೆಯೇ ಜಾರಿಗೊಳಿಸಬಹುದು' ಎಂದು ಪ್ರತಿಪಾದಿಸಿದ ರಾಹುಲ್ ಗಾಂಧಿ, 'ಮಸೂದೆಗೂ ಜಾತಿ ಗಣತಿಗೂ ಹಾಗೂ ಮಸೂದೆ ಅಥವಾ ಕ್ಷೇತ್ರ ಪುನರ್ವಿಂಗಡಣೆಗೂ ಯಾವುದೇ ಸಂಬಂಧವಿಲ್ಲ. ಮಹಿಳಾ ಮೀಸಲು ಮಸೂದೆಯು 10 ವರ್ಷದ ನಂತರ ಜಾರಿಯಾಗುತ್ತದೆ ಎಂದು ಸರ್ಕಾರ ಹೇಳುತ್ತಿದೆ. ಈಗಲೇ ಮಾಡಿ ಎಂಬುದು ಕಾಂಗ್ರೆಸ್ ಬೇಡಿಕೆ' ಎಂದರು.

ಮೃತ್ಯುಂಜಯ ಮರು ಆಯ್ಕೆ



ಬೆಂಗಳೂರು: ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಸ್ಥಾನಕ್ಕೆ ಗಾಯಕ, ಸಂಗೀತ ನಿರ್ದೇಶಕ ಮೃತ್ಯುಂಜಯ ದೊಡ್ಡವಾಡ ಮರು ಆಯ್ಕೆಯಾಗಿದ್ದಾರೆ.

ಒಕ್ಕೂಟದ ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ನಡೆದಿದೆ. ಉಪಾಧ್ಯಕ್ಷರಾಗಿ ಬಾಗೂರು ಮಾರ್ಕಂಡೇಯ, ಗೌರವಾಧ್ಯಕ್ಷರಾಗಿ ಆನಂದ ಮಾದಲಗೆರೆ, ಪ್ರಧಾನ ಕಾರ್ಯದರ್ಶಿಯಾಗಿ ಟಿ.ರಾಜಾರಾಂ, ಸಹ ಕಾರ್ಯದರ್ಶಿಗಳಾಗಿ ಇಂಚರ ಪ್ರವೀಣ್ ಕುಮಾರ್ ಹಾಗೂ ಉಷಾ ಉಮೇಶ್, ಕೋಶಾಧ್ಯಕ್ಷರಾಗಿ ಅನುರಾಗ ಗದ್ದಿ, ಸದಸ್ಯರಾಗಿ ಶ್ರೀಧರ್ ಅಯ್ಯರ್, ಗಣೇಶ ದೇಸಾಯಿ, ಮಂಗಳಾ ರವಿ, ಸುಪ್ರಿಯರಘುನಂದನ್, ಎನ್.ಆರ್. ಮಹಾಂತ ರೆಡ್ಡಿ, ಮಲ್ಲಿಕಾರ್ಜುನ ಕೆಂಕೆರೆ, ವೆಂಕಟೇಶ ಆಲ್ಕೋಡ್, ರಮ್ಯ ಸೂರಜ್ ಆಯ್ಕೆಯಾಗಿದ್ದಾರೆ.

ಮಸೀದಿ ಮೇಲೆ ಭಗವಾಧ್ವಜ ನಾಲ್ವರು ಯುವಕರ ಬಂಧನ

ಪ್ರಜಾವಾಣಿ ವಾರ್ತೆ

ಬೀದರ್: ಬಸವಕಲ್ಯಾಣ ತಾಲ್ಲೂಕಿನ ಧನ್ನೂರಾ (ಕೆ) ಗ್ರಾಮದ ಜಾಮಾ ಮಸೀದಿ ಮೇಲೆ ಭಗವಾ ಧ್ವಜ ಹಾರಿಸಿದ ಆರೋಪದ ಮೇರೆಗೆ ಗ್ರಾಮದ ನಾಲ್ಕು ಜನ ಲಿಂಗಾಯತ ಸಮುದಾಯದ ಯುವಕರನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಗ್ರಾಮದ ವೀರೇಶ ಶಿವಕುಮಾರ ಸೂರ್ಯ (20), ಕಲ್ಯಾಣಿ ರಾಜಕುಮಾರ ಸೂರ್ಯ (20), ಸುಶೀಲ ಶಿವಕುಮಾರ ಬಿರಾದಾರ (19) ಹಾಗೂ ಅಭಿಷೇಕ ಚಂದ್ರಕಾಂತ (19) ಬಂಧಿತರು.

'ಸೆ. 20ರಂದು ರಾತ್ರಿ ಧನ್ನೂರಾ ಗ್ರಾಮದ ನಾಲ್ಕು ಜನ ಯುವಕರು ಮದ್ಯ ಕುಡಿದು, ಅದೇ ಗ್ರಾಮದ ಹನುಮಾನ್ ದೇವಸ್ಥಾನದ ಮೇಲಿನ ಭಗವಾ ಧ್ವಜ ತೆಗೆದು, ಜಾಮಾ ಮಸೀದಿ ಮೇಲೆ ಕಟ್ಟಿದ್ದಾರೆ. ಮರುದಿನ ಮಸೀದಿಯ ಚಾಂದಸಾಬ್ ಸಲೀಂ ಸಾಬ್ ಪಠಾಣ ಎಂಬವರು ಕೊಟ್ಟ ದೂರಿನ ಮೇರೆಗೆ ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಸೆ. 21ರಂದು ಪ್ರಕರಣ ದಾಖಲಿಸಲಾಗಿತ್ತು. ತನಿಖೆ ನಡೆಸಿ, ನಾಲ್ವರನ್ನು ಬಂಧಿಸಲಾಗಿದ್ದು, ಅಶಾಂತಿ ಉಂಟು ಮಾಡುವುದಕ್ಕಾಗಿಯೇ ದುಷ್ಕೃತ್ಯ ಎಸಗಿರುವುದಾಗಿ ನಾಲ್ವರು ತಪ್ಪೊಪ್ಪಿಕೊಂಡಿದ್ದಾರೆ. ಗ್ರಾಮದಲ್ಲಿ ಶಾಂತಿ ಸಭೆ ನಡೆಸಲಾಗಿದ್ದು, ಶಾಂತಿ ಕಾಪಾಡಲು ಗ್ರಾಮಸ್ಥರು ಸಂಪೂರ್ಣ ಸಹಕಾರ ಕೊಟ್ಟಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್. 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.



ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಧನ್ನೂರಾ (ಕೆ) ಗ್ರಾಮದ ಜಾಮಾ ಮಸೀದಿ ಮೇಲೆ ಭಗವಾ ಧ್ವಜ ಹಾರಿಸಲಾಗಿತ್ತು

ಹಿಂದಿನ ಸರ್ಕಾರಗಳು ರೈಲ್ವೆ ಅಭಿವೃದ್ಧಿ ಕಡೆಗಣಿಸಿದ್ದವು —ಪ್ರಧಾನಿ ಮೋದಿ ಟೀಕೆ

ವಂದೇ ಭಾರತ್‌ನ 9 ರೈಲುಗಳಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ರೈಲ್ವೆ ಸಚಿವಾಲಯವನ್ನು ಹಿಂದಿನ ಸರ್ಕಾರಗಳು ಕಡೆಗಣಿಸಿದ್ದವು. ರೈಲ್ವೆ ಮೂಲಸೌಲಭ್ಯ ಅಭಿವೃದ್ಧಿಗೆ ಈಗ ಸರ್ಕಾರ ನೀಡಿರುವ ವೇಗ ಮತ್ತು ಆದ್ಯತೆಯು 140 ಕೋಟಿ ಭಾರತೀಯರ ಆಶೋತ್ತರಗಳಿಗೆ ಪೂರಕವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ದೇಶದ 11 ವಿವಿಧ ರಾಜ್ಯಗಳಲ್ಲಿ ಇರುವ ಧಾರ್ಮಿಕ ಮತ್ತು ಪ್ರವಾಸಿ ತಾಣಗಳಿಗೆ ಸಂಪರ್ಕ ಕಲ್ಪಿಸುವ ಉದ್ದೇಶದ 9 ನೂತನ 'ವಂದೇ ಭಾರತ್' ರೈಲುಗಳ ಸೇವೆಗೆ ವರ್ಚುಯಲ್ ಸ್ವರೂಪದಲ್ಲಿ ಭಾನುವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಹಿಂದಿನ ಸರ್ಕಾರಗಳು ಭಾರತೀಯ ರೈಲ್ವೆಯ ಆಧುನೀಕರಣಕ್ಕೆ ಹೆಚ್ಚು ಗಮನಹರಿಸಲಿಲ್ಲ ಎಂಬುದು ದುರದೃಷ್ಟಕರ. ಈಗ ಕೇಂದ್ರ ಸರ್ಕಾರವು ಭಾರತೀಯ ರೈಲ್ವೆಗೆ ಹೊಸ ರೂಪ ನೀಡಲು ಕಾರ್ಯತತ್ಪರವಾಗಿದೆ' ಎಂದು ಹೇಳಿದರು.



ಪಟ್ನಾ ಮತ್ತು ಹೌರಾ ನಡುವೆ ಭಾನುವಾರ ವಂದೇ ಭಾರತ್ ರೈಲು ಸೇವೆಗೆ ಚಾಲನೆ ನೀಡುವ ಮೊದಲು ಪಟ್ನಾದ ರೈಲು ನಿಲ್ದಾಣದಲ್ಲಿ ಅರ್ಚಕರು ಪೂಜೆ ಸಲ್ಲಿಸಿದರು —ಪಿಟಿಐ ಚಿತ್ರ

'ಈವರೆಗೂ ಸುಮಾರು 1.1 ಕೋಟಿ ಪ್ರಯಾಣಿಕರು ವಂದೇ ಭಾರತ್ ರೈಲು ಸೇವೆಯ ಸದುಪಯೋಗವನ್ನು ಪಡೆದಿದ್ದಾರೆ. ಇದು, ವಂದೇ ಭಾರತ್ ರೈಲುಗಳ ಸೇವೆಯ ಜನಪ್ರಿಯತೆಯನ್ನು ತೋರಿಸುತ್ತದೆ' ಎಂದು ಪ್ರಧಾನಿ ತಿಳಿಸಿದರು.

'ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್' ಚಿಂತನೆಯೊಂದಿಗೆ ನಾವು ಮುನ್ನಡೆಯಬೇಕಾಗಿದೆ. ಭಾರತೀಯ ರೈಲ್ವೆಯ ಪ್ರತಿಯೊಂದು ಹಂತದಲ್ಲಿ ಆಗುತ್ತಿರುವ ಬದಲಾವಣೆಯು ಭಾರತವೂ ಅಭಿವೃದ್ಧಿ ರಾಷ್ಟ್ರವಾಗುವಂತೆ ಮತ್ತೊಂದು ಹೆಜ್ಜೆ ಇಟ್ಟಿರುವುದನ್ನು ಪುಷ್ಟೀಕರಿಸುತ್ತದೆ. ಅಭಿವೃದ್ಧಿ ರಾಷ್ಟ್ರ ಗುರಿ ಸಾಧನೆಗೆ ಎಲ್ಲ ರಾಜ್ಯಗಳ ಅಭಿವೃದ್ಧಿಯು ಅಗತ್ಯ ಎಂದೂ ಹೇಳಿದರು.

ವಂದೇ ಭಾರತ್‌ನ 9 ನೂತನ ರೈಲುಗಳ ಮಾರ್ಗ: ಹೈದರಾಬಾದ್‌ನ ಕಾಚಿಗುಡ–ಬೆಂಗಳೂರಿನ ಯಶವಂತಪುರ, ಚೆನ್ನೈ–ತಿರುನೆಲ್ವೇಲಿ, ವಿಜಯವಾಡ–ಚೆನ್ನೈ, ಪಟ್ನಾ–ಹೌರಾ, ರೂರ್ಕೆಲಾ–ಪುರಿ, ಕಾಸರಗೋಡು–ಆಲಪ್ಪುಳ–ತಿರುವನಂತಪುರ, ಜೈಪುರ–ಉದಯಪುರ, ರಾಂಚಿ–ಟಾಟಾನಗರ–ಕೋಲ್ಕತ್ತ, ಜಾಮ್‌ನಗರ–ರಾಜಕೋಟ್ ಮತ್ತು ಅಹಮದಾಬಾದ್.

ಈ ನೂತನ ರೈಲು ಸೇವೆಯು ರಾಜಸ್ಥಾನ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ, ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ, ಕೇರಳ, ಜಾರ್ಖಂಡ್ ಮತ್ತು ಗುಜರಾತ್ ರಾಜ್ಯಗಳಿಗೆ ತ್ವರಿತಗತಿಯ ಸಂಪರ್ಕ ಸೌಲಭ್ಯವನ್ನು ಕಲ್ಪಿಸಲಿವೆ.

ಸಂಖ್ಯೆ 34ಕ್ಕೆ ಏರಿಕೆ


ನವದೆಹಲಿ: ದೇಶದಲ್ಲಿ ಇದುವರೆಗೆ 25 ವಂದೇ ಭಾರತ್ ರೈಲುಗಳು ಕಾರ್ಯಾಚರಣೆ ನಡೆಸುತ್ತಿದ್ದವು. ಈಗ 9 ರೈಲುಗಳ ಆರಂಭದೊಂದಿಗೆ ಒಟ್ಟಾರೆ 34 ವಂದೇ ಭಾರತ್ ರೈಲುಗಳ ಕಾರ್ಯಾಚರಣೆ ಆರಂಭವಾದಂತಾಗಿದೆ.

ನವದೆಹಲಿ–ವಾರಾಣಸಿ ನಡುವೆ ಮೊದಲ ವಂದೇ ಭಾರತ್ ರೈಲು ಸೇವೆಗೆ 2019ರ ಫೆ. 15ರಂದು ಪ್ರಧಾನಿ ಮೋದಿ ಹಸಿರುನಿಶಾನೆ ತೋರಿಸಿದ್ದರು.

ಭಾನುವಾರ ಆರಂಭಿಸಲಾದ ನೂತನ ರೈಲುಗಳಲ್ಲಿ ಪ್ರಯಾಣಿಕರಿಗೆ ಅನೇಕ ಹೊಸ ಸೌಲಭ್ಯ ಕಲ್ಪಿಸಲಾಗಿದೆ. ಸೀಟುಗಳ ಕೆಳಗೆ ಮೊಬೈಲ್ ಫೋನ್ ಚಾರ್ಜಿಂಗ್ ಸೌಲಭ್ಯ, ಸೀಟುಗಳ ಕೆಳಗೆ ಕಾಲು ಇಡಲು ಹೆಚ್ಚಿನ ಸ್ಥಳಾವಕಾಶ, ಆಳ, ವಿಶಾಲವಾದ ವಾಷ್ ಬೇಸಿನ್ ಸೌಲಭ್ಯ, ಶೌಚಾಲಯದಲ್ಲಿ ಹೆಚ್ಚಿನ ಬೆಳಕು ನೀಡುವ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ ಎಂದು ರೈಲ್ವೆ ಇಲಾಖೆಯು ತಿಳಿಸಿದೆ.

ನಿಧನ ವಾರ್ತೆ

ಮಾಜಿ ಶಾಸಕ ಬಿ.ಎಸ್. ವಿಶ್ವನಾಥ್



ತೀರ್ಥಹಳ್ಳಿ (ಶಿವಮೊಗ್ಗ): ಹಿರಿಯ ಸಹಕಾರಿ ಧುರೀಣ, ವಿಧಾನ ಪರಿಷತ್‌ನ ಮಾಜಿ ಸದಸ್ಯ ಬಿ.ಎಸ್. ವಿಶ್ವನಾಥ್ (89) ವಯೋಸಹಜ ಅನಾರೋಗ್ಯದಿಂದ ಭಾನುವಾರ ಬೆಂಗಳೂರಿನಲ್ಲಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ತೀರ್ಥಹಳ್ಳಿ ತಾಲ್ಲೂಕಿನ ಕಟ್ಟೆಹಕ್ಕಲು ಸಮೀಪದ ಬಸರವಳ್ಳಿ ಗ್ರಾಮದ ಬಿ.ಎಸ್. ವಿಶ್ವನಾಥ್ ರೈತ ಮುಖಂಡರಾಗಿ ಗುರುತಿಸಿಕೊಂಡಿದ್ದರು. ಸಹಕಾರ ಕ್ಷೇತ್ರದಲ್ಲಿ ಐದು ದಶಕ ಸಕ್ರಿಯರಾಗಿದ್ದರು. ಎರಡು ಬಾರಿ (1970 ಹಾಗೂ 1976) ಮೇಲ್ಮನೆ ಸದಸ್ಯರಾಗಿದ್ದರು. ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡರ ವಿರುದ್ಧ ತೀರ್ಥಹಳ್ಳಿ ಕ್ಷೇತ್ರದಿಂದ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದರು.

ಬೆಂಗಳೂರಿನ ಬನಶಂಕರಿ ಚಿತಾಗಾರದಲ್ಲಿ ಸೋಮವಾರ ಮಧ್ಯಾಹ್ನ 2.30ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ಹೇಳಿವೆ.



ದಾವಣಗೆರೆಯಲ್ಲಿ ಭಾನುವಾರ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ 2023ನೇ ರಾಜ್ಯ ಕಾರ್ಯಕಾರಿಣಿಯನ್ನು ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ ಉದ್ಘಾಟಿಸಿದರು.

ಮೀಸಲಾತಿ: ಹೋರಾಟಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಆರ್ಥಿಕವಾಗಿ ದುರ್ಬಲ ಸಮುದಾಯಗಳಿಗೆ (ಇಡಬ್ಲ್ಯುಎಸ್) ಶೇ 10ರಷ್ಟು ಮೀಸಲಾತಿ ನೀಡುವ ಕೇಂದ್ರದ ಕಾಯ್ದೆಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಿಲ್ಲ. ಈ ಕುರಿತ ಮನವಿಗೂ ಮನ್ನಣೆ ನೀಡಿಲ್ಲ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಕ್ಷೇಪಿಸಿದೆ.

ಸರ್ಕಾರ ಮನವಿಗೆ ಸ್ಪಂದಿಸದ ಹಿನ್ನೆಲೆಯಲ್ಲಿ ಕಾನೂನು ಹೋರಾಟ ನಡೆಸಲು, ಕೋರ್ಟ್ ಮೊರೆ ಹೋಗಲು ಇಲ್ಲಿನ ಶಂಕರ ಸಮುದಾಯ ಭವನದಲ್ಲಿ ಭಾನುವಾರ ನಡೆದ 2023ನೇ ಸಾಲಿನ ರಾಜ್ಯ ಕಾರ್ಯಕಾರಿಣಿ ತೀರ್ಮಾನಿಸಿತು.

ಇದು, ಸೇರಿದಂತೆ ಒಟ್ಟು ಏಳು ನಿರ್ಣಯಗಳನ್ನು ಕಾರ್ಯಕಾರಿಣಿ ಕೈಗೊಂಡಿತು. ಮಹಿಳಾ ಮೀಸಲಾತಿ ಮಸೂದೆಯನ್ನು ಕಾರ್ಯಕಾರಿಣಿ ಸ್ವಾಗತಿಸಿದ್ದು, ಮಧ್ಯಪ್ರದೇಶದ ಓಂಕಾರೇಶ್ವರ ಬಳಿ ಶಂಕರ ಭಗವತ್ಪಾದರ ಬೃಹತ್ ಮೂರ್ತಿ ಸ್ಥಾಪನೆ ಸನಾತನ ಧರ್ಮೀಯರಿಗೆ ಅತ್ಯಂತ ಸಂತಸವನ್ನುಂಟು ಮಾಡಿದೆ ಎಂದು ಅಭಿಪ್ರಾಯಪಟ್ಟಿತು..

2024ರ ಜನವರಿಯಲ್ಲಿ ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆ, ಶ್ರೀರಾಮಚಂದ್ರನ ಪ್ರತಿಷ್ಠಾಪನೆ ಜರುಗಲಿದೆ. ಆ ದಿನ ರಾಜ್ಯದ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಶ್ರೀರಾಮತಾರಕ ನಾಮ ಯಜ್ಞವನ್ನು ನಡೆಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ಸನಾತನ ಧರ್ಮದ ಅವಹೇಳನ, ಬ್ರಾಹ್ಮಣರ ವಿರುದ್ಧ ಅವ್ಯಾಹತವಾಗಿ ನಡೆಯುತ್ತಿರುವ ಟೀಕೆಗಳನ್ನು ಮಹಾಸಭಾ ಖಂಡಿಸಿತು. ಸಮುದಾಯದ ಮಹಿಳೆಯರನ್ನು ಸಂಘಟಿಸಲು 2024ರ ಜನವರಿ 6, 7ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ಮಹಿಳಾ ಸಮಾವೇಶ ನಡೆಸಲು ನಿರ್ಧರಿಸಿತು.

ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಕಾರ್ಯಕಾರಿಣಿಯನ್ನು ಉದ್ಘಾಟಿಸಿದರು. ಪದಾಧಿಕಾರಿಗಳಾದ ಡಾ. ಶಶಿಕಾಂತ್, ಗೋಪಾಲ್ ದಾಸ್, ಬಾಲಕೃಷ್ಣ ವೈದ್ಯ, ಸತ್ಯನಾರಾಯಣ್ ರಾವ್, ನಿರಂಜನ್ ಗುರುಪ್ರಸಾದ್, ಉಮಾ ಕಾಂತ್ ದೀಕ್ಷಿತ್, ಡಾ.ಎಸ್. ಆರ್. ಹೆಗಡೆ, ಡಿ.ಶೇಷಾಚಲ, ಉಮಾಕಾಂತ್ ಜೋಯ್ಸ್, ಉಮೇಶ್ ಕುಲಕರ್ಣಿ, ರಾಮಚಂದ್ರರಾವ್ ಇದ್ದರು

ರಜಾ ಸೌಲಭ್ಯ ರದ್ದುಪಡಿಸಿದ ವಿಕಲಚೇತನ ಇಲಾಖೆ

ವಿಶೇಷ ಶಾಲೆಗಳಿಗಿಲ್ಲ ದಸರಾ, ಬೇಸಿಗೆ ರಜೆ!

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಶಿಶುಕೇಂದ್ರಿತ ಯೋಜನೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳ ಶಿಕ್ಷಕರು, ವಿದ್ಯಾರ್ಥಿಗಳು ಇನ್ನು ಮುಂದೆ ದಸರಾ ಹಾಗೂ ಬೇಸಿಗೆ ರಜೆಗಳ ಸೌಲಭ್ಯದಿಂದ ವಂಚಿತರಾಗಲಿದ್ದಾರೆ.

ಶಾಲಾ ಶಿಕ್ಷಣ ಇಲಾಖೆಯ ಇತರೆ ಶಾಲೆಗಳಂತೆ ರಾಜ್ಯದಲ್ಲಿನ ಸರ್ಕಾರಿ, ಅನುದಾನಿತ ಹಾಗೂ ಶಿಶುಕೇಂದ್ರಿತ ಯೋಜನೆಯಡಿ ಸ್ವಯಂಸೇವಾ ಸಂಸ್ಥೆಗಳ ಸಹಯೋಗದಲ್ಲಿ ನಡೆಯುತ್ತಿರುವ ಬುದ್ಧಿಮಾಂದ್ಯ, ದೃಷ್ಟಿದೋಷ, ಶ್ರವಣದೋಷವಿರುವ ಮಕ್ಕಳ ವಿಶೇಷ ಶಾಲೆಗಳಿಗೂ ದಸರಾ ಹಾಗೂ ಬೇಸಿಗೆ ರಜೆಗಳನ್ನು ನೀಡಲಾಗುತ್ತಿತ್ತು. ಈ ಸೌಲಭ್ಯವನ್ನು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಅನ್ವಯವಾಗುವಂತೆ ರದ್ದು ಮಾಡಿ ಅಂಗವಿಕಲ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ ಹೊರಡಿಸಿರುವ ಸುತ್ತೋಲೆಗೆ ಶಿಕ್ಷಕರ ವಲಯದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ.

2010ಕ್ಕೂ ಮೊದಲು ರಾಜ್ಯದಲ್ಲಿ ಸರ್ಕಾರಿ ಹಾಗೂ ಅನುದಾನಿತ 20 ವಿಶೇಷ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು. ರಾಜ್ಯ ಸರ್ಕಾರ 2010ರಲ್ಲಿ ಶಿಶುಕೇಂದ್ರಿತ ಯೋಜನೆಯನ್ನು ಜಾರಿಗೊಳಿಸಿತು. ಬಾಲ್ಯದಿಂದಲೇ ದೈಹಿಕ ಹಾಗೂ ಮಾನಸಿಕ ನ್ಯೂನತೆಗೆ ಒಳಗಾಗಿರುವ ಮಕ್ಕಳಿಗೆ ವಿಶೇಷ ಶಿಕ್ಷಣ ಕಲ್ಪಿಸಲು ಖಾಸಗಿ ಸಹಭಾಗಿತ್ವದಲ್ಲಿ ಹೊಸದಾಗಿ 144 ಶಾಲೆಗಳನ್ನು ಈ ಯೋಜನೆಯಡಿ ಆರಂಭಿಸಲಾಗಿತ್ತು.

ವಿಶೇಷ ಶಾಲೆಗಳಿಗೆ ನೀಡುವ ಅನುದಾನ, ನಿರ್ವಹಣೆ, ಉಸ್ತುವಾರಿಯ ಹೊಣೆಗಾರಿಕೆ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಸೇರಿದೆ. ಪಠ್ಯಕ್ರಮ, ಪರೀಕ್ಷೆ, ಶೈಕ್ಷಣಿಕ ಅವಧಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವೇಳಾಪಟ್ಟಿಯಂತೆ ನಡೆಯುತ್ತಿದ್ದವು. ಶಾಲಾ ಶಿಕ್ಷಣ ಇಲಾಖೆಯ ಇತರೆ ಶಾಲೆಗಳ ವೇಳಾಪಟ್ಟಿಯಂತೆ ರಜೆಗಳನ್ನು ನೀಡಲಾಗುತ್ತಿತ್ತು.

'ಸರ್ಕಾರ ಹಾಗೂ ಸ್ವಯಂಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿರುವ ವಿಶೇಷ ಶಾಲೆಗಳು ಶಾಲಾ ಶಿಕ್ಷಣ ಇಲಾಖೆಯ ಪಠ್ಯಕ್ರಮವನ್ನು ಅನುಸರಿಸಿದರೂ 2010ರಲ್ಲಿ ಸರ್ಕಾರ ಹೊರಡಿಸಿದ್ದ ಆದೇಶದ ಅನ್ವಯ ದಸರಾ ಹಾಗೂ ಬೇಸಿಗೆ ರಜೆಯನ್ನು ನಿಗದಿ ಮಾಡಲು ಅವಕಾಶವಿಲ್ಲ. ಹಾಗಾಗಿ, ವರ್ಷದ 365 ದಿನಗಳೂ ಶಾಲೆಗಳು ಕಾರ್ಯನಿರ್ವಹಿಸಬೇಕು' ಎಂದು ಅಂಗವಿಕಲ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ ಹೇಳಿದೆ.

10 ತಿಂಗಳಿಗಷ್ಟೇ ಅನುದಾನ: ರಜೆಗಳನ್ನು ರದ್ದು ಮಾಡಿ ಸುತ್ತೋಲೆ ಹೊರಡಿಸಲಾಗಿದ್ದರೂ ಶಿಶುಕೇಂದ್ರಿತ ಯೋಜನೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳಿಗೆ ಸರ್ಕಾರ 10 ತಿಂಗಳಿಗಷ್ಟೇ ಅನುದಾನ ನೀಡುತ್ತಿದೆ. ಶ್ರವಣ ಹಾಗೂ ದೃಷ್ಟಿದೋಷವಿರುವ ಪ್ರತಿ ಮಗುವಿಗೆ ಮಾಸಿಕ ₹7,800 ಹಾಗೂ ಮಾನಸಿಕ ಅಸ್ವಸ್ಥ ಮಗುವಿಗೆ ₹11 ಸಾವಿರ ನಿಗದಿ ಮಾಡಲಾಗಿದೆ. ಈ ಹಣದಲ್ಲಿ ಮಕ್ಕಳ ವಸತಿ, ಸಮವಸ್ತ್ರ, ಪಠ್ಯಪುಸ್ತಕ, ಊಟ, ವೈದ್ಯಕೀಯ ಖರ್ಚು ಹಾಗೂ ವಿಶೇಷ ಶಿಕ್ಷಕರ ವೇತನವನ್ನೂ ಭರಿಸಬೇಕಿದೆ.

ಅಂಕಿ ಅಂಶ

- 06 ಸರ್ಕಾರಿ ಶಾಲೆಗಳು
- 14 ಅನುದಾನಿತ ಶಾಲೆಗಳು
- 144 ಶಿಶುಕೇಂದ್ರಿತ ಯೋಜನೆಯ ಶಾಲೆಗಳು
- 5,500 ವಿಶೇಷ ಶಿಕ್ಷಕರು
- 3,600 ಬೋಧಕೇತರ ಸಿಬ್ಬಂದಿ

ಸರ್ಕಾರದ ನಿರ್ದೇಶನದಂತೆ ಸುತ್ತೋಲೆ ಹೊರಡಿಸಲಾಗಿದೆ. ಸರ್ಕಾರಿ, ಅನುದಾನಿತ, ಸ್ವಯಂಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿರುವ ವಿಶೇಷ ಶಾಲೆಗಳು ಈ ನಿಯಮವನ್ನು ಪಾಲಿಸಬೇಕು

ಎನ್.ಸಿದ್ದೇಶ್ವರ್, ನಿರ್ದೇಶಕ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಸಾಮಾನ್ಯ ಮಕ್ಕಳಿಗಿಂತ ವಿಶೇಷ ಮಕ್ಕಳ ಕಲಿಕೆಗೆ ಹೆಚ್ಚಿನ ಶ್ರಮ ವ್ಯಯಿಸಬೇಕಿದೆ. ಅವರಿಗೆ ವಿಶ್ರಾಂತಿ ಬೇಡವೇ? ಹೀಗಾದರೆ ಪಾಠ ಮಾಡಲು ಯಾವ ಶಿಕ್ಷಕರು ಮನಸ್ಸು ಮಾಡುತ್ತಾರೆ?

ಕಾಂತಿ ಹರೀಶ್, ಅಧ್ಯಕ್ಷರು, ಕರ್ನಾಟಕ ರಾಜ್ಯ ವಿಶೇಷ ಶಿಕ್ಷಕರ ಸಂಘ

ಮೂರು ತಿಂಗಳಿಗೊಮ್ಮೆ ಅನುದಾನ ನೀಡಿದರೆ ಮಕ್ಕಳು ಹಾಗೂ ಶಿಕ್ಷಕರನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಸರ್ಕಾರ ಪ್ರತಿ ತಿಂಗಳೂ ಹಣ ಬಿಡುಗಡೆ ಮಾಡಬೇಕು

ಸಿ.ಎಂ.ಮುನಿರಾಜು, ಹಿರಿಯ ವೈದ್ಯಕೀಯ ಸಮಾಜಸೇವಕ


ವಿಶೇಷ ಶಿಕ್ಷಕರಿಗಿಲ್ಲ ಸೇವಾ ಭದ್ರತೆ

ವಿಶೇಷ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಹಂತದ ಶಿಕ್ಷಕರಿಗೆ ₹20 ಸಾವಿರ, ಪ್ರೌಢಶಾಲಾ ಹಂತದ ಶಿಕ್ಷಕರಿಗೆ ₹24 ಸಾವಿರ ಮಾಸಿಕ ಗೌರವಧನ ನೀಡಲಾಗುತ್ತಿದೆ. ಕಳೆದ ಸೆಪ್ಟೆಂಬರ್‌ವರೆಗೂ ₹13,500 ನೀಡಲಾಗುತ್ತಿತ್ತು. ಶಿಕ್ಷಕರ ಹೋರಾಟದ ನಂತರ ಹೆಚ್ಚಳ ಮಾಡಲಾಗಿದೆ. 13 ವರ್ಷಗಳಿಂದ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದರೂ ಅವರಿಗೆ ಸೇವಾ ಭದ್ರತೆ ಕಲ್ಪಿಸಿಲ್ಲ. ಮೂರು ತಿಂಗಳಿಗೊಮ್ಮೆ ಅನುದಾನ ಬಿಡುಗಡೆ ಮಾಡುತ್ತಿದ್ದು, ಪ್ರತಿ ತಿಂಗಳು ಸಂಬಳವಿಲ್ಲದೆ ಆರ್ಥಿಕ ಸಂಕಷ್ಟ ಅನುಭವಿಸುತ್ತಿದ್ದಾರೆ.

ಸೋಮವಾರ, ಸೆಪ್ಟೆಂಬರ್ 25, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 266 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ನೀರಿನ ಬವಣೆ ನೀಗಲು ಬೇಕು ದೂರಗಾಮಿ ಯೋಜನೆ
ಬಡ್ಡಿ ದರ ಯಥಾಸ್ಥಿತಿ ಸಾಧ್ಯತೆ 8
ಬಹಿರಂಗ ಹೇಳಿಕೆ ನೀಡದಂತೆ ತಾಕೀತು 4
ಕಾವೇರಿ ಹೋರಾಟ ಇನ್ನಷ್ಟು ಬಿರುಸು 4
ಭಾರತಕ್ಕೆ ಸರಣಿ ಕೈವಶ 9

ಹಳ್ಳಿ, ಪಟ್ಟಣ, ನಗರಗಳಲ್ಲಿ ಹೊಸ ಪರವಾನಗಿ • ಅಬಕಾರಿ ಇಲಾಖೆ ತಯಾರಿ

ಮತ್ತೆ ಸಾವಿರ ಮದ್ಯದಂಗಡಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಣ್ಣ ಗ್ರಾಮ ಪಂಚಾಯಿತಿಗಳು, ನಗರಗಳಲ್ಲಿನ ಸೂಪರ್ ಮಾರುಕಟ್ಟೆಗಳಲ್ಲಿ ಹೊಸ ಪರವಾನಗಿ ವಿತರಣೆ, ಬಳಕೆಯಲ್ಲಿ ಇಲ್ಲದ ಪರವಾನಗಿಗಳಿಗೆ ಮರುಜೀವ ನೀಡುವುದು ಸೇರಿದಂತೆ ರಾಜ್ಯದಲ್ಲಿ ಸಾವಿರಕ್ಕೂ ಹೆಚ್ಚು ಮದ್ಯದಂಗಡಿಗಳ ಆರಂಭಕ್ಕೆ ಅಬಕಾರಿ ಇಲಾಖೆ ಮುಂದಾಗಿದೆ.

ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ನಿಗದಿಪಡಿಸಿರುವ ಗುರಿಯನ್ನು ಮೀರಿ ವರಮಾನ ಸಂಗ್ರಹಕ್ಕೆ ಯೋಜನೆ ರೂಪಿಸಿರುವ ಅಬಕಾರಿ ಇಲಾಖೆ, ಮದ್ಯದಂಗಡಿಗಳೇ ಇಲ್ಲದ 600ಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕನಿಷ್ಠ ತಲಾ ಒಂದು ಮದ್ಯದಂಗಡಿಗೆ ಪರವಾನಗಿ ನೀಡಲು ಪ್ರಸ್ತಾವ ಸಿದ್ಧಪಡಿಸಿದೆ.

ಹೊಸ ಪ್ರಸ್ತಾವಗಳ ಕುರಿತು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರು ಇಲಾಖೆಯ ಅಧಿಕಾರಿಗಳ ಜತೆ ಪ್ರಾಥಮಿಕ ಹಂತದ ಸಭೆ ನಡೆಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸೆಪ್ಟೆಂಬರ್ 14ರಂದು ನಡೆದ ಅಬಕಾರಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿಷಯ ಪ್ರಸ್ತಾಪಿಸಲಾಗಿದೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳು ಹಾದು ಹೋಗಿರುವ ಪ್ರದೇಶಗಳು ಹಾಗೂ 5,000ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತಾರಾ ಹೋಟೆಲ್, ಹೋಟೆಲ್ ಮತ್ತು ಬೋರ್ಡಿಂಗ್‌ಗೆ ಮದ್ಯದಂಗಡಿ ಪರವಾನಗಿ ನೀಡುವುದಕ್ಕೆ ನಿರ್ಬಂಧವಿದೆ. ಅದನ್ನು ತೆಗೆದುಹಾಕಿ ಈ ಎಲ್ಲ ಪ್ರದೇಶಗಳಲ್ಲೂ ಮದ್ಯದಂಗಡಿ ಪರವಾನಗಿ ನೀಡುವ ಪ್ರಸ್ತಾವ ಅಬಕಾರಿ ಇಲಾಖೆಯ ಮುಂದಿದೆ.

ಸೂಪರ್ ಮಾರ್ಕೆಟ್‌ನಲ್ಲೂ ಮದ್ಯ: ಬಿಬಿಎಂಪಿ ವ್ಯಾಪ್ತಿ ಹಾಗೂ ಜಿಲ್ಲಾ ಕೇಂದ್ರಗಳ ವ್ಯಾಪ್ತಿಗಳಲ್ಲಿ ಸೂಪರ್ ಮಾರ್ಕೆಟ್ ಹಾಗೂ ಹೈಪರ್ ಮಾರುಕಟ್ಟೆಗಳಲ್ಲೂ ಮದ್ಯ ಮಾರಾಟಕ್ಕೆ ಅವಕಾಶ ನೀಡುವ ಪ್ರಸ್ತಾವ ಸಿದ್ಧಪಡಿಸಲಾಗಿದೆ. ಇದಕ್ಕಾಗಿ 11 ವರ್ಷಗಳ ಅವಧಿಗೆ ಸಿಎಲ್–2ಎ ಎಂಬ ಹೊಸ ವಿಧದ ಮದ್ಯದಂಗಡಿ ಪರವಾನಗಿ ನೀಡುವ ಯೋಜನೆ ರೂಪಿಸಲಾಗುತ್ತಿದೆ.

'ರಾಜ್ಯದ ಸೂಪರ್ ಮಾರುಕಟ್ಟೆಗಳು, ಹೈಪರ್ ಮಾರುಕಟ್ಟೆಗಳ ಪೈಕಿ ಶೇಕಡ 25ರಷ್ಟು ಕಡೆ ಮದ್ಯದಂಗಡಿಗಳು ಈಗಾಗಲೇ ಇವೆ. ಚಾಲ್ತಿಯಲ್ಲಿರುವ ಪರವಾನಗಿಗಳನ್ನು ದುಬಾರಿ ಬೆಲೆಗೆ ಖರೀದಿಸಿ ಅಲ್ಲಿ ಮದ್ಯದಂಗಡಿ ತೆರೆಯಲಾಗಿದೆ. ದುಬಾರಿ ಬೆಲೆಗೆ ಮದ್ಯದಂಗಡಿ ಪರವಾನಗಿ ಮಾರಾಟ ಮಾಡುವುದನ್ನು ನಿಯಂತ್ರಿಸಲು ನೇರವಾಗಿ ಸೂಪರ್ ಮಾರುಕಟ್ಟೆ ಮತ್ತು ಹೈಪರ್ ಮಾರುಕಟ್ಟೆಗಳಿಗೆ ಪರವಾನಗಿ ನೀಡುವ ಪ್ರಸ್ತಾವ ಸಿದ್ಧಪಡಿಸಲಾಗಿದೆ' ಎನ್ನುತ್ತಾರೆ ಅಬಕಾರಿ ಇಲಾಖೆಯ ಹಿರಿಯ ಅಧಿಕಾರಿಗಳು.

4ನೇ ಪುಟ ನೋಡಿ



ಹೊಸ ಪ್ರಸ್ತಾವಗಳು

379
ಮದ್ಯದಂಗಡಿ ಪರವಾನಗಿ ಹರಾಜು

200
ನವೀಕರಣಗೊಳ್ಳದ ಪರವಾನಗಿಗಳಿಗೆ ಮರುಜೀವ

600
ಸಣ್ಣ ಗ್ರಾಮ ಪಂಚಾಯಿತಿಗಳಲ್ಲಿ ಮದ್ಯದಂಗಡಿ ಪರವಾನಗಿ

ಮದ್ಯದಂಗಡಿಗಳ ಸಂಖ್ಯೆ

ಮಾದರಿ	ಸಂಖ್ಯೆ
ಸಿಎಲ್–2	3,986
ಸಿಎಲ್–4	279
ಸಿಎಲ್–7	2,382
ಸಿಎಲ್–9	3,634
ಸಿಎಲ್–11	1,041
ಆರ್‌ವಿಬಿ	745
ವೈನ್ ಟಾವರ್ನ್	198
ವೈನ್ ಬುಟಿಕ್	94
ಮೈಕ್ರೋ ಬ್ರೀವರಿ	69
ಒಟ್ಟು	12,614

ಗ್ರಾಹಕರ ಹಿತವೇ ನಮ್ಮ ಗುರಿ: ತಿಮ್ಮಾಪುರ



'ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟವಾಗುತ್ತಿದೆ. ಇದರಿಂದ ಗ್ರಾಹಕರಿಗೆ ಹೊರೆಯಾಗುತ್ತಿದೆ. ಅದನ್ನು ತಪ್ಪಿಸುವ ಉದ್ದೇಶದಿಂದ ಎಲ್ಲ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲೂ ಮದ್ಯದಂಗಡಿಗಳಿಗೆ ಪರವಾನಗಿ ನೀಡಲು ಯೋಚಿಸಿದ್ದೇವೆ' ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ 'ಪ್ರಜಾವಾಣಿ'ಗೆ ತಿಳಿಸಿದರು.

'ಹೆದ್ದಾರಿಗಳು, ಜನಸಂಖ್ಯೆ ಮತ್ತಿತರ ಕಾರಣಗಳಿಂದ ಕೆಲವು ಪ್ರದೇಶಗಳಲ್ಲಿ ಮದ್ಯದಂಗಡಿಗಳಿಗೆ ಪರವಾನಗಿ ನೀಡಿಲ್ಲ. ಆದರೆ, ಅಂತಹ ಎಲ್ಲ ಕಡೆಗಳಲ್ಲೂ ಅನಧಿಕೃತವಾಗಿ ಮದ್ಯ ಮಾರಾಟವಾಗುತ್ತಿದೆ. ಜನ ಸಾಮಾನ್ಯರು ನಿಗದಿತ ದರಕ್ಕಿಂತಲೂ ಹೆಚ್ಚು ಹಣ ನೀಡಿ ಮದ್ಯ ಖರೀದಿಸುವುದನ್ನು ತಪ್ಪಿಸಲು ಮದ್ಯದಂಗಡಿಗಳ ಸಂಖ್ಯೆ ಹೆಚ್ಚಿಸುವುದು ಅನಿವಾರ್ಯ' ಎಂದು ತಿಳಿಸಿದರು.

ಮಂಜೂರಾತಿ ನೀಡಿದ್ದರೂ ಆರಂಭವಾಗದ ನೂರಾರು ಅಂಗಡಿಗಳಿವೆ. ನವೀಕರಣಗೊಳ್ಳದ ಪರವಾನಗಿಗಳೂ ಇವೆ. ಅವೆಲ್ಲವನ್ನೂ ಮದ್ಯ ಮಾರಾಟದಲ್ಲಿನ ಅಸಮತೋಲನ ನೀಗಿಸಲು ಬಳಸಿಕೊಳ್ಳಲಾಗುವುದು ಎಂದರು.

'ಮದ್ಯಭಾಗ್ಯ': ಎಚ್‌ಡಿಕೆ ಟೀಕೆ


ಎಚ್‌.ಡಿ. ಕುಮಾರಸ್ವಾಮಿ

ಹಳ್ಳಿಗಳಲ್ಲೂ ಮದ್ಯ ಮಾರಾಟಕ್ಕೆ ಅವಕಾಶ ನೀಡುವ ಮೂಲಕ ರಾಜ್ಯ ಸರ್ಕಾರ ಕರ್ನಾಟಕವನ್ನು ಕುಡುಕರ ತೋಟವಾಗಿ ಪರಿವರ್ತಿಸಲು ಹೊರಟಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

4ನೇ ಪುಟ ನೋಡಿ

'ರಾಜಕೀಯ ಲಾಭಕ್ಕಾಗಿ'


ಸುರೇಶ್ ಕುಮಾರ್

'ಅಭಿವೃದ್ಧಿ ಯೋಜನೆಗಳಿಗೆ ಹಣವಿಲ್ಲ ಎನ್ನುತ್ತಿರುವ ರಾಜ್ಯ ಸರ್ಕಾರ, ತನ್ನ ರಾಜಕೀಯ ಲಾಭದ ಗ್ಯಾರಂಟಿ ಯೋಜನೆಗಳಿಗೆ ಸಂಪನ್ಮೂಲ ಸಂಗ್ರಹಿಸಲು ಮದ್ಯ ಮಾರಾಟದ ದಾರಿ ಹಿಡಿದಿರುವುದು ಖಂಡನೀಯ' ಎಂದು ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಟೀಕಿಸಿದ್ದಾರೆ.

4ನೇ ಪುಟ ನೋಡಿ

ಭಾರತದ ಪದಕ ಬೇಟೆ ಆರಂಭ


ಅರ್ಜುನ್ ಲಾಲ್ ಜಾಟ್ ಮತ್ತು ಅರವಿಂದ್ ಸಿಂಗ್

ಚೀನಾದ ಹಾಂಗ್‌ಝೌನಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್‌ನಲ್ಲಿ ಭಾನುವಾರ ಭಾರತದ ಕ್ರೀಡಾಪಟುಗಳು ಪದಕಗಳ ಖಾತೆ ತೆರೆದರು. ಮೊದಲ ದಿನದಂದೇ ಮೂರು ಬೆಳ್ಳಿ ಹಾಗೂ ಎರಡು ಕಂಚು ಸೇರಿದಂತೆ ಐದು ಪದಕಗಳನ್ನು ಗೆದ್ದರು.

19th Asian Games Hangzhou 2022

ರೋಯಿಂಗ್
(ಪುರುಷರ ವಿಭಾಗ)

- ಲೈಟ್‌ವೇಟ್ ಡಬಲ್ ಸ್ಕಲ್ ವಿಭಾಗದಲ್ಲಿ ಭಾರತದ ಅರ್ಜುನ್ ಲಾಲ್ ಜಾಟ್ ಹಾಗೂ ಅರವಿಂದ್ ಸಿಂಗ್ ಬೆಳ್ಳಿ ಗೆದ್ದರು.
- ಮೆನ್ಸ್ ಎಯ್ಟ್ ವಿಭಾಗದಲ್ಲಿ ಭಾರತ ತಂಡಕ್ಕೆ ಬೆಳ್ಳಿ
- ಪೇರ್ ಫೈನಲ್‌ನಲ್ಲಿ ಲೇಖರಾಮ್ ಮತ್ತು ಲಾಲು ಯಾದವ್ ಜೋಡಿಗೆ ಕಂಚು.



ಶೂಟಿಂಗ್:
ಮಹಿಳಾ ತಂಡ ವಿಭಾಗ

- ರಮಿತಾ ಜಿಂದಾಲ್, ಮೆಹುಲಿ ಘೋಷ್ ಮತ್ತು ಆಶಿ ಚೌಕ್ಸಿ 10 ಮೀಟರ್ಸ್ ರೈಫಲ್ — ಬೆಳ್ಳಿ
ಅಂಕಗಳು: 1886

- ರಮಿತಾ ಜಿಂದಾಲ್ ವೈಯಕ್ತಿಕ 10 ಮೀ ಏರ್ ರೈಫಲ್ — ಕಂಚು
ಅಂಕಗಳು: 230.1

ವಿವರ ಪುಟ 10

ಬೆಂಗಳೂರು, ರಾಮನಗರ ಬಂದ್ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ವಿರೋಧಿಸಿ ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಹೋರಾಟದ ಕಾವು ದಿನದಿಂದ ದಿನಕ್ಕೆ ತೀವ್ರತೆ ಪಡೆದುಕೊಳ್ಳುತ್ತಿದೆ.

ಕಾವೇರಿ ಹೋರಾಟ

ಕರ್ನಾಟಕ ಜಲ ಸಂರಕ್ಷಣಾ ಸಮಿತಿ ಸೆ.26ರಂದು (ಮಂಗಳವಾರ) ಬೆಂಗಳೂರು ಬಂದ್‌ಗೆ ಕರೆ ನೀಡಿದ್ದು 90ಕ್ಕೂ ಹೆಚ್ಚು ಸಂಘಟನೆಗಳು ಬೆಂಬಲ ಘೋಷಿಸಿವೆ. ಅಂದೇ ರಾಮನಗರ ಜಿಲ್ಲೆ ಹಾಗೂ ಮಂಡ್ಯ ಜಿಲ್ಲೆಯ ಮದ್ದೂರು, ಮಳವಳ್ಳಿ ತಾಲ್ಲೂಕಿನಲ್ಲೂ ಬಂದ್ ನಡೆಸಲು ಸ್ಥಳೀಯ ಸಂಘಟನೆಗಳು ನಿರ್ಧರಿಸಿವೆ.

ಬೆಂಗಳೂರಿನಲ್ಲಿ ಬೆಳಿಗ್ಗೆ 6ರಿಂದ ಸಂಜೆ 6ರ ತನಕ ಬಂದ್ ನಡೆಸಲು ಭಾನುವಾರ ನಡೆದ ಸಭೆಯಲ್ಲಿ ಒಮ್ಮತದ ತೀರ್ಮಾನಕ್ಕೆ ಬರಲಾಗಿದೆ.

4ನೇ ಪುಟ ನೋಡಿ

ದನದ ಮಾಂಸ ಸಾಗಣೆ: ಕಾರಿಗೆ ಬೆಂಕಿ

ಸತ್ತ ಜಾನುವಾರುಗಳ ರುಂಡ ಇಟ್ಟು ಮೆರವಣಿಗೆ: ಶ್ರೀರಾಮಸೇನೆಯ 16 ಕಾರ್ಯಕರ್ತರ ಬಂಧನ

ಪ್ರಜಾವಾಣಿ ವಾರ್ತೆ


ದೊಡ್ಡಬಳ್ಳಾಪುರ (ಬೆಂಗಳೂರು ಗ್ರಾಮಾಂತರ): ಆಂಧ್ರಪ್ರದೇಶದ ಹಿಂದೂಪುರದಿಂದ ಬೆಂಗಳೂರಿಗೆ ದನದ ಮಾಂಸ ಸಾಗಿಸುತ್ತಿದ್ದ ಐದು ವಾಹನಗಳನ್ನು ತಡೆದ ಶ್ರೀರಾಮಸೇನೆಯ ಕಾರ್ಯಕರ್ತರು ವಾಹನ ಚಾಲಕರನ್ನು ಥಳಿಸಿದ್ದಾರೆ.

ಗೌರಿಬಿದನೂರಿನಿಂದ ಬೆನ್ನಟ್ಟಿ ಬಂದ ಶ್ರೀರಾಮಸೇನೆ ಕಾರ್ಯಕರ್ತರು ಭಾನುವಾರ ಬೆಳಗಿನ ಜಾವ 5.30ಕ್ಕೆ ನಗರದ ಡಾ.ಬಿ.ರ್. ಅಂಬೇಡ್ಕರ್ ವೃತ್ತದಲ್ಲಿ ವಾಹನಗಳನ್ನು ಅಡ್ಡಗಟ್ಟಿದ್ದಾರೆ.

ವಾಹನದಲ್ಲಿದ್ದ ಚಾಲಕರನ್ನು ಹೊರಗೆಳೆದು ಮನಬಂದತೆ ಥಳಿಸಿದ ಗುಂಪು ನಂತರ ವಾಹನಗಳಲ್ಲಿದ್ದ ಮಾಂಸವನ್ನು ರಸ್ತೆಗೆ ಸುರಿದಿದೆ. ಬೆಂಗಾವಲಿಗಿದ್ದ ಕಾರಿಗೆ ಬೆಂಕಿ ಹಚ್ಚಿದೆ.

ವಾಹನ ಚಾಲಕರನ್ನು ರಸ್ತೆಯಲ್ಲಿ ಕೂರಿಸಿ ತಲೆ ಮೇಲೆ ಸತ್ತ ಜಾನುವಾರುಗಳ ತಲೆ ಇಟ್ಟು 'ಜೈ ಶ್ರೀರಾಮ್' ಎಂದು ಕೂಗುವಂತೆ ಗುಂಪು ಬಲವಂತ ಮಾಡಿದೆ. 'ಜೈ ಶ್ರೀರಾಮ್' ಎಂದು ಹೇಳಲು ನಿರಾಕರಿಸಿದ ಚಾಲಕರನ್ನು ಹತ್ತಾರು ಕಾರ್ಯಕರ್ತರ ಗುಂಪು ಮನಬಂದಂತೆ ಥಳಿಸಿ, ಒದ್ದಿದೆ.

ಸತ್ತ ಹಸು ಮತ್ತು ಎಮ್ಮೆಯ ತಲೆಗಳನ್ನು ಚಾಲಕರ ತಲೆಯ ಮೇಲೆ ಇಟ್ಟು ಮೆರವಣಿಗೆ ಮಾಡಿ 'ಜೈ ಶ್ರೀರಾಮ್' ಎಂದು ಹೇಳಿಸಿದೆ. ಚಾಲಕರು 'ಜೈ ಶ್ರೀರಾಮ್' ಹೇಳಿದಾಗ ಕಾರ್ಯಕರ್ತರು ಕೇಕೆ ಹಾಕಿದ್ದಾರೆ.


ದನದ ಮಾಂಸ ಸಾಗಾಣಿಕೆ ಮಾಡುತ್ತಿದ್ದ ಕಾರಿಗೆ ಬೆಂಕಿ ಹಚ್ಚಲಾಗಿದೆ

ಈ ಎಲ್ಲಾ ದೃಶ್ಯಗಳನ್ನು ಮೊಬೈಲ್‌ಗಳಲ್ಲಿ ಚಿತ್ರೀಕರಣ ಮಾಡಿಕೊಂಡಿರುವ ಕಾರ್ಯಕರ್ತರು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟಿದ್ದಾರೆ. ದೊಡ್ಡಬಳ್ಳಾಪುರ ಪೊಲೀಸ್ ಠಾಣೆಯ ಕೂಗಳತೆಯ ದೂರದಲ್ಲೇ ಈ ಘಟನೆ ನಡೆದಿದೆ. ಸ್ಥಳದಲ್ಲಿದ್ದ ಮೂರ್‍ನಾಲ್ಕು ಪೊಲೀಸರು ಅಸಹಾಯಕರಾಗಿ ನಿಂತಿದ್ದರು.

ಇದರಿಂದಾಗಿ ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಸ್ವಲ್ಪ ಹೊತ್ತಿನ ಬಳಿಕ ಸ್ಥಳಕ್ಕೆ ಬಂದ ಪೊಲೀಸರು ಲಾಠಿ ಬೀಸಿ ಜನರನ್ನು ಚದುರಿಸಿದರು. ಮುನ್ನೆಚ್ಚರಿಕಾ ಕ್ರಮವಾಗಿ ನಗರದಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿದೆ.

ಕೋಮುಸೌಹಾರ್ದಕ್ಕೆ ಧಕ್ಕೆ: ಎಸ್‌ಪಿ

ನಗರದಲ್ಲಿ ಭಾನುವಾರ ಬೆಳಿಗ್ಗೆ ನಡೆದ ಘಟನೆಯನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಿದೆ. ಪ್ರಕರಣದ ಸಂಬಂಧ ಎರಡೂ ಕಡೆಯ ಆರೋಪಿಗಳನ್ನು ಬಂಧಿಸಿ ದೂರು ದಾಖಲಿಸಲಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಯಾವುದೇ ಪ್ರಕರಣದಲ್ಲಾಗಲಿ, ಕಾನೂನು ಕ್ರಮ ಕೈಗೊಳ್ಳುವ ಅಧಿಕಾರ ಪೊಲೀಸರ ಹೊರತು ಬೇರೆ ಯಾರಿಗೂ ಇಲ್ಲ. ಶ್ರೀರಾಮಸೇನೆ ಕಾರ್ಯಕರ್ತರು ದನದ ಮಾಂಸ ಸಾಗಿಸುವವರ ಮೇಲೆ ಹಲ್ಲೆ ನಡೆಸಿ, ಕಾರಿಗೆ ಬೆಂಕಿ ಹಚ್ಚಿರುವುದು ಕಾನೂನಿಗೆ ವಿರುದ್ಧವಾಗಿದೆ. ಇದಷ್ಟೇ ಅಲ್ಲದೆ ಈ ಎಲ್ಲಾ ದೃಶ್ಯಗಳನ್ನು ಮೊಬೈಲ್‌ಗಳ ಮೂಲಕ ಚಿತ್ರೀಕರಣ ಮಾಡಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಹರಿದು ಬಿಟ್ಟಿದ್ದಾರೆ. ಇದು ಕೋಮುಭಾವನೆಗಳಿಗೆ ಧಕ್ಕೆ ತರುವ ಸಂಗತಿಯಾಗಿದೆ ಎಂದು ಹೇಳಿದರು.

ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಐಪಿಸಿ, ಸಿಆರ್‌ಪಿಸಿ ಅಡಿಯಲ್ಲಿ ದೂರು ದಾಖಲಿಸಲಾಗಿದೆ. ನಗರದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಸೂಕ್ತ ಬಂದೋಬಸ್ತ್ ಸಹ ಕೈಗೊಳ್ಳಲಾಗಿದೆ. ಸಾರ್ವಜನಿಕರು ಯಾವುದೇ ರೀತಿಯ ಗಾಳಿಸುದ್ದಿಗಳಿಗೆ ಕಿವಿಗೊಡದೆ ಕಾನೂನು ಸುವ್ಯವಸ್ಥೆಗೆ ಸಹಕರಿಸಬೇಕು ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮನವಿ ಮಾಡಿದರು.

ಹಲ್ಲೆ ನಡೆಸಿದ ಆರೋಪದ ಮೇಲೆ ಶ್ರೀರಾಮಸೇನೆಯ 16 ಕಾರ್ಯಕರ್ತರು, ಮಾಂಸ ಸಾಗಿಸುತ್ತಿದ್ದ ಐದು ವಾಹನ, ಏಳು ಚಾಲಕರನ್ನು ಪೊಲೀಸರು ಬಂಧಿಸಿದ್ದಾರೆ. ಕೃತ್ಯಕ್ಕೆ ಶ್ರೀರಾಮಸೇನೆ ಕಾರ್ಯಕರ್ತರು ಬಳಸಿದ್ದ ಎರಡು ಕಾರು, ಒಂದು ಬೈಕ್, 14 ಮೊಬೈಲ್ ಫೋನ್ ಹಾಗೂ ಮಾಂಸ ಸಾಗಿಸುತ್ತಿದ್ದವರಿಂದ ಐದು ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಐದು ವಾಹನಗಳಲ್ಲಿದ್ದ ಸುಮಾರು 20 ಟನ್ ಗೋಮಾಂಸವನ್ನು ಪಶುಸಂಗೋಪನಾ ಇಲಾಖೆ ವೈದ್ಯರ ಸಮ್ಮುಖದಲ್ಲಿ ಮಹಜರು ನಡೆಸಿದ ಪೊಲೀಸರು ನಂತರ ಮಾಂಸವನ್ನು ವಿಲೇವಾರಿ ಮಾಡಿದ್ದಾರೆ.

ಆರ್ಥಿಕತೆ ನಿರ್ವಹಣೆ: ಕೇಂದ್ರ ವಿಫಲ 08
ಸೈಬರ್ ಅಪರಾಧ: 10 ಜಿಲ್ಲೆಗಳೇ ನೆಲೆ 09

ಚಿನಕುರಳಿ

ಪ್ರಕಾಶ್ ಶೆಟ್ಟಿ



'ವಿಶ್ವ ವ್ಯಾಪಾರದ ಬುನಾದಿ'

ಐಎಂಇಸಿ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಸಂತಸ

ಪ್ರಜಾವಾಣಿ ವಾರ್ತೆ



ನವದೆಹಲಿ: ಜಿ20 ಶೃಂಗಸಭೆಯ ಸಂದರ್ಭದಲ್ಲಿ ಘೋಷಿಸಿರುವ 'ಭಾರತ–ಮಧ್ಯಪ್ರಾಚ್ಯ–ಯುರೋಪ್ ಆರ್ಥಿಕ ಕಾರಿಡಾರ್' (ಐಎಂಇಸಿ) ಯೋಜನೆಯು ಮುಂದಿನ ಶತಮಾನಗಳಲ್ಲಿ ವಿಶ್ವ ವ್ಯಾಪಾರದ ಬುನಾದಿಯಾಗಿ ಕೆಲಸ ಮಾಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅಲ್ಲದೆ, ಈ ಯೋಜನೆಯ ರೂಪುರೇಷೆಗಳು ಭಾರತದಲ್ಲಿ ಜನ್ಮತಾಳಿದವು ಎಂಬುದನ್ನು ಇತಿಹಾಸವು ನೆನಪಿನಲ್ಲಿ ಇಟ್ಟುಕೊಳ್ಳಲಿದೆ ಎಂದು ಅವರು ಹೇಳಿದ್ದಾರೆ.

'ಶೃಂಗಸಭೆಯ ವೇಳೆ ಪ್ರಸ್ತಾಪಿಸಲಾದ ಈ ಕಾರಿಡಾರ್ ನೂರಾರು ವರ್ಷಗಳವರೆಗೆ ವಿಶ್ವ ವ್ಯಾಪಾರದ ಬುನಾದಿಯಾಗಿರಲಿದೆ' ಎಂದು ಮೋದಿ ಅವರು ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಹೇಳಿದ್ದಾರೆ. ಈ ಕಾರಿಡಾರ್ ಸ್ಥಾಪನೆಯ ಪ್ರಸ್ತಾವ ಮಾಡಿದ್ದು ಭಾರತ ಎಂದು ಅವರು ತಿಳಿಸಿದ್ದಾರೆ.

ಸಮುದ್ರ ಮಾರ್ಗ, ರೈಲು ಮಾರ್ಗ ಮತ್ತು ರಸ್ತೆಯ ಮೂಲಕ ಭಾರತವನ್ನು ಏಷ್ಯಾದ ಪಶ್ಚಿಮ ಭಾಗ ಹಾಗೂ ಯುರೋಪಿನ ಜೊತೆ ಸರಕು ಸಾಗಣೆಗೆ ಬೆಸೆಯುವ ಮಹತ್ವಾಕಾಂಕ್ಷಿ ಯೋಜನೆ ಇದು. ಭಾರತ, ಅಮೆರಿಕ, ಸೌದಿ ಅರೇಬಿಯಾ, ಐರೋಪ್ಯ ಒಕ್ಕೂಟ, ಇಟಲಿ, ಫ್ರಾನ್ಸ್ ಮತ್ತು ಜರ್ಮನಿ ಈ ಕಾರಿಡಾರ್ ಯೋಜನೆಯಲ್ಲಿ ಭಾಗಿಯಾಗಿವೆ.ಆಫ್ರಿಕದ ದೇಶಗಳ ಒಕ್ಕೂಟಕ್ಕೆ ಜಿ20 ಗುಂಪಿನ ಪೂರ್ಣ ಸದಸ್ಯತ್ವ ಕೊಡಿಸಲು ಭಾರತ ತಳೆದ ನಿಲುವನ್ನು ಮೋದಿ ಅವರು ಪ್ರಶಂಸಿಸಿದ್ದಾರೆ. ಭಾರತವು ಜಿ20 ಗುಂಪಿನ ಅಧ್ಯಕ್ಷ ಸ್ಥಾನ ವಹಿಸಿಕೊಂಡಿದ್ದ ಅವಧಿಯಲ್ಲಿ ಅಭಿವೃದ್ಧಿಶೀಲ ದೇಶಗಳ ಧ್ವನಿ ತಾನು ಎಂದು ಬಿಂಬಿಸಿಕೊಳ್ಳುವ ಪ್ರಯತ್ನ ನಡೆಸಿದೆ.

ಕರ್ನಾಟಕದ ಹೊಯ್ಸಳರ ಕಾಲದ ದೇವಸ್ಥಾನಗಳನ್ನು ಹಾಗೂ ಪಶ್ಚಿಮ ಬಂಗಾಳದ ಶಾಂತಿನಿಕೇತನವನ್ನು ಯುನೆಸ್ಕೊ ಸಂಸ್ಥೆಯು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರಿಸಿರುವುದು ಹೆಮ್ಮೆಯ ಸಂಗತಿ ಎಂದು ಮೋದಿ ಅವರು ಹೇಳಿದ್ದಾರೆ.

ಜಿ20 ಶೃಂಗಸಭೆ ಹಾಗೂ ಚಂದ್ರಯಾನ–3 ಯೋಜನೆಯ ಯಶಸ್ಸು ಭಾರತದ ಪ್ರಜೆಗಳ ಸಂತಸವನ್ನು ದುಪ್ಪಟ್ಟು ಮಾಡಿವೆ ಎಂದು ಅವರು ಖುಷಿ ಹಂಚಿಕೊಂಡಿದ್ದಾರೆ.

ಇಂದು ಜಿಲ್ಲಾಮಟ್ಟದ 'ಜನತಾ ದರ್ಶನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರ ಸಮಸ್ಯೆಗಳಿಗೆ ಸ್ಥಳೀಯ ಮಟ್ಟದಲ್ಲೇ ಸೂಕ್ತ ಪರಿಹಾರ ಒದಗಿಸಲು ರಾಜ್ಯ ಸರ್ಕಾರ ಮೊದಲ ಬಾರಿಗೆ ಆರಂಭಿಸಿರುವ 'ಜನತಾ ದರ್ಶನ' ಕಾರ್ಯಕ್ರಮ ಗದಗ ಹೊರತುಪಡಿಸಿ ಇತರೆ ಎಲ್ಲ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಸೆ.25ರ ಸೋಮವಾರ ನಡೆಯಲಿದೆ.

ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲಿ ಆಯಾ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳನ್ನು ಸೇರಿಸಿಕೊಂಡು ಜನತಾ ದರ್ಶನ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಜವಾಬ್ದಾರಿ ನೀಡಲಾಗಿದೆ.

4ನೇ ಪುಟ ನೋಡಿ

ಹಾಸ್ಟೆಲ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: ಎಸ್‌.ಆರ್‌.ಎನ್‌.ಜಿ. ಸಂಪನ್ನಪ್ಪ ಧರ್ಮಸಂಸ್ಥೆಯು ಉಚಿತ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ. ನಗರ್ತಪೇಟೆಯಲ್ಲಿರುವ ಬಾಲಕಿಯರ ವಿದ್ಯಾರ್ಥಿನಿಯಲಕ್ಕೆ ಡಿಪ್ಲೊಮಾ, ಪದವಿ ಅಧ್ಯಯನ ಮಾಡುತ್ತಿರುವ ಆಸಕ್ತ ವಿದ್ಯಾರ್ಥಿನಿಯರು ಅಕ್ಟೋಬರ್ 10ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ 080-42151190, 95351 31731ಗೆ ಸಂಪರ್ಕಿಸಬಹುದು.

‘ಸದಾಶಿವ ಆಯೋಗದ ವರದಿ ಜಾರಿಗೆ ಬದ್ಧ’

ತುಮಕೂರು: ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ವರ್ಗೀಕರಣ ಕುರಿತು ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ಸಲ್ಲಿಸಿರುವ ವರದಿಯನ್ನು ಜಾರಿಗೊಳಿಸಲು ಮುಂದಿನ ಸಚಿವ ಸಂಪುಟದಲ್ಲಿ ಚರ್ಚಿಸಲಾಗುವುದು ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ನಗರದಲ್ಲಿ ಭಾನುವಾರ ಜಿಲ್ಲಾ ಮಾದಿಗರ ಬಳಗದಿಂದ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

ಒಳ ಮೀಸಲಾತಿ ಕಲ್ಪಿಸಲು ಸದಾಶಿವ ಆಯೋಗ ರಚಿಸಲಾಗಿತ್ತು. ಆಯೋಗದ ವರದಿಯನ್ನು ಮುಂದಿನ ಕ್ಯಾಬಿನೆಟ್‌ನಲ್ಲಿ ಚರ್ಚಿಸಿ, ಅನುಮೋದನೆ ಪಡೆದು, ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಿ ಜಾರಿಗೊಳಿಸಲಾಗುವುದು. ಬೇರೆ ಯಾವ ಸಮುದಾಯಗಳಿಗೂ ಅನ್ಯಾಯವಾಗದ ರೀತಿಯಲ್ಲಿ ಒಳ ಮೀಸಲಾತಿ ವರ್ಗೀಕರಣ ಮಾಡಲಾಗುವುದು. ಪ್ರಣಾಳಿಕೆಯಲ್ಲಿ ನೀಡಿದ ಭರವಸೆ ಈಡೇರಿಸಲಾಗುವುದು ಎಂದು ತಿಳಿಸಿದರು.

ಅನುಭವ ಮಂಟಪ ಪ್ರತಿನಿಧಿಗಳ ಸಮಾವೇಶದಲ್ಲಿ ಶಾಸಕ ಬಿ.ಆರ್‌. ಪಾಟೀಲ ವಿಷಾದ

‘ವಿಷಯಾಧಾರಿತ ಚರ್ಚೆ ಮರೀಚಿಕೆ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಚುನಾವಣೆಯಲ್ಲಿ ಹಣ, ಮದ್ಯ ಹಂಚಿಕೆ ಉಲ್ಬಣ
- ದೇಶದಲ್ಲಿ ಕೋಮು ಸಾಮರಸ್ಯ ಕಾಪಾಡಲು ಒತ್ತು
- ಕೇಂದ್ರ ಸರ್ಕಾರದಿಂದ ಒಕ್ಕೂಟ ವ್ಯವಸ್ಥೆ ಮೇಲೆ ನಿರಂತರ ದಾಳಿ: ಆರೋಪ

ಬೆಂಗಳೂರು: ಚುನಾವಣೆಗಳಲ್ಲಿ ವಿಷಯಾಧಾರಿತ ಚರ್ಚೆಗಳು ನಡೆಯುತ್ತಿಲ್ಲ. ಅಭ್ಯರ್ಥಿಯ ಗುಣಗಳ ಬಗೆಗಿನ ಮಾತು ಹಿಂದಕ್ಕೆ ಸರಿದು, ಹಣ, ಹೆಂಡವೇ ಮುನ್ನೆಲೆಗೆ ಬಂದಿವೆ ಎಂದು ಕಾಂಗ್ರೆಸ್ ಶಾಸಕ ಬಿ.ಆರ್‌. ಪಾಟೀಲ ವಿಷಾದಿಸಿದರು.

ಸಿಟಿಜನ್ ಫಾರ್ ಡೆಮಾಕ್ರಸಿ, ಜನಾಂದೋಲನಗಳ ಮಹಾಮೈತ್ರಿ ಕರ್ನಾಟಕ– ಮಹಾರಾಷ್ಟ್ರ ಜಂಟಿ ಕ್ರಿಯಾ ಸಮಿತಿಯು ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಸೋಲಿಸುವುದು ಹಾಗೂ ಕೋಮುಸಾಮರಸ್ಯ ಕಾಪಾಡುವ ಬಗ್ಗೆ ಹಮ್ಮಿಕೊಂಡಿದ್ದ ಅಖಿಲ ಭಾರತ ಅನುಭವ ಮಂಟಪ ಪ್ರತಿನಿಧಿಗಳ ಅಧಿವೇಶನದಲ್ಲಿ ಎರಡನೇ ದಿನವಾದ ಭಾನುವಾರ ಅವರು ಮಾತನಾಡಿದರು.

‘ಜನಪರ, ಸಮಾಜವಾದಿ ಹಿನ್ನೆಲೆಯ ರಾಜಕಾರಣ ಮಾಡುವ ನಮ್ಮಂಥವರಿಗೆ ಇದು ಸಂಕಷ್ಟದ ಕಾಲ’ ಎಂದು ಹೇಳಿದರು.

‘ಕೋಮುವಾದಿ ರಾಜಕೀಯವನ್ನು ಹಿಮ್ಮೆಟ್ಟಿಸಿ ಜನ ಬದುಕಿನ ರಾಜಕೀಯವನ್ನು ಮುನ್ನೆಲೆಗೆ ತರುವುದು ಸವಾಲಿನ ಕೆಲಸ. ಕೇಂದ್ರ ಸರ್ಕಾರವು ಒಕ್ಕೂಟ ವ್ಯವಸ್ಥೆಯ ಮೇಲೆ ನಿರಂತರ ದಾಳಿ ನಡೆಸುತ್ತಿದೆ. ಅದನ್ನು ಹಿಮ್ಮೆಟ್ಟಿಸುವ ಜವಾಬ್ದಾರಿ ನಮ್ಮದು’ ಎಂದರು.

ಕರ್ನಾಟಕ ಜನಶಕ್ತಿಯ ನೂರ್ ಶ್ರೀಧರ್ ಮಾತನಾಡಿ, ‘ಇಂದು ದೇಶದ ರಾಜಕಾರಣ ಎನ್‌ಡಿಎ, ‘ಇಂಡಿಯಾ’ ಎಂದು ಎರಡು ಭಾಗಗಳಾಗಿವೆ. ಸಂವಿಧಾನವನ್ನು ನಾಶಗೊಳಿಸಲು ಹೊರಟ ರಾಜಕೀಯ ಧಾರೆ ಒಂದು. ಸಂವಿಧಾನವನ್ನು ನಿರ್ಲಕ್ಷಿಸುತ್ತಾ ಬಂದಿರುವ ರಾಜಕೀಯ ಧಾರೆ ಇನ್ನೊಂದು. ಸಂವಿಧಾನವನ್ನು ಸರ್ವನಾಶಗೊಳಿಸುವ ಶಕ್ತಿಗಳಿಂದ ದೇಶವನ್ನು ಕಾಪಾಡಲು, ಸಂವಿಧಾನವನ್ನು ನಿರ್ಲಕ್ಷಿಸುವವರನ್ನು ಅಧಿಕಾರಕ್ಕೆ ತರಬೇಕಾದ ಅನಿವಾರ್ಯ ಸ್ಥಿತಿಯಲ್ಲಿ ಸದ್ಯ ನಾವಿದ್ದೇವೆ. ಇದುವೇ ಅಂತಿಮ ಗುರಿ, ಅಂತಿಮ ಗಮ್ಯ ಆಗಬಾರದು’ ಎಂದು ವಿಶ್ಲೇಷಿಸಿದರು.

ದೇಶಕ್ಕೆ ಅಗತ್ಯ ಇರುವುದು ಕೇವಲ ಸಂವಿಧಾನವನ್ನು ಉಳಿಸುವ ರಾಜಕಾರಣವಲ್ಲ, ಸಂವಿಧಾನವನ್ನು ಬೆಳೆಸುವ ರಾಜಕಾರಣ. ಅದಕ್ಕಾಗಿ ಜನರಾಜಕಾರಣವನ್ನು ಕಟ್ಟುವ ಪಾತ್ರವನ್ನು ನಾಗರಿಕ ಸಮಾಜ ಕೈಗೆತ್ತಿಕೊಳ್ಳಬೇಕು ಎಂದರು.

ತಕ್ಷಣಕ್ಕೆ ಜನಪರ್ಯಾಯ ಇಲ್ಲದ ಕಾರಣ ದುಷ್ಟ ರಾಜಕಾರಣವನ್ನು ಸೋಲಿಸಲು ಭ್ರಷ್ಟ ರಾಜಕಾರಣವನ್ನು ಬೆಂಬಲಿಸುವ ಪರಿಸ್ಥಿತಿಗೆ ತಲುಪಿಬಿಟ್ಟಿದ್ದೇವೆ. ಆದರೆ, ಅದರಲ್ಲಿ ವಿಲೀನವಾಗಬಾರದು. ಜನ ರಾಜಕಾರಣದ ಭದ್ರ ನೆಲೆಯ ಮೇಲೆ ನಿಂತೇ ಆ ಕೆಲಸವನ್ನು ಮಾಡಬೇಕಿದೆ ಎಂದು ಹೇಳಿದರು.



ಗಾಂಧಿಭವನದಲ್ಲಿ ನಡೆದ ಅಖಿಲ ಭಾರತ ಅನುಭವ ಮಂಟಪ ಪ್ರತಿನಿಧಿಗಳ ಅಧಿವೇಶನದಲ್ಲಿ ಭಾನುವಾರ ಭಾಗವಹಿಸಿದ್ದ ಪ್ರತಿನಿಧಿಗಳು

ಮಣಿಪುರ, ಹರಿಯಾಣ ಘಟನೆಗೆ ಖಂಡನೆ

ಮಣಿಪುರ ಮತ್ತು ಹರಿಯಾಣದಲ್ಲಿ ಬುಡಕಟ್ಟು ಹಾಗೂ ಅಲ್ಪಸಂಖ್ಯಾತರ ಮೇಲಿನ ದಾಳಿಯನ್ನು ಸಮಾವೇಶದಲ್ಲಿ ಖಂಡಿಸಲಾಯಿತು.

ಕೋಮುವಾದಿ ಶಕ್ತಿಗಳನ್ನು ಪರಾಭವಗೊಳಿಸುವಂತೆ ಸಮಾವೇಶ ದೇಶದ ಜನರಿಗೆ ಮನವಿ ಮಾಡಿದೆ. ಸಂವಿಧಾನ ಹಾಗೂ ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿನ ದಾಳಿಯನ್ನು ಹಿಮ್ಮೆಟ್ಟಿಸಲು ಜನಪರ ಶಕ್ತಿಗಳನ್ನು ಒಗ್ಗೂಡಿಸಿ ಹೋರಾಡುವುದು. ಈ ಗುರಿ ಸಾಧನೆಗೆ ಪರ್ಯಾಯ ರಾಜಕೀಯ ಮತ್ತು ಸಾಂಸ್ಕೃತಿಕ ಆಂದೋಲನ ಹಮ್ಮಿಕೊಳ್ಳಲು ಸಮಾವೇಶ ನಿರ್ಧರಿಸಿದೆ. ರಹಮತ್ ತರೀಕೆರೆ, ದತ್ತಾ ದೇಸಾಯಿ, ಟಿ.ಆರ್. ಚಂದ್ರಶೇಖರ್, ಉಲ್ಕಾ ಮಹಾಜನ್, ಎಸ್.ಆರ್. ಹಿರೇಮಠ, ಬಡಗಲಪುರ ನಾಗೇಂದ್ರ, ಪ್ರಕಾಶ್ ಕಮ್ಮರಡಿ, ಎಸ್.ಆರ್. ಆರಾಧ್ಯ, ಮೊಹಮ್ಮದ್ ಯೂಸೂಫ್ ಕನ್ನಿ, ಆನಂದಕುಮಾರ್, ಶಾಸಕ ದರ್ಶನ್ ಪುಟ್ಟಣ್ಣಯ್ಯ ಸಂವಾದದಲ್ಲಿ ಪಾಲ್ಗೊಂಡರು. ಜನಾಂದೋಲನ ಮಹಾಮೈತ್ರಿಯ ರಾಘವೇಂದ್ರ ಕುಷ್ಟಗಿ, ದಿಲೀಪ್ ಕಾಮತ್, ಕೆ.ವಿ. ಭಟ್ ನಿರ್ವಹಿಸಿದರು.

ಕಾರ್ಮಿಕ ನಾಯಕ ಮೈಕಲ್ ಫರ್ನಾಂಡೀಸ್ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ನಡೆಯಿತು.

‘ಎಸ್‌.ಮೂರ್ತಿ ಮರು ನೇಮಕಕ್ಕೆ ಆಗ್ರಹ’

ಬೆಂಗಳೂರು: ಹಿಂದಿನ ಬಿಜೆಪಿ ಸರ್ಕಾರ ಎಸ್. ಮೂರ್ತಿ ಅವರ ವಿರುದ್ಧ ಕಾನೂನುಬಾಹಿರವಾಗಿ ವಿಧಿಸಿರುವ ಶಿಕ್ಷೆ ಆದೇಶವನ್ನು ಹಿಂಪಡೆದು ಕರ್ನಾಟಕ ವಿಧಾನಸಭೆ ಕಾರ್ಯದರ್ಶಿ ಹುದ್ದೆಗೆ ಮರು ನೇಮಕ ಮಾಡಬೇಕು ಎಂದು ಮಾದಿಗ ದಂಡೋರ ಸಂಘಟನೆ ಆಗ್ರಹಿಸಿದೆ.

ದ್ವೇಷ ರಾಜಕಾರಣದ ಭಾಗವಾಗಿ ಮೂರ್ತಿ ಅವರಿಗೆ ಆಗಿದ್ದ ಅನ್ಯಾಯವನ್ನು ದಲಿತ ಸಂಘಟನೆಗಳು ಖಂಡಿಸಿದ್ದವು. ಈಗ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಆಗಿರುವ ಅನ್ಯಾಯ ಸರಿಪಡಿಸಬೇಕು ಎಂದು ಸಂಘಟನೆ ಅಧ್ಯಕ್ಷ ಪಾವಗಡ ಶ್ರೀರಾಮ್ ಒತ್ತಾಯಿಸಿದ್ದಾರೆ.

ಲಿಂಗತ್ವ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಒತ್ತು

ಅಭಿವೃದ್ಧಿ ಮಂಡಳಿ ಸ್ಥಾಪನೆಗೆ ಕ್ರಮ: ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಭರವಸೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆರ್ಥಿಕ ಸಬಲತೆ: ₹ 1 ಲಕ್ಷಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರ ಕ್ರಮ
- ರಾಜ್ಯ ಪ್ರತಿನಿಧಿಗಳ ಜೊತೆಗೆ ಸಮಾಲೋಚನೆ ನಡೆಸಿದ ಸಚಿವೆ
- ಸಾಂವಿಧಾನಿಕ ಸಂಸ್ಥೆಗಳ ಅಧ್ಯಯನಕ್ಕೆ ಪ್ರವಾಸ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರ ಕಲ್ಯಾಣ ಮಂಡಳಿ ಸ್ಥಾಪಿಸಲು ಸರ್ಕಾರ ಕ್ರಮಕೈಗೊಳ್ಳಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು.

‘ಒಂದೆಡೆ’ ಸಂಸ್ಥೆಯ ಸಹಯೋಗದಲ್ಲಿ ಸಂವಿಧಾನಿಕ ಸಂಸ್ಥೆಗಳಿಗೆ ಎರಡು ದಿನಗಳ ಶೈಕ್ಷಣಿಕ ಪ್ರವಾಸ ಹಮ್ಮಿಕೊಂಡಿರುವ ಕರ್ನಾಟಕ ರಾಜ್ಯ ಲಿಂಗತ್ವ ಹಾಗೂ ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟದ ಜಿಲ್ಲಾ ಹಾಗೂ ರಾಜ್ಯ ಪ್ರತಿನಿಧಿಗಳೊಂದಿಗೆ ಗುರುವಾರ ವಿಧಾನಸೌಧದಲ್ಲಿ ನಡೆಸಿದ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

ಲಿಂಗತ್ವ ಅಲ್ಪಸಂಖ್ಯಾತರ ಕಲ್ಯಾಣ ಮಂಡಳಿ ಸ್ಥಾಪಿಸುವ ಕುರಿತು ಕಾಂಗ್ರೆಸ್ ಪಕ್ಷ ಚುನಾವಣಾ ಪ್ರಣಾಳಿಕೆಯಲ್ಲೇ ಭರವಸೆ ನೀಡಿತ್ತು. ಅದನ್ನು ಸಕಾರಗೊಳಿಸಲಾಗುವುದು ಎಂದು ತಿಳಿಸಿದರು.

ಸ್ವಯಂ ಉದ್ಯೋಗ ಕೈಗೊಳ್ಳಲು, ಬದುಕು ಕಟ್ಟಿಕೊಳ್ಳಲು, ಆರ್ಥಿಕ ಸಬಲತೆ ಸಾಧಿಸಲು ಈಗ ನೀಡುತ್ತಿರುವ ₹ 50 ಸಾವಿರ ನೆರವನ್ನು ₹ 1 ಲಕ್ಷಕ್ಕೆ ಹೆಚ್ಚಿಸಲಾಗುವುದು. ಶೇ 50ರಷ್ಟು ಸಬ್ಸಿಡಿ ಬಿಟ್ಟು ಉಳಿದ ಶೇ 50ರಷ್ಟು ಹಣ ಮರುಪಾವತಿಸುವುದನ್ನೂ ಮನ್ನಾ ಮಾಡಲಾಗುವುದು ಎಂದು ಭರವಸೆ ನೀಡಿದರು.

ಒಕ್ಕೂಟದ ನಾಯಕಿ ಅಕ್ಕೈ ಪದ್ಮಸಾಲಿ ಮಾತನಾಡಿ, ‘ಒಟ್ಟು 55 ಜನರು ಸಾಂವಿಧಾನಿಕ ಸಂಸ್ಥೆಗಳ ಅಧ್ಯಯನ ಪ್ರವಾಸ ಕೈಗೊಂಡಿದ್ದೇವೆ. ಬಹುತೇಕರು ಇದೇ ಮೊದಲ ಬಾರಿ ವಿಧಾನಸೌಧಕ್ಕೆ ಭೇಟಿ ನೀಡಿದ್ದಾರೆ. ವಿಧಾನಸಭೆ, ವಿಧಾನ ಪರಿಷತ್ ಕಾರ್ಯವಿಧಾನದ ಮಾಹಿತಿ ಪಡೆದಿದ್ದಾರೆ. ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದೆ. ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಶಕ್ತಿ ಯೋಜನೆಯನ್ನು ನಮಗೂ ವಿಸ್ತರಿಸುವ ಭರವಸೆ ಕೊಟ್ಟಿದ್ದಾರೆ. ಪ್ರವಾಸಕ್ಕೆ ಉಚಿತ ಬಸ್ ಸೌಕರ್ಯ ಒದಗಿಸಿದ್ದಾರೆ’ ಎಂದು ಮಾಹಿತಿ ನೀಡಿದರು.

ಲೋಕಸಭೆ, ವಿಧಾನಸಭೆಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೂ ಪ್ರತ್ಯೇಕ ಮೀಸಲು ನೀಡಬೇಕು. ವಿಧಾನ ಪರಿಷತ್, ರಾಜ್ಯಸಭೆಗಳಿಗೆ ನಾಮ ನಿರ್ದೇಶನ ಮಾಡಬೇಕು ಎಂದು ಒತ್ತಾಯಿಸಿದ್ದೇವೆ ಎಂದು ತಿಳಿಸಿದರು.

ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಸ್ಥಾನಕ್ಕೆ ಜಮೀರ್ ರಾಜೀನಾಮೆ

ಪ್ರಜಾವಾಣಿ ವಾರ್ತೆ



ಜಮೀರ್ ಅಹಮ್ಮದ್

ಕೋಲಾರ: ಜೆಡಿಎಸ್ ಪಕ್ಷದ ರಾಜ್ಯ ಹಿರಿಯ ಉಪಾಧ್ಯಕ್ಷ ಸ್ಥಾನಕ್ಕೆ ಅಂಜುಮನ್ ಎ ಇಸ್ಲಾಮಿಯಾ ಸಂಸ್ಥೆ ಅಧ್ಯಕ್ಷ ಕೆ.ಎಂ. ಜಮೀರ್ ಅಹಮ್ಮದ್ ರಾಜೀನಾಮೆ ಘೋಷಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ನಾನು ಈವರೆಗೆ ಜೆಡಿಎಸ್ ಪಕ್ಷಕ್ಕೆ ಕೆಲಸ ಮಾಡಿಕೊಂಡು ಬಂದಿದ್ದೇನೆ. ಆದರೆ, ಮುಂಬರುವ ಲೋಕಸಭಾ ಚುನಾವಣೆಗೆ ಅವರು ಕೋಮುವಾದಿ ಬಿಜೆಪಿಗೆ ಬೆಂಬಲ ನೀಡಿರುವುದು ನನಗೆ ಬೇಸರ ಉಂಟು ಮಾಡಿದೆ ಎಂದು ತಿಳಿಸಿದರು.

ಜೆಡಿಎಸ್ ಜಾತ್ಯತೀತ ಪಕ್ಷ. ಹೀಗಾಗಿ, ಕೋಮುವಾದಿ ಪಕ್ಷದ ಜೊತೆ ಸೇರುವುದು ನಮಗೆ ಇಷ್ಟವಿಲ್ಲ. ಬಿಜೆಪಿ ಜೊತೆ ಸೇರುವ ಮುನ್ನ ಅಲ್ಪಸಂಖ್ಯಾತರ ನಾಯಕರೊಂದಿಗೆ ಚರ್ಚೆಯನ್ನೂ ನಡೆಸಿಲ್ಲ. ಹೀಗಾಗಿ, ಜೆಡಿಎಸ್ ಪಕ್ಷ ನನಗೆ ನೀಡಿದ್ದ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ’ ಎಂದು ಅವರು ತಿಳಿಸಿದರು.

‘ಜೆಡಿಎಸ್ ಪಕ್ಷದ ರಾಜ್ಯ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ನನಗೆ ಬಹಳ ವರ್ಷಗಳಿಂದ ಪರಿಚಯ. ಪಕ್ಷದ ರಾಜ್ಯ ಹಿರಿಯ ಉಪಾಧ್ಯಕ್ಷ ಸ್ಥಾನ ನೀಡಿದರು. ಅವರು ನಮ್ಮ ಅಂಜುಮನ್ ಎ ಇಸ್ಲಾಮಿಯಾ ಸಂಸ್ಥೆಗೆ 56 ಎಕರೆ ಜಮೀನು ನೀಡಿದ್ದಾರೆ. ಅದರಲ್ಲಿ ಎಂಜಿನಿಯರಿಂಗ್ ಕಾಲೇಜು, ವೈದ್ಯಕೀಯ ಕಾಲೇಜು, ಹೆಣ್ಣು ಮಕ್ಕಳಿಗೆ ಕಾಲೇಜು ನಿರ್ಮಿಸುವ ಉದ್ದೇಶವಿತ್ತು. ಎಚ್.ಡಿ. ಕುಮಾರಸ್ವಾಮಿ ಜೊತೆಗೆ ಕೂಡ ಮಾತನಾಡಿಸಿದ್ದರು. ವಿಧಾನಸಭೆ ಚುನಾವಣೆಯಲ್ಲಿ ಗೆದ್ದು ಜೆಡಿಎಸ್ ಸರ್ಕಾರ ರಚಿಸಲಿದ್ದು, ತಮಗೆ ಬೆಂಬಲ ನೀಡಬೇಕೆಂದು ಕೋರಿದ್ದರು. ಅದರಂತೆ ಕಳೆದ ಚುನಾವಣೆಯಲ್ಲಿ ಜೆಡಿಎಸ್ ಪಕ್ಷಕ್ಕೆ ಕೆಲಸ ಮಾಡಿದೆವು. ಆದರೆ, ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬರಲಿಲ್ಲ. ಕಡಿಮೆ ಸ್ಥಾನಗಳು ಬಂದವು’ ಎಂದು ಹೇಳಿದರು.

‘ನಾನು ಹುಟ್ಟಿನಿಂದಲೂ ಕಾಂಗ್ರೆಸ್ ಪಕ್ಷದವನು. ಆದರೆ, ಮತ್ತೆ ಕಾಂಗ್ರೆಸ್ ಪಕ್ಷ ಸೇರುವ ನಿರ್ಧಾರವನ್ನು ಇನ್ನೂ ಮಾಡಿಲ್ಲ. ಮುಂದಿನ ದಿನಗಳಲ್ಲಿ ಈ ಬಗ್ಗೆ ಯೋಚಿಸುತ್ತೇನೆ’ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಂಜುಮನ್ ಎ ಇಸ್ಲಾಮಿಯ ಕಾರ್ಯದರ್ಶಿ ಸೈಯದ್ ಸೈಫುಲ್ಲಾ, ಸಾದಿಕ್ ಹಾಜರಿದ್ದರು.

ಸೇವೆ, ತಂತ್ರಜ್ಞಾನ ಬಳಕೆ: ಬಿಎಂಟಿಸಿ ಕೆಎಸ್‌ಆರ್‌ಟಿಸಿಗೆ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯ ಕಾರ್ಪೊರೇಟ್ ಕೊಲ್ಯಾಟರಲ್ (Corporate Collateral) ರಾಷ್ಟ್ರೀಯ ಪ್ರಶಸ್ತಿಗಳ 9 ವಿಭಾಗಗಳಲ್ಲಿ ಕೆಎಸ್‌ಆರ್‌ಟಿಸಿ, 4 ವಿಭಾಗಗಳಲ್ಲಿ ಬಿಎಂಟಿಸಿ ಆಯ್ಕೆಯಾಗಿದ್ದು, ನವದೆಹಲಿಯಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು.

ಕೆಎಸ್‌ಆರ್‌ಟಿಸಿ ವರ್ಷದ ಅತ್ಯುತ್ತಮ ಗ್ರಾಹಕ ಸ್ನೇಹಿ ಸಂಸ್ಥೆ, ಅತ್ಯುತ್ತಮ ವರ್ಷದ ಸೇವಾ ಉಪಕ್ರಮ, ಸಾಂಸ್ಥಿಕ ಹಾಗೂ ವ್ಯಾವಹಾರಿಕ ಸಂಪರ್ಕ ಉಪಕ್ರಮ ವಿಭಾಗಗಳಲ್ಲಿ ಡೈಮಂಡ್ ಪ್ರಶಸ್ತಿ, ಗ್ರಾಹಕ ಸೇವೆಯಲ್ಲಿ ಅತ್ಯುತ್ತಮ ತಾಂತ್ರಿಕತೆ ಬಳಕೆ, ವಿವಿಧತೆ ಹಾಗೂ ಸಮಾನತೆಯ ಉತ್ತಮ ಉಪಕ್ರಮ, ಅತ್ಯುತ್ತಮ ವರ್ಷದ ಉಪಕ್ರಮ ಉತ್ಪನ್ನಗಳಲ್ಲಿ ಬೆಳ್ಳಿ ಪ್ರಶಸ್ತಿ, ಅತ್ಯುತ್ತಮ ಮಾನವ ಸಂಪನ್ಮೂಲ ಉಪಕ್ರಮ, ಸಾರ್ವಜನಿಕ ಸಂಪರ್ಕ ಅಧ್ಯಯನಗಳಿಗೆ ಕಂಚಿನ ಪ್ರಶಸ್ತಿ ಹಾಗೂ ಪ್ರಾದೇಶಿಕ ಆಂತರಿಕ ನಿಯತಕಾಲಿಕ ಮುದ್ರಣಕ್ಕೆ ಸಮಾಧಾನಕರ ಪ್ರಶಸ್ತಿ ಪಡೆಯಿತು.

ಬಿಎಂಟಿಸಿ ಸಾಂಸ್ಥಿಕ ಕೈಪಿಡಿಗೆ ಡೈಮಂಡ್ ಪ್ರಶಸ್ತಿ, ಗ್ರಾಹಕ ಸೇವೆಯಲ್ಲಿ ಅತ್ಯುತ್ತಮ ತಾಂತ್ರಿಕತೆ ಬಳಕೆಗೆ ಚಿನ್ನದ ಪ್ರಶಸ್ತಿ, ಅತ್ಯುತ್ತಮ ಮಾನವ ಸಂಪನ್ಮೂಲ ಉಪಕ್ರಮಕ್ಕೆ ಬೆಳ್ಳಿ ಪ್ರಶಸ್ತಿ, ವರ್ಷದ ಅತ್ಯುತ್ತಮ ಸೃಜನಶೀಲ ಜಾಹೀರಾತು ವಿಭಾಗದಲ್ಲಿ ಕಂಚಿನ ಪ್ರಶಸ್ತಿ ಪಡೆಯಿತು.

ಕೆಎಸ್‌ಆರ್‌ಟಿಸಿ ಚಿಕ್ಕಬಳ್ಳಾಪುರ ವಿಭಾಗೀಯ ನಿಯಂತ್ರಣಾಧಿಕಾರಿ ಹಿಮವರ್ಧನ ನಾಯ್ಡು ಅಲೂರಿ, ಕೋಲಾರ ವಿಭಾಗದ ವಿ. ಬಸವರಾಜು, ಬೆಂಗಳೂರು ಕೇಂದ್ರೀಯ ವಿಭಾಗದ ಎಸ್. ಲಕ್ಷ್ಮಣ್, ಮಂಡ್ಯ ವಿಭಾಗದ ಎಸ್.ಪಿ. ನಾಗರಾಜ, ಬಿಎಂಟಿಸಿ ಪಶ್ಚಿಮ ವಲಯ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಾಥ್ ಎನ್. ಪ್ರಶಸ್ತಿ ಸ್ವೀಕರಿಸಿದರು.



ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯ ‘ಕಾರ್ಪೊರೇಟ್ ಕೊಲ್ಯಾಟರಲ್’ ರಾಷ್ಟ್ರೀಯ ಪ್ರಶಸ್ತಿಗಳನ್ನು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ನವದೆಹಲಿಯಲ್ಲಿ ಸ್ವೀಕರಿಸಿದರು

‘ಬಿಬಿಎಂಪಿ ಸಿಬ್ಬಂದಿಗೆ ಸೌಲಭ್ಯ ನೀಡಿ’

ಬೆಂಗಳೂರು: ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ ಬಿ, ಸಿ ಮತ್ತು ಡಿ ವೃಂದದ ಸಿಬ್ಬಂದಿಗೆ ಮುಖ್ಯ ಆಯುಕ್ತರೇ ಸೌಲಭ್ಯ ನೀಡಬೇಕು ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಆಗ್ರಹಿಸಿದೆ.

ಬಿ, ಸಿ ಮತ್ತು ಡಿ ವೃಂದ ಅಧಿಕಾರಿಗಳಿಗೆ ಆಡಳಿತ ಸೌಲಭ್ಯ ನೀಡಲು ಮುಖ್ಯ ಆಯುಕ್ತರಿಗೆ ನಿಯಮಾವಳಿ ಪ್ರಕಾರ ಅಧಿಕಾರವಿದೆ. ಆದರೆ, ಈ ಸೌಲಭ್ಯ ನೀಡಲು ಇತ್ತೀಚೆಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುತ್ತಿದೆ. ಇದರಿಂದ ಸಕಾಲಕ್ಕೆ ಪ್ರಕ್ರಿಯೆಗಳು ಮುಗಿಯುತ್ತಿಲ್ಲ ಎಂದು ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್ ತಿಳಿಸಿದ್ದಾರೆ.

‘ಗುತ್ತಿಗೆ, ಹೊರಗುತ್ತಿಗೆ ನೌಕರರನ್ನು ಕಾಯಂಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಚುನಾವಣೆ ಪ್ರಣಾಳಿಕೆಯಂತೆ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರನ್ನು ಕಾಯಂಗೊಳಿಸಬೇಕು’ ಎಂದು ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ನೂತನ ಅಧ್ಯಕ್ಷ ಶ್ರೀಕಾಂತ ಸ್ವಾಮಿ ಆಗ್ರಹಿಸಿದ್ದಾರೆ.

ನೌಕರರ 2ನೇ ತ್ರೈಮಾಸಿಕ ಸಮ್ಮೇಳನದಲ್ಲಿ ಪದಾಧಿಕಾರಿಗಳ ಆಯ್ಕೆ ನಡೆಯಿತು. ಆಯನೂರು ಮಂಜುನಾಥ ಅವರು ಸಂಘದ ಗೌರವಾಧ್ಯಕ್ಷರಾಗಿ ಮುಂದುವರಿದಿದ್ದು, ಪ್ರಧಾನ ಕಾರ್ಯದರ್ಶಿಯಾಗಿ ಗವಿಸಿದ್ದಪ್ಪ ಡಿ. ಉಪ್ಪಾರ, ಕಾರ್ಯಾಧ್ಯಕ್ಷರಾಗಿ ಗಿರೀಶ್ ಜೆ. ಕಡ್ಡಿಪುಡಿ ಮತ್ತು ವೆಂಕಟೇಶ ಒ., ಖಜಾಂಚಿಯಾಗಿ ರುದ್ರೇಶ ಪಟೇಲ್, ಸಂಘಟನಾ ಕಾರ್ಯದರ್ಶಿಯಾಗಿ ರವಿ ಮತ್ತು ಆಶಾ ಆಯ್ಕೆಯಾದರು.

‘ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಸುಮಾರು 30 ಸಾವಿರ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ವಿಶೇಷ ಸೌಲಭ್ಯವಿಲ್ಲದೆ 15–20 ವರ್ಷಗಳಿಂದ ಪ್ರಾಮಾಣಿಕವಾಗಿ ದುಡಿಯುತ್ತಿದ್ದಾರೆ. ಪ್ರಸ್ತುತ ನೀಡುತ್ತಿರುವ ವೇತನವು ಅತ್ಯಂತ ಕಡಿಮೆ ಇದ್ದು, ಕನಿಷ್ಠ ಜೀವನ ಸಾಗಿಸುವುದೂ ಕಷ್ಟವಾಗಿದೆ. ಸಮಾನ ಕೆಲಸಕ್ಕೆ ಸಮಾನ ವೇತನ ಒದಗಿಸಲು ಕ್ರಮವಹಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಮೈಸೂರು ಬ್ಯಾಂಕ್ ವೃತ್ತದಲ್ಲಿ ಕಪ್ಪುಬಾವುಟ ಪ್ರದರ್ಶಿಸಿ ಆಕ್ರೋಶ

ಕಾವೇರಿ: ಕನ್ನಡ ಒಕ್ಕೂಟ ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ವಿರೋಧಿಸಿ ಕನ್ನಡ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಹಾಗೂ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ.ಗೋವಿಂದು ಮತ್ತಿತರರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. – ಪ್ರಜಾವಾಣಿ ಚಿತ್ರ

ಬೆಂಗಳೂರು: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮ ಖಂಡಿಸಿ, ಕನ್ನಡ ಒಕ್ಕೂಟದ ಕಾರ್ಯಕರ್ತರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಭಾನುವಾರ ಕಪ್ಪುಬಾವುಟ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.

‘ರಾಜ್ಯದಲ್ಲಿ ಬರ ಪರಿಸ್ಥಿತಿ ಇದೆ. ಕಾವೇರಿಕೊಳ್ಳದ ಜಿಲ್ಲೆಗಳಲ್ಲಿ ನೀರು ಸಿಗದೆ ಬೆಳೆಗಳು ಒಣಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಹರಿಸಲಾಗುತ್ತಿದೆ. ಬೇಸಿಗೆಯಲ್ಲಿ ಬೆಂಗಳೂರು ನಗರದ ಜನರಿಗೂ ಕುಡಿಯುವ ನೀರು ಸಿಗುವುದು ಕಷ್ಟವಿದೆ. ರಾಜ್ಯ ಸರ್ಕಾರವು ನಾಡಿನ ಜನರಿಗೆ ದ್ರೋಹ ಎಸಗುತ್ತಿದೆ’ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

‘ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ತರುತ್ತೇವೆಂದು ಅಧಿಕಾರಕ್ಕೆ ಬಂದಿದ್ದ ಕಾಂಗ್ರೆಸ್, ಈಗ ಮೋಸ ಮಾಡುತ್ತಿದೆ. ಪ್ರತಿನಿತ್ಯ 5 ಸಾವಿರ ಕ್ಯೂಸೆಕ್ ನೀರು ಹರಿಸಿದರೆ ಕೆಆರ್‌ಎಸ್ ಜಲಾಶಯ ಬರಿದಾಗಲಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಮಾತನಾಡಿ, ‘ರಾಜ್ಯದ ಸಂಸದರು ಕಾವೇರಿ ವಿಚಾರವಾಗಿ ಸಂಸತ್‌ನಲ್ಲಿ ಒಂದೇ ಒಂದು ಮಾತನ್ನೂ ಆಡುತ್ತಿಲ್ಲ. ಎಲ್ಲರೂ ಮೌನ ವಹಿಸಿದ್ದಾರೆ. ಎಲ್ಲ ಸಂಸದರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಹೋರಾಟಕ್ಕೆ ಬರಬೇಕು’ ಎಂದು ಆಗ್ರಹಿಸಿದರು.

‘ರಾಜ್ಯ ಸರ್ಕಾರವು ತುರ್ತು ಅಧಿವೇಶನ ಕರೆದು ತಮಿಳುನಾಡಿಗೆ ಒಂದು ಹನಿಯನ್ನೂ ನೀರು ಬಿಡುವುದಿಲ್ಲ ಎಂಬ ತೀರ್ಮಾನ ಕೈಗೊಳ್ಳಬೇಕು. ಇದು ಮಾದರಿ ನಡೆ ಎನಿಸಲಿದೆ’ ಎಂದು ಹೇಳಿದರು.

ರಸ್ತೆತಡೆ ನಡೆಸಲು ಮುಂದಾದ ವೇಳೆ ವಾಟಾಳ್ ನಾಗರಾಜ್ ಸೇರಿದಂತೆ ಒಕ್ಕೂಟದ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದರು.

ಬಂದೋಬಸ್ತ್: ರಾಜಧಾನಿಯಲ್ಲೂ ಕಾವೇರಿ ಹೋರಾಟವು ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದು, ನಗರದ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಬಂದೋಬಸ್ತ್ ಕಲ್ಪಿಸಲಾಗಿದೆ.

ಕುಂದು ಕೊರತೆ

ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಅಹವಾಲುಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು: ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.



ನಾಗದೇವನಹಳ್ಳಿ ಮತ್ತು ಶಿರ್ಕೆ ಅಪಾರ್ಟ್‌ಮೆಂಟ್ ಸಂಪರ್ಕಿಸುವ ರಸ್ತೆ ದುಃಸ್ಥಿತಿ.

‘ರಸ್ತೆ ದುರಸ್ತಿಪಡಿಸಿ’

ಯಶವಂತಪುರ ವಿಧಾನಸಭೆ ಕ್ಷೇತ್ರದ ನಾಗದೇವನಹಳ್ಳಿ ಮತ್ತು ಶಿರ್ಕೆ ಅಪಾರ್ಟ್‌ಮೆಂಟ್ ಸಂಪರ್ಕಿಸುವ ರಸ್ತೆ ಸಂಪೂರ್ಣ ಹಾಳಾಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತಿವೆ. ಆದರೆ, ಈ ರಸ್ತೆಯ ಉದ್ದಕ್ಕೂ ಗುಂಡಿಗಳೇ ಕಾಣಿಸುತ್ತಿವೆ. ಇದರಿಂದ ವಾಹನ ಸವಾರರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದು, ವಾಹನದಟ್ಟಣೆ ಸೇರಿ ಅಪಘಾತಗಳು ಸಂಭವಿಸುವ ಅಪಾಯವಿದೆ. ರಸ್ತೆ ದುರಸ್ತಿ ಸಂಬಂಧ ಬಿಬಿಎಂಪಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಏನೂ ಪ್ರಯೋಜನವಾಗುತ್ತಿಲ್ಲ. ಸ್ಥಳೀಯ ಜನಪ್ರತಿನಿಧಿಗಳು ಈ ರಸ್ತೆಯನ್ನು ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು.

ವೆಂಕಟೇಶ್ ಕೆ.ವಿ., ಸ್ಥಳೀಯ ನಿವಾಸಿ




ಉಲ್ಲಾಳ ಜ್ಞಾನಬೋಧಿನಿ ಪ್ರೌಢಶಾಲೆ ರಸ್ತೆಯಲ್ಲಿ ಬಿದ್ದಿರುವ ಗುಂಡಿ.

‘ರಸ್ತೆ ಗುಂಡಿ ಮುಚ್ಚಿ’

ಜ್ಞಾನಭಾರತಿಯ 3ನೇ ಬಡಾವಣೆಯ (ವಳಗೇರಹಳ್ಳಿ) ವಾರ್ಡ್ ಸಂಖ್ಯೆ 130ರ ಉಲ್ಲಾಳ ಜ್ಞಾನಬೋಧಿನಿ ಪ್ರೌಢಶಾಲೆಯ ರಸ್ತೆಯು ಗುಂಡಿಗಳಿಂದ ಕೂಡಿದೆ. ವಾಹನಗಳ ಸಂಚಾರಕ್ಕೆ ಸಂಚಕಾರ ಬಂದಿದೆ. ಪ್ರತಿನಿತ್ಯ ಒಂದಲ್ಲ ಒಂದು ಅಪಘಾತಗಳು ಸಂಭವಿಸುತ್ತಿವೆ. ಜೊತೆಗೆ ವಾಹನ ದಟ್ಟಣೆ ಹೆಚ್ಚಾಗುತ್ತಿದ್ದು, ಸಂಚಾರ ಪೊಲೀಸರಿಗೆ ಇದು ಸವಾಲಾಗಿ ಪರಿಣಮಿಸಿದೆ. ಚುನಾವಣೆ ಸಮಯದಲ್ಲಿ ರಸ್ತೆ ದುರಸ್ತಿಗೊಳಿಸಲಾಗುವುದು ಎಂದು ಭರವಸೆ ನೀಡಿದ್ದ ಜನಪ್ರತಿನಿಧಿಗಳು ಇಂದು ನಾಪತ್ತೆಯಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.

ಕೆ.ಎಂ.ಸಿದ್ಧರಾಮು, ಸ್ಥಳೀಯ ನಿವಾಸಿ



ತಲ್ಲಘಟ್ಟಪುರ ಕೆರೆ ಅಂಗಳದಲ್ಲಿರುವ ವಿದ್ಯುತ್ ಕಂಬಗಳು.

‘ವಿದ್ಯುತ್ ಕಂಬಗಳಿಗೆ ದೀಪ ಅಳವಡಿಸಿ’

ಕನಕಪುರ ಮುಖ್ಯರಸ್ತೆ ಸಮೀಪದ ಬನಶಂಕರಿ 6ನೇ ಹಂತದ 4ನೇ ಟಿ ಬ್ಲಾಕ್‌ನ ಬಿಡಿಎ ಲೇಔಟ್‌ಗೆ ಹೊಂದಿ ಕೊಂಡಿರುವ ತಲಘಟ್ಟಪುರ ಕೆರೆ ಅಂಗಳದಲ್ಲಿ ಲಕ್ಷಾಂತರ ರೂಪಾಯಿ ಹಣ ವ್ಯಯಿಸಿ ವಿದ್ಯುತ್ ಕಂಬಗಳನ್ನು ಅಳವಡಿಸಿದ್ದಾರೆ. ಆದರೆ, ಅವುಗಳಿಗೆ ದೀಪವನ್ನೇ ಅಳವಡಿಸಿಲ್ಲ. ಬಿಬಿಎಂಪಿ ಮತ್ತು ಬೆಸ್ಕಾಂ ಅಧಿಕಾರಿಗಳಿಗೆ ಈ ಬಗ್ಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ರಾತ್ರಿ ವೇಳೆ ಕೆರೆಯ ಅಂಚಿನ ರಸ್ತೆಗಳಲ್ಲಿ ಓಡಾಡುವುದು ಕಷ್ಟವಾಗಿದೆ. ತಕ್ಷಣವೇ ಈ ಭಾಗದಲ್ಲಿರುವ ಎಲ್ಲ ವಿದ್ಯುತ್ ಕಂಬಗಳಿಗೂ ವಿದ್ಯುತ್ ದೀಪ ಅಳವಡಿಸಲು ಕ್ರಮ ಕೈಗೊಳ್ಳಬೇಕು.

ರಾ. ಜಯಸಿಂಹ, ತಲಘಟ್ಟಪುರದ ನಿವಾಸಿ

‘ತ್ಯಾಜ್ಯ ವಿಲೇವಾರಿಗೆ ಆಗ್ರಹ’

ಅಂಜನಾನಗರ ಕೆ.ಇ.ಬಿ. ರಸ್ತೆಯ ಪಕ್ಕದಲ್ಲಿ ರಾಶಿಗಟ್ಟಲೇ ತ್ಯಾಜ್ಯ ಹಾಕುತ್ತಿದ್ದಾರೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಇದರಲ್ಲಿ ಬಹುತೇಕ ಮನೆಯ ತ್ಯಾಜ್ಯ, ಕಟ್ಟಡ ತ್ಯಾಜ್ಯ ಸೇರಿದೆ. ರಾತ್ರಿ ಸಮಯದಲ್ಲಿ ತ್ಯಾಜ್ಯ ತಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಬಿಬಿಎಂಪಿ ಸಿಬ್ಬಂದಿ ಸಹ ಈ ಕಸವನ್ನು ವಿಲೇವಾರಿ ಮಾಡುತ್ತಿಲ್ಲ. ಇದರಿಂದ, ಈ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದೆ. ಜತೆಗೆ, ಬಿಬಿಎಂಪಿ ಸಿಬ್ಬಂದಿ ಈ ಕಸಕ್ಕೆ ಬೆಂಕಿ ಹಾಕುತ್ತಿದ್ದು, ಹೊಗೆಯಿಂದ ಜನರಿಗೆ ತೊಂದರೆಯಾಗುತ್ತಿದೆ. ಈ ಪ್ರದೇಶವನ್ನು ಸ್ವಚ್ಛಗೊಳಿಸಿ, ಈ ಪ್ರದೇಶದ ಸೌಂದರ್ಯ ಕಾಪಾಡುವ ಕೆಲಸವಾಗಬೇಕು.

ಕೌಡ್ಲೆ ರವಿ, ಸ್ಥಳೀಯ ನಿವಾಸಿ

‘ಚಿಕ್ಕಪೇಟೆ: ಮೃತ್ಯುಕೂಪವಾದ ರಸ್ತೆಗಳು’

ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದ ಬಿವಿಕೆ ಅಯ್ಯಂಗಾರ ಹಾಗೂ ಚಿಕ್ಕಪೇಟೆ ವೃತ್ತದ ರಸ್ತೆಗಳು ಸಂಪೂರ್ಣ ಹದಗೆಟ್ಟು ಹೋಗಿವೆ. ನಗರದ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ಒಂದಾಗಿರುವ ಚಿಕ್ಕಪೇಟೆಯ ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಇಂತಹ ರಸ್ತೆಯಲ್ಲಿ ವಾಹನ ಸಂಚಾರ ದುಸ್ತರವಾಗಿ ಪರಿಣಮಿಸಿದೆ. ರಸ್ತೆಯಲ್ಲಿ ದೊಡ್ಡ ದೊಡ್ಡ ಗುಂಡಿಗಳಿವೆ. ಮಳೆಗಾಲದಲ್ಲಿ ರಸ್ತೆಯು ಕೆಸರು ಗದ್ದೆಯಂತಾಗುತ್ತದೆ. ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ರಸ್ತೆ ಹೀಗಿರುವುದರಿಂದ ಹೆಚ್ಚು ವಾಹನ ದಟ್ಟಣೆಯಾಗುತ್ತದೆ. ಪ್ರತಿನಿತ್ಯ ಅಪಘಾತಗಳು ಸಂಭವಿಸುತ್ತಿವೆ. ಕೂಡಲೇ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಶಿವಪ್ರಸಾದ್ ಎಸ್., ಸ್ಥಳೀಯ ನಿವಾಸಿ



ಚಿಕ್ಕಪೇಟೆ ವೃತ್ತದ ರಸ್ತೆಯಲ್ಲಿ ನೀರು ನಿಂತಿರುವುದು

‘ಕೇಬಲ್ ಹಾವಳಿ ನಿಯಂತ್ರಿಸಿ’

ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಹೊಂದಿಕೊಂಡಿರುವ ಹೊರವರ್ತುಲ ರಸ್ತೆಯ ಎಲ್ಲ ಪಾದಚಾರಿ ಮಾರ್ಗಗಳಲ್ಲಿ ಅನಧಿಕೃತ ಕೇಬಲ್ ಹಾಕಲಾಗಿದೆ. ಭೂಮಿಯೊಳಗೆ ಹಾಕಿರುವ ಹೆಚ್ಚುವರಿ ಕೇಬಲ್ ರಸ್ತೆ ಬದಿಯ ಗಿಡಗಳಿಗೆ ಸುತ್ತಲಾಗುತ್ತಿದೆ. ಇದರಿಂದ ಗಿಡಮರಗಳ ಬೆಳವಣಿಗೆ ಕುಂಠಿತವಾಗುತ್ತದೆ. ಜತೆಗೆ, ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗುತ್ತಿದೆ. ರಾತ್ರಿ ವೇಳೆ ಕತ್ತಲಲ್ಲಿ ಕೇಬಲ್‌ಗೆ ಸಿಕ್ಕಿಕೊಂಡು ಬೀಳುವ ಅಪಾಯವಿದೆ. ಆದ್ದರಿಂದ, ಬೆಸ್ಕಾಂ ಅಧಿಕಾರಿಗಳು ಇದನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.

ಎಚ್. ತುಕಾರಾಂ, ಮಲ್ಲತ್ತಹಳ್ಳಿಯ ನಿವಾಸಿ




ಜ್ಞಾನಭಾರತಿ ಆವರಣದ ರಸ್ತೆಯೊಂದರಲ್ಲಿ ಬಿದ್ದಿರುವ ಕೇಬಲ್

ರಸ್ತೆ ದುರಸ್ತಿ

ವರದಿ ಪರಿಣಾಮ

ಜ್ಞಾನಭಾರತಿಯ ಜ್ಞಾನಗಂಗಾನಗರದ 3ನೇ ಮುಖ್ಯರಸ್ತೆಯ 2ನೇ ಅಡ್ಡರಸ್ತೆಯ ಮಧ್ಯದಲ್ಲಿದ್ದ ಗುಂಡಿಯನ್ನು ಮುಚ್ಚಲಾಗಿದೆ.

‘ಪ್ರಜಾವಾಣಿ’ ಕುಂದು ಕೊರತೆ ವಿಭಾಗದಲ್ಲಿ ಸೆಪ್ಟಂಬರ್ 17ರಂದು ‘ರಸ್ತೆ ಗುಂಡಿ ಮುಚ್ಚಿ’ ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ, ಎಚ್ಚೆತ್ತ ಬಿಬಿಎಂಪಿ ಅಧಿಕಾರಿಗಳು ರಸ್ತೆ ದುರಸ್ತಿಗೊಳಿಸಿದ್ದಾರೆ.



ಜ್ಞಾನಗಂಗಾನಗರದ 2ನೇ ಅಡ್ಡರಸ್ತೆಯ ಮಧ್ಯದಲ್ಲಿದ್ದ ಗುಂಡಿಯನ್ನು ಮುಚ್ಚಿರುವುದು.

‘ಮುನ್ನಡೆ’ ಸಂಸ್ಥೆಯಿಂದ ಗಾರ್ಮೆಂಟ್ಸ್ ಮಹಿಳೆಯರ ಸಮಾವೇಶ

‘ಕೆಲಸದ ಅವಧಿ ಹೆಚ್ಚಳ: ವಿರೋಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಜಾರಿಗೊಳಿಸಿರುವ ನೂತನ ಕಾರ್ಮಿಕ ಕಾನೂನಿನ ಪ್ರಕಾರ ಕೆಲಸದ ಅವಧಿಯನ್ನು 8 ರಿಂದ 12 ಗಂಟೆಗೆ ಹೆಚ್ಚಿಸಿರುವುದನ್ನು ಕೂಡಲೇ ಹಿಂಪಡೆಯಬೇಕು’ ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ ಒತ್ತಾಯಿಸಿದರು.

ನಗರದಲ್ಲಿ ಭಾನುವಾರ ಮುನ್ನಡೆ ಸಂಸ್ಥೆ ಆಯೋಜಿಸಿದ್ದ ‘ಗಾರ್ಮೆಂಟ್ಸ್ ಮಹಿಳೆಯರ ಸಮಾವೇಶ’ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಕಾರ್ಮಿಕ ಕಾನೂನಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡುವ ಅವಶ್ಯಕತೆ ಇದೆ. ಸದ್ಯ ಒಂದು ದಿನಕ್ಕೆ ₹450 ವೇತನ ನೀಡಲಾಗುತ್ತಿದೆ. ಇದರಿಂದ ಜೀವನ ನಿರ್ವಹಣೆಗೆ ಕಷ್ಟವಾಗಿದೆ. ಕಾರ್ಮಿಕರ ಜೀವನಮಟ್ಟ ನಿರ್ವಹಣೆಗೆ ಬೇಕಾದ ₹33,920 ವೇತನ ನಿಗದಿಪಡಿಸುವಂತೆ ಸರ್ಕಾರದ ಮೇಲೆ ಒತ್ತಡ ಹಾಕಲಾಗುವುದು’ ಎಂದರು.

‘ಗಾರ್ಮೆಂಟ್ಸ್ ಉದ್ಯಮವು ದೇಶದ ಆರ್ಥಿಕತೆಗೆ ಶೇ 10ರಷ್ಟು ಕೊಡುಗೆ ನೀಡುತ್ತಿದೆ. ಆದರೆ, ಐಟಿಬಿಟಿ ಕ್ಷೇತ್ರಕ್ಕೆ ನೀಡಿರುವ ಸೌಕರ್ಯಗಳನ್ನು ಗಾರ್ಮೆಂಟ್ಸ್ ಉದ್ಯಮಕ್ಕಿಲ್ಲ, ಈ ತಾರತಮ್ಯವನ್ನು ಸರಿಪಡಿಸಬೇಕು’ ಎಂದು ಹೇಳಿದರು. ‘ತಂತ್ರಜ್ಞಾನದ ಪರಿಣಾಮದಿಂದ ಈ ಉದ್ಯಮದ ಮೇಲೆ ಯಾವ ರೀತಿ ಪರಿಣಾಮ ಬೀರಲಿದೆ ಎಂಬುದನ್ನು ಸರ್ಕಾರ ಅಧ್ಯಯನ ಮಾಡಬೇಕು. ಆದರೆ, ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಕಾರ್ಮಿಕರ ಪರವಾಗಿ ಮಾತನಾಡುವ ಜನಪ್ರತಿನಿಧಿಗಳ ಸಂಖ್ಯೆ ಬಹಳ ಕಡಿಮೆಯಾಗಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಯಶೋಧ ಪಿ.ಎಚ್., ಸಮೃದ್ಧಿ ಸಂಸ್ಥೆಯ ನಿರ್ದೇಶಕ ಬಿ. ಶಿವರಾಜೇಗೌಡ, ಸಾಧನ ಸಂಸ್ಥೆಯ ನಿರ್ದೇಶಕಿ ಕೆ. ಗಾಯಿತ್ರಿ ಇದ್ದರು.



ನಗರದಲ್ಲಿ ಭಾನುವಾರ ನಡೆದ ‘ಗಾರ್ಮೆಂಟ್ಸ್ ಮಹಿಳೆಯರ ಸಮಾವೇಶ’ದಲ್ಲಿ ಮಹಿಳಾ ಕಾರ್ಮಿಕರು ಸಂವಿಧಾನದ ಪೀಠಿಕೆ ಓದಿದರು —ಪ್ರಜಾವಾಣಿ ಚಿತ್ರ

‘ದುಂಡು ಮೇಜಿನ ಸಭೆ’

‘ಗಾರ್ಮೆಂಟ್ಸ್ ಮಹಿಳೆಯರ ಸಮಸ್ಯೆಗಳನ್ನು ನಿವಾರಿಸಲು ಸಚಿವರಾದ ಸಂತೋಷ್ ಲಾಡ್, ಲಕ್ಷ್ಮಿ ಹೆಬ್ಬಾಳ್ಕರ್, ಕಾರ್ಮಿಕ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳೊಂದಿಗೆ ಶೀಘ್ರವೇ ದುಂಡು ಮೇಜಿನ ಸಭೆ ಹಮ್ಮಿಕೊಳ್ಳಲಾಗುವುದು. ಇದರಲ್ಲಿ ಗಾರ್ಮೆಂಟ್ಸ್ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರಗಳ ಕಂಡುಕೊಳ್ಳುವ ಪ್ರಯತ್ನ ಮಾಡಲಾಗುವುದು’ ಎಂದು ಸಿಂಧ್ಯ ಭರವಸೆ ನೀಡಿದರು.

ಶಿಕ್ಷಣ ನೀತಿ: ‘ಎ.ಸಿ ಶಿಕ್ಷಣ ತಜ್ಞರ ಹೊರಗಿಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ರೂಪಿಸಲು ರಚಿಸಲಾಗುವ ಸಮಿತಿಯಲ್ಲಿ ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ಕಾರ್ಯನಿರ್ವಹಿಸುವ ಶಿಕ್ಷಣ ತಜ್ಞರನ್ನು ಹೊರಗಿಡಬೇಕು ಎಂದು ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ ಹೇಳಿದರು.

ಕರ್ನಾಟಕ ಶಿಕ್ಷಣ ನೀತಿ ರೂಪಿಸುವ ಕುರಿತು ಭಾನುವಾರ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಆಯೋಜಿಸಿದ್ದ ದುಂಡುಮೇಜಿನ ಸಭೆಯಲ್ಲಿ ಅವರು ಮಾತನಾಡಿದರು.

‘ರಾಜ್ಯ ಸರ್ಕಾರಗಳಿಗೆ ತನ್ನದೇ ಆದ ಶಾಲಾ ಶಿಕ್ಷಣ ನೀತಿ ರೂಪಿಸುವ ಅವಕಾಶವನ್ನು ಸಂವಿಧಾನವೇ ನೀಡಿದೆ. ಅಂತಹ ಅವಕಾಶವನ್ನು ಕರ್ನಾಟಕ ಸರ್ಕಾರ ಬಳಸಿಕೊಳ್ಳುತ್ತಿರುವುದು ಶ್ಲಾಘನೀಯ. ಅದಕ್ಕಾಗಿ ರಚಿಸಲಾಗುತ್ತಿರುವ ಸಮಿತಿಯಲ್ಲಿ ಶಾಲಾ ಹಂತದಲ್ಲಿ ಶ್ರಮಿಸಿದ ಶಿಕ್ಷಣ ತಜ್ಞರು, ಶಿಕ್ಷಣದ ಮೂಲ ವಾರಸುದಾರರಾದ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು, ಅಂಗನವಾಡಿ ಶಿಕ್ಷಕಿಯರು, ಲಿಂಗತ್ವ ಅಲ್ಪಸಂಖ್ಯಾತ ಪ್ರತಿನಿಧಿಗಳಿಗೂ ಸ್ಥಾನ ನೀಡಬೇಕು’ ಎಂದು ಸಲಹೆ ನೀಡಿದರು.

ರಾಜ್ಯ ಸರ್ಕಾರ ರಚಿಸಿದ ಸಮಿತಿ ಶಿಕ್ಷಣ ನೀತಿ ರೂಪಿಸುವ ಮೊದಲು ವಿಶ್ವಸಂಸ್ಥೆಯ ಮಕ್ಕಳ ಒಡಂಬಡಿಕೆಗಳು, ಸುಸ್ಥಿರ ಅಭಿವೃದ್ಧಿಯ ಗುರಿಗಳು, ಜ್ಞಾನ ಆಯೋಗ ಸೇರಿದಂತೆ ವಿವಿಧ ಸಮಿತಿಗಳು ಕಾಲಕಾಲಕ್ಕೆ ಮಾಡಿದ ಶಿಫಾರಸುಗಳು, ಸಂವಿಧಾನದ ಮೂಲ ಆಶಯಗಳನ್ನು ಬುನಾದಿಯಾಗಿ ಪರಿಗಣಿಸಬೇಕು. ಸಾರ್ವಜನಿಕ ಹಿತಾಸಕ್ತಿ ಸಂರಕ್ಷಿಸುವ, ಸಾಮಾಜಿಕ ಒಳಿತಿನ, ಸಾಮರಸ್ಯ, ಸಮಾನತೆ ಪ್ರಧಾನ, ಸಹಬಾಳ್ವೆಯ ಶಿಕ್ಷಣದ ಪಠ್ಯಚೌಕಟ್ಟು ರೂಪಿಸಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಐ ಮುಖಂಡ ಸಿದ್ದನಗೌಡ ಪಾಟೀಲ, ಕೇಂದ್ರ ಸರ್ಕಾರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮೂಲಕ ಪುರಾಣವನ್ನೇ ಇತಿಹಾಸವೆಂದು ಬಿಂಬಿಸಲು ಹೊರಟಿದೆ. ಪೌರಾಣಿಕ ಪಾತ್ರಗಳು, ಕಾಲ್ಪನಿಕ ಘಟನೆಗಳಿಗೆ ವೈಜ್ಞಾನಿಕ ಲೇಪ ಹಚ್ಚಿ, ವಿದ್ಯಾರ್ಥಿಗಳನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.


ಲೇಖಕಿ ವಸುಂಧರಾ ಭೂಪತಿ, ಒಂದೆಡೆ ಸಂಸ್ಥೆಯ ಮುಖ್ಯಸ್ಥೆ ಅಕ್ಕೈ ಪದ್ಮಸಾಲಿ, ಎಐಎಸ್‌ಎಫ್ ಅಧ್ಯಕ್ಷೆ ವೀಣಾ ನಾಯ್ಕ, ಕಾರ್ಯದರ್ಶಿ ಲವಕುಮಾರ್ ಉಪಸ್ಥಿತರಿದ್ದರು.



ನಗರದಲ್ಲಿ ಭಾನುವಾರ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಕರ್ನಾಟಕ ಶಿಕ್ಷಣ ನೀತಿ ಕುರಿತು ಆಯೋಜಿಸಿದ್ದ ದುಂಡುಮೇಜಿನ ಸಭೆಯಲ್ಲಿ ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಮಾತನಾಡಿದರು. ಅಕ್ಕೈ ಪದ್ಮಶಾಲಿ, ವಸುಂಧರಾ ಭೂಪತಿ, ಸಿದ್ಧನಗೌಡ ಪಾಟೀಲ ಇದ್ದರು ಪ್ರಜಾವಾಣಿ ಚಿತ್ರ

ಐವರಿಗೆ ‘ಆಶ್ವಾಸನ’ ಪ್ರಶಸ್ತಿ

ಬೆಂಗಳೂರು: ನಗರದ ಆಶ್ವಾಸನ ಫೌಂಡೇಷನ್ ನೀಡುವ 2023ನೇ ಸಾಲಿನ ‘ಆಶ್ವಾಸನ ಪ್ರಶಸ್ತಿ’ಗೆ ಐವರು ಸಾಧಕರನ್ನು ಆಯ್ಕೆ ಮಾಡಲಾಗಿದೆ.



ಅಹಮ್ಮದ್ ಸಾಬ್



ಗಾಯತ್ರಿ



ಸತ್ಯ ಹಾಸ್ಯಗಾರ



ನಾರಾಯಣ ಹೆಗಡೆ



ಜಯಮ್ಮ ಎಸ್.

ಶತಾಯುಷಿಯಾಗಿರುವ ಮೀರಜ್‌ನ ಸಿತಾರ್ ತಯಾರಕ ಹಾಜಿ ಅಹಮ್ಮದ್ ಸಾಬ್, ಯಕ್ಷಗಾನ ಕಲಾವಿದರಾದ ಸತ್ಯ ಹಾಸ್ಯಗಾರ ಕರ್ಕಿ, ನಾರಾಯಣ ಹೆಗಡೆ, ಶಿವಮೊಗ್ಗದ ರಂಗ ಕಲಾವಿದೆ ಜಯಮ್ಮ ಎಸ್. ಹಾಗೂ ಬೆಂಗಳೂರಿನ ಗೊಂಬೆಯಾಟದ ಕಲಾವಿದೆ ಗಾಯತ್ರಿ ರಂಗನಾಥ ರಾವ್ ಅವರನ್ನು ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪ್ರಶಸ್ತಿಯು ₹ 15 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ.

‘ಸಪ್ತಕ’ ಸಂಸ್ಥೆಯ ಜಿ.ಎಸ್. ಹೆಗಡೆ ಅವರ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಅ.7ರಂದು ಲ್ಯಾವೆಲ್ಲೆ ರಸ್ತೆಯಲ್ಲಿರುವ ರೋಟರಿ ಕ್ಲಬ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷೆ ಮಾಳವಿಕಾ ಉಭಯಕರ್ ಬಿಜೂರ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸ್ವಾಗತ ಸಮಾರಂಭ: ಅತಿಥಿಗಳು: ಟಿ.ಜಿ. ಸೀತಾರಾಮ್, ಗಿರೀಶ್ ಎಸ್., ಅಧ್ಯಕ್ಷತೆ: ಎಂ.ಆರ್. ಜಯರಾಮ್, ಉಪಸ್ಥಿತಿ: ಎಂ.ಆರ್. ಸೀತಾರಾಮ್, ಎಂ.ಆರ್. ರಾಮಯ್ಯ, ಬಿ.ಎಸ್. ರಾಮಪ್ರಸಾದ್, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯ ನಗರ, ಬೆಳಿಗ್ಗೆ 11

ವಿಶ್ವ ಕಾಫಿ ಸಮ್ಮೇಳನ: ಅತಿಥಿಗಳು: ಪೀಯೂಷ್ ಗೋಯಲ್, ಉಪಸ್ಥಿತಿ: ಜೂ ಕುಲಿ, ಮಾಸ್ಮಿಲಿಯಾನೋ ಫ್ಯಾಬಿಯನ್, ಸುರೇಶ್ ನಾರಾಯಣ್, ಸುನಿಲ್ ಡಿಸೋಜಾ, ಚಲ್ಲಾ ಶ್ರೀನಾಥ್, ಶಿವ ಕೃಷ್ಣಮೂರ್ತಿ, ಎನ್. ಸಾತಪ್ಪನ್, ಆಯೋಜನೆ: ಅಂತರರಾಷ್ಟ್ರೀಯ ಕಾಫಿ ಸಂಘಟನೆ, ಸ್ಥಳ: ಬೆಂಗಳೂರು ಅರಮನೆ, ಮಧ್ಯಾಹ್ನ 3

‘ದಿವ್ಯ ದರ್ಶನ’ ನಾಟಕ ಪ್ರದರ್ಶನ: ರಚನೆ: ಎನ್.ಎಸ್. ರಾವ್, ನಿರ್ದೇಶನ: ಬಿ.ವಿ. ವೇಣುಗೋಪಾಲ್, ಉಪಸ್ಥಿತಿ: ಚಂದ್ರಶೇಖರ್, ದಕ್ಷಿಣಮೂರ್ತಿ, ಬೇಲೂರು ರಘುನಂದನ್, ದೊಡ್ಮನೆ ವೆಂಕಟೇಶ್, ನಾ. ಶ್ರೀಧರ್, ಜಿ.ಪಿ.ಒ. ಚಂದ್ರು, ಆಯೋಜನೆ: ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ: ನಯನ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6

ಪ್ರವಚನ ವಾಹಿನಿ: ‘ಭಾಗವತದ ಪಂಚಗೀತೆಗಳು’ ಕುರಿತ ಉಪನ್ಯಾಸ: ರಮಾ ಶ್ರೀನಿವಾಸ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಸುಧಾಮೂರ್ತಿ ಹೆಸರಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಮೆರಿಕದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಅವರು ಅತಿಥಿಯಾಗಿ ಆಗಮಿಸಲಿದ್ದಾರೆ’ ಎಂದು ಸುಳ್ಳು ಜಾಹೀರಾತು ನೀಡಿ ವಂಚಿಸಿದ್ದ ಇಬ್ಬರು ಮಹಿಳೆಯರ ವಿರುದ್ಧ ಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಧಾಮೂರ್ತಿ ಅವರ ಸಹಾಯಕರಾದ ಮಮತಾ ಸಂಜಯ್ ಅವರು ನೀಡಿದ ದೂರು ಆಧರಿಸಿ ಲಾವಣ್ಯ ಹಾಗೂ ಶ್ರುತಿ ಎಂಬುವವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಏ.5ರಂದು ಕನ್ನಡ ಕೂಟ ಆಫ್ ನಾರ್ತ್ ಕ್ಯಾಲಿಫೋರ್ನಿಯಾದ (ಕೆಕೆಎನ್‌ಸಿ) ವಾರ್ಷಿಕೋತ್ಸವದ ಆಹ್ವಾನ ಪತ್ರಿಕೆಯು ಇ-ಮೇಲ್ ಮೂಲಕ ಸುಧಾಮೂರ್ತಿ ಅವರಿಗೆ ಬಂದಿತ್ತು. ಆದರೆ, ಆ ದಿನ ಸುಧಾಮೂರ್ತಿ ಅವರು ಭಾಗಿಯಾಗಲು ಸಾಧ್ಯವಿಲ್ಲ ಎಂದು ಹೇಳಿ ಪ್ರತಿಕ್ರಿಯಿಸಿದ್ದರು. ಆದರೂ, ಸುಧಾಮೂರ್ತಿ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಅವರ ಫೋಟೊ ಹಾಗೂ ಹೆಸರು ಬಳಸಿ ಜಾಹೀರಾತು ನೀಡಲಾಗಿತ್ತು. ಜಾಹೀರಾತು ಗಮನಿಸಿದ್ದ ಮಮತಾ ಅವರು ಆಯೋಜಕರ ಬಳಿ ವಿಚಾರಿಸಿದಾಗ ವಂಚನೆ ಪ್ರಕರಣ ಗೊತ್ತಾಗಿತ್ತು’ ಎಂದು ಮೂಲಗಳು ಹೇಳಿವೆ.

‘ನಾನು ಸುಧಾಮೂರ್ತಿ ಅವರ ಸಹಾಯಕಿ’ ಎಂದು ಆರೋಪಿ ಲಾವಣ್ಯ ಪರಿಚಯಿಸಿಕೊಂಡಿದ್ದರು. ಕಾರ್ಯಕ್ರಮಕ್ಕೆ ಸುಧಾಮೂರ್ತಿ ಬರುವುದಾಗಿಯೂ ಸುಳ್ಳು ಹೇಳಿದ್ದರು’ ಎಂದು ಪೊಲೀಸರು ಹೇಳಿದ್ದಾರೆ.

‘ಸುಧಾಮೂರ್ತಿ ಹೆಸರನ್ನು ಮುಖ್ಯ ಅತಿಥಿ ಎಂದು ನಮೂದಿಸಿ ಜಾಹೀರಾತು ನೀಡಲಾಗಿತ್ತು. ಲಾವಣ್ಯ ಜತೆಗೆ ಶ್ರುತಿಯೂ ಸೇರಿಕೊಂಡು ಅನಧಿಕೃತವಾಗಿ ಟಿಕೆಟ್ ಮಾರಾಟ ಮಾಡಿದ್ದರು. ಟಿಕೆಟ್ ದರ ತಲಾ 40 ಡಾಲರ್ ಸಂಗ್ರಹಿಸಲಾಗಿದೆ. ಲಾವಣ್ಯ ಎಂಬಾಕೆ ಸುಧಾಮೂರ್ತಿ ಹೆಸರು ದುರ್ಬಳಕೆ ಮಾಡಿಕೊಂಡಿದ್ದಾರೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಆರೋಪಿಗಳು ಇಬ್ಬರು ವಿದೇಶದಲ್ಲಿರುವ ಸಾಧ್ಯತೆಯಿದೆ. ಅವರು ಎಷ್ಟು ಟಿಕೆಟ್ ಮಾರಾಟ ಮಾಡಿದ್ದರು ಎಂಬುದು ತನಿಖೆಯಿಂದ ತಿಳಿಯಲಿದೆ’ ಎಂದು ಪೊಲೀಸರು ಹೇಳಿದರು.

ಕಟ್ಟಡದಿಂದ ಜಿಗಿದು ಮಹಿಳೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯ ಭುವನೇಶ್ವರಿನಗರದ ನಾಲ್ಕನೇ ಕ್ರಾಸ್ ನಿವಾಸಿ, ಗೃಹಿಣಿ ರಮ್ಯಾ (27) ಎಂಬುವರು ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಒಂದೂವರೆ ವರ್ಷದ ಹಿಂದೆ ರಮ್ಯಾ ಅವರ ವಿವಾಹ ವೆಂಕಟೇಶ್ ಜತೆಗೆ ನಡೆದಿತ್ತು. ಶನಿವಾರ ರಾತ್ರಿ 8 ಗಂಟೆ ಸುಮಾರಿಗೆ ಕಟ್ಟಡದ ಮೂರನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

₹3.36 ಲಕ್ಷ ದಂಡ ವಸೂಲಿ: ಬೆಂಗಳೂರು: ಉತ್ತರ ಮತ್ತು ಈಶಾನ್ಯ ಉಪವಿಭಾಗದ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ, ನಿಯಮ ಉಲ್ಲಂಘನೆ ಹಾಗೂ ಪ್ರಯಾಣಿಕರಿಂದ ಹೆಚ್ಚು ಹಣ ಪಡೆಯುತ್ತಿದ್ದ 670 ಆಟೊ ಚಾಲಕರ ವಿರುದ್ಧ ಪ್ರಕರಣಗಳನ್ನು ದಾಖಲಿಸಿದ್ದಾರೆ. ಅವರಿಂದ ₹ 3.36 ಲಕ್ಷ ದಂಡ ವಸೂಲಿ ಮಾಡಲಾಗಿದೆ.

ಸೆ.14ರಿಂದ 23ರವರೆಗೆ ಸಂಚಾರ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು. ‘ನಗರದ ಬಹುತೇಕ ಆಟೊಗಳ ಚಾಲಕರು, ಪ್ರಯಾಣಿಕರು ಕರೆದ ಸ್ಥಳಗಳಲ್ಲಿ ಬರುವುದಿಲ್ಲ. ಬುಕ್ಕಿಂಗ್ ರದ್ದು ಮಾಡುತ್ತಾರೆ. ರಾತ್ರಿ 10 ಗಂಟೆಯ ಬಳಿಕ ಚಾಲಕರು ಹೇಳಿದಷ್ಟು ಹಣವನ್ನು ಕೊಟ್ಟು ಪ್ರಯಾಣಿಸಬೇಕಿದೆ ಎಂಬ ದೂರುಗಳು ಬಂದಿವೆ’ ಎಂದು ಪೊಲೀಸರು ಹೇಳಿದರು.

ಅಪಘಾತ: ಎಂಜಿನಿಯರ್ ಸಾವು

ಬೆಂಗಳೂರು: ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಎಂಜಿನಿಯರ್ ಕಾರ್ತಿಕೇಯನ್ (54) ಎಂಬುವರು ಮೃತಪಟ್ಟಿದ್ದಾರೆ.

ಕಾರ್ತಿಕೇಯನ್ ಕಸ್ತೂರಿ ರಂಗನ್ ನಗರದಲ್ಲಿ ನೆಲೆಸಿದ್ದರು. ಸೆ.21ರಂದು ರಸ್ತೆ ದಾಟುತ್ತಿದ್ದ ವೇಳೆ ವೇಗವಾಗಿ ಬಂದ ಬೈಕ್‌ವೊಂದು ಅವರಿಗೆ ಡಿಕ್ಕಿಯಾಗಿತ್ತು. ಸವಾರ ಬೈಕ್ ನಿಲ್ಲಿಸದೇ ಪರಾರಿಯಾಗಿದ್ದ. ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶನಿವಾರ ಮಧ್ಯಾಹ್ನ ಮೃತಪಟ್ಟಿದ್ದಾರೆ. ಬೈಕ್ ಸವಾರನ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ಅ. 1ರಂದು ಸ್ವಚ್ಛತೆಗಾಗಿ ಅಭಿಯಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಜನ ಅಕ್ಟೋಬರ್ 1ರಂದು ಸ್ವಚ್ಛತೆಗಾಗಿ ಶ್ರಮದಾನದಲ್ಲಿ ಪಾಲ್ಗೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಕರೆ ನೀಡಿದ್ದಾರೆ.

ಇದು ಅಕ್ಟೋಬರ್ 1ರಂದು ದೇಶದಾದ್ಯಂತ ಬೆಳಿಗ್ಗೆ 10 ಗಂಟೆಯಿಂದ 11 ಗಂಟೆಯವರೆಗೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

‘ಸ್ವಚ್ಛತೆಗಾಗಿ ದೊಡ್ಡ ಕಾರ್ಯಕ್ರಮವೊಂದು ಭಾನುವಾರ ನಡೆಯಲಿದೆ. ನೀವು ಕೂಡ ಈ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕು. ನೀವು ನಿಮ್ಮ ಬೀದಿಗಳಲ್ಲಿ, ನೆರೆಹೊರೆಯಲ್ಲಿ, ಉದ್ಯಾನದಲ್ಲಿ ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಇದರಲ್ಲಿ ಭಾಗಿಯಾಗಬಹುದು’ ಎಂದು ಮೋದಿ ಅವರು ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ಗಾಂಧಿ ಜಯಂತಿ ಸಂದರ್ಭದಲ್ಲಿ ಜನ ಖಾದಿ ಉತ್ಪನ್ನಗಳನ್ನು ಖರೀದಿಸಬೇಕು ಎಂದು ಮೋದಿ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಸವಾರರು ಸಾವು

ಚಿಂತಾಮಣಿ: ಚಿಂತಾಮಣಿ-ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿ ಪೆರಮಾಚನಹಳ್ಳಿ ಸಮೀಪ ಶನಿವಾರ ತಡರಾತ್ರಿ ಎರಡು ಬೈಕ್ ಮುಖಾಮುಖಿ ಡಿಕ್ಕಿಯಾಗಿ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಸವಾರರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ತಾಲ್ಲೂಕಿನ ಕೈವಾರ ಹೋಬಳಿ ಹುಲುಗುಮ್ಮನಹಳ್ಳಿ ಗ್ರಾಮದ ವೆಂಕಟೇಶ್ (31) ಮತ್ತು ಚಿಲಕಲನೇರ್ಪು ಗ್ರಾಮದ ಶ್ರೀನಿವಾಸ್ (36) ಮೃತಪಟ್ಟವರು.

ಸರಕು ಸಾಗಣೆ ವಾಹನಗಳ ವೇಗಕ್ಕಿಲ್ಲ ಕಡಿವಾಣ, ಅಪಘಾತಗಳ ಸಂಖ್ಯೆ ಹೆಚ್ಚಳ

ತುಮಕೂರು ರಸ್ತೆ: ವಾಹನ ದಟ್ಟಣೆ ತೀವ್ರ

• ಆದಿತ್ಯ ಕೆ.ಎ.

ಬೆಂಗಳೂರು: ನಗರದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನ ದಟ್ಟಣೆ ಸಮಸ್ಯೆ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದೆ. ಇದರಿಂದ ವಾಹನ ಸವಾರರು ಹೈರಾಣಾಗುತ್ತಿದ್ದಾರೆ.

ಅದರಲ್ಲೂ ತುಮಕೂರು ರಸ್ತೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳು ನಿತ್ಯವೂ ಸಾಲುಗಟ್ಟಿ ನಿಲ್ಲುತ್ತಿವೆ. ಎರಡು ವರ್ಷಗಳ ಹಿಂದೆಯೇ ಪೀಣ್ಯದ ಮೇಲ್ಸೇತುವೆಯ ಪಿಲ್ಲರ್‌ವೊಂದರಲ್ಲಿ ಬಿರುಕು ಕಾಣಿಸಿದ್ದರಿಂದ ಭಾರಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಅದು ಈಗಲೂ ಮುಂದುವರಿದಿದೆ.

ಪಿಲ್ಲರ್ ದುರಸ್ತಿ ಪಡಿಸಿ ಸೆಪ್ಟೆಂಬರ್ ಮೊದಲ ವಾರದಲ್ಲೇ ಮೇಲ್ಸೇತುವೆ-ಯಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ಅನುಮತಿ ನೀಡಲಾಗುವುದು ಎಂದು ಹೆದ್ದಾರಿ ಪ್ರಾಧಿಕಾರವು ಭರವಸೆ ನೀಡಿತ್ತು. ಅದು ಇನ್ನೂ ಸಾಧ್ಯವಾಗಿಲ್ಲ.

ಪ್ರಮುಖ ಜಂಕ್ಷನ್‌ಗಳಲ್ಲಿ ದಟ್ಟಣೆ: ನೆಲಮಂಗಲ ಕ್ರಾಸ್, ಟಿ.ದಾಸರಹಳ್ಳಿ, ಜಾಲಹಳ್ಳಿ ಕ್ರಾಸ್, ಪೀಣ್ಯ, ಗೊರಗುಂಟೆಪಾಳ್ಯ ಜಂಕ್ಷನ್‌ನಲ್ಲಿ ಉದ್ದಕ್ಕೂ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ. ಅದರಲ್ಲೂ ಗೊರಗುಂಟೆಪಾಳ್ಯದಲ್ಲಿ ವಾಹನಗಳು ಮುಂದಕ್ಕೆ ಸಾಗಲು ಹಲವು ನಿಮಿಷಗಳೇ ಹಿಡಿಯುತ್ತಿವೆ. ಗೊರಗುಂಟೆಪಾಳ್ಯದ ಮೂಲಕ ಮೈಸೂರು ರಸ್ತೆ, ಸುಂಕದಕಟ್ಟೆ, ಕೆಂಗೇರಿ, ಹೆಬ್ಬಾಳ, ಯಲಹಂಕ, ಯಶವಂತಪುರ, ಮೆಜೆಸ್ಟಿಕ್, ರಾಜಾಜಿನಗರದ ಕಡೆಗೆ ವಾಹನಗಳು ಸಾಗಬೇಕು. ಹೀಗಾಗಿ ಈ ಜಂಕ್ಷನ್ ನಿತ್ಯ ದಟ್ಟಣೆ ಪ್ರದೇಶವಾಗಿ ಕಂಡುಬರುತ್ತಿದೆ.



ವಾರಾಂತ್ಯದಲ್ಲಿ ಗೊರಗುಂಟೆಪಾಳ್ಯದಲ್ಲಿ ಕಂಡುಬರುವ ವಾಹನ ದಟ್ಟಣೆ. ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ರಾಜ್ಯದ 20ಕ್ಕೂ ಹೆಚ್ಚು ಜಿಲ್ಲೆ ಹಾಗೂ ಹೊರ ರಾಜ್ಯದಿಂದ ಈ ಮಾರ್ಗದಲ್ಲಿ ನಿತ್ಯ 1 ಲಕ್ಷಕ್ಕೂ ಹೆಚ್ಚು ವಾಹನಗಳು ಸಾಗುತ್ತವೆ. ರಾತ್ರಿ ವೇಳೆಯಲ್ಲಿ 40 ಸಾವಿರಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತವೆ. ಮೇಲ್ಸೇತುವೆಯಲ್ಲಿ ಅವಕಾಶವಿಲ್ಲದ ಕಾರಣ ಬಸ್, ಸರಕು ಸಾಗಣೆ ಲಾರಿಗಳು ಕೆಳರಸ್ತೆಯಲ್ಲೇ ಸಂಚರಿಸುತ್ತಿವೆ. ಇದರಿಂದಲೂ ಪಾದಚಾರಿಗಳು ಹಾಗೂ ಬೈಕ್ ಸವಾರರಿಗೆ ತೀವ್ರ ತೊಂದರೆ ಎದುರಾಗುತ್ತಿದೆ. ಮೇಲ್ಸೇತುವೆ ದುರಸ್ತಿಯಾದರೆ ತುಸು ಸಮಸ್ಯೆ ತಗ್ಗಲಿದೆ.

ಅಪಘಾತಗಳ ವೃತ್ತ: ಸಂಜೆ ಹಾಗೂ ರಾತ್ರಿ ವೇಳೆ ಸರಕು ಸಾಗಣೆ ವಾಹನಗಳು ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಬರುತ್ತಿವೆ. ಯಶವಂತಪುರ ಎಂಪಿಎಂಸಿಗೂ ಕೃಷಿ ಉತ್ಪನ್ನ ತುಂಬಿದ ಸಾವಿರಾರು ಲಾರಿಗಳು ಬರುತ್ತಿದ್ದು, ಇದು ದಟ್ಟಣೆಗೆ ಕಾರಣವಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ಕೆಲವು ಕಡೆ ಏಕಮುಖ ಸಂಚಾರ ವ್ಯವಸ್ಥೆಯಿದ್ದರೂ ಸವಾರರು ಅದನ್ನು ಲೆಕ್ಕಿಸದೇ ವಾಹನ ಚಲಾಯಿಸುತ್ತಿದ್ದಾರೆ. ರಾತ್ರಿ 8ರ ನಂತರ ಲಾರಿಗಳ ಅತಿವೇಗದ ಸಂಚಾರವು ಅಪಘಾತಕ್ಕೆ ಕಾರಣವಾಗುತ್ತಿದೆ.

‘ಕೆಲವು ವೃತ್ತಗಳಲ್ಲಿ ಸಂಚಾರ ಪೊಲೀಸರು ಕರ್ತವ್ಯದಲ್ಲಿದ್ದರೂ ಅವರನ್ನು ಲೆಕ್ಕಿಸದೇ ವಾಹನಗಳು ವೇಗವಾಗಿ ನುಗ್ಗುತ್ತಿವೆ’ ಎಂದು ದಾಸರಹಳ್ಳಿ ನಿವಾಸಿ ಸುನಿಲ್ ದೂರುತ್ತಾರೆ.

ತುಮಕೂರು ರಸ್ತೆ, ಹೆಬ್ಬಾಳ ರಸ್ತೆ ಸೇರಿದಂತೆ ವಾಹನ ದಟ್ಟಣೆ ಪ್ರದೇಶಕ್ಕೆ ಸಂಚಾರ ಹಾಗೂ ರಸ್ತೆ ಸುರಕ್ಷತೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅವರು ಇತ್ತೀಚೆಗೆ ಭೇಟಿ ನೀಡಿದ್ದರು. ಸಂಚಾರ ಸುಧಾರಣೆಗೆ ಕೆಲವು ಸೂಚನೆಗಳನ್ನು ನೀಡಿದ್ದರೂ ಪಾಲನೆ ಆಗುತ್ತಿಲ್ಲ ಎಂದು ಸ್ಥಳೀಯರು ದೂರಿದ್ದಾರೆ.

ಇತ್ತೀಚಿನ ಅಪಘಾತ ಪ್ರಕರಣಗಳು

- ದಾಸರಹಳ್ಳಿ ಮೆಟ್ರೊ ನಿಲ್ದಾಣ ಬಳಿಯ ಸರ್ವೀಸ್ ರಸ್ತೆಯಲ್ಲಿ ಬೈಕ್‌ನಲ್ಲಿ ತೆರಳುತ್ತಿದ್ದ ದಾಸಪ್ಪ (42) ಅವರ ತಲೆಯ ಮೇಲೆ ಬಿಎಂಟಿಸಿ ಬಸ್ಸಿನ ಚಕ್ರ ಹರಿದು ಮೃತಪಟ್ಟಿದ್ದರು.
- ಜಾಲಹಳ್ಳಿ ವೃತ್ತದಲ್ಲಿ ಖಾಸಗಿ ಬಸ್ ಹಾಗೂ ದ್ವಿಚಕ್ರ ವಾಹನ ನಡುವೆ ನಡೆದಿದ್ದ ಅಪಘಾತದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿ ದಿಶಾ (18) ಮೃತಪಟ್ಟಿದ್ದರು.
- ಪೀಣ್ಯ ಮೇಲ್ಸೇತುವೆಯಲ್ಲಿ ವಾಹನವೊಂದು ಡಿಕ್ಕಿಯಾಗಿ ರುದ್ರೇಶ್ (36) ಹಾಗೂ ಪತ್ನಿ ಸುನೀತಾ(30) ಮೃತಪಟ್ಟಿದ್ದರು.
- ಪೀಣ್ಯದಲ್ಲಿ ಕಳೆದ ವಾರ ಲಾರಿ ಚಕ್ರಕ್ಕೆ ಸಿಲುಕಿ ಪೌರ ಕಾರ್ಮಿಕ ಗಂಗಾಧರ (49) ಎಂಬವರು ಮೃತಪಟ್ಟಿದ್ದರು.

‘ವಿಶೇಷ ಕಮಿಷನರ್ ಇಲ್ಲ’

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಂಚಾರ ವಿಭಾಗಕ್ಕೆ ವಿಶೇಷ ಕಮಿಷನರ್ ನೇಮಿಸಲಾಗಿತ್ತು. ಅವರು ಸಂಚಾರ ಸುಧಾರಣೆಗೆ ಹಲವು ಕ್ರಮ ಕೈಗೊಂಡಿದ್ದರು. ಈಗ ಸಂಚಾರ ವಿಭಾಗದ ಜಂಟಿ ಕಮಿಷನರ್ ಮಾತ್ರವೇ ಇದ್ದಾರೆ. ವಿಶೇಷ ಕಮಿಷನರ್ ಅವರನ್ನು ಮತ್ತೆ ನೇಮಿಸುವಂತೆ ಎಫ್‌ಕೆಸಿಸಿಐನಲ್ಲಿ ನಡೆದ ಸಂವಾದದಲ್ಲಿ ನಗರ ಪೊಲೀಸ್ ಕಮಿಷನರ್‌ಗೆ ಮನವಿ ಸಲ್ಲಿಸಲಾಗಿತ್ತು. ಇನ್ನೂ ನೇಮಕವಾಗಿಲ್ಲ.

ರೋಗಿಗಳ ಪರದಾಟ



ತುಮಕೂರು ರಸ್ತೆಯ ಎಲ್ಲ ಜಂಕ್ಷನ್‌ಗಳಲ್ಲೂ ವಾಹನಗಳು ಮುಂದಕ್ಕೆ ಸಾಗಲು ಹಲವು ನಿಮಿಷಗಳೇ ಕಾಯಬೇಕಿದೆ. ಇದೇ ಮಾರ್ಗದಲ್ಲಿ ದೊಡ್ಡ ಆಸ್ಪತ್ರೆಗಳಿವೆ. ರೋಗಿಗಳನ್ನು ಕರೆದೊಯ್ಯುವ ಆಂಬುಲೆನ್ಸ್‌ಗಳು ದಟ್ಟಣೆಯಲ್ಲಿ ಸಿಲುಕಿ-ಕೊಳ್ಳುತ್ತಿವೆ. ಇದರಿಂದ ರೋಗಿಗಳ ಜೀವಕ್ಕೂ ಅಪಾಯ ಎದುರಾಗುತ್ತಿದೆ. ಯಶವಂತಪುರ ಮಾರುಕಟ್ಟೆಯನ್ನು ದಾಸನಪುರಕ್ಕೆ ಪೂರ್ಣ ಪ್ರಮಾಣದಲ್ಲಿ ಸ್ಥಳಾಂತರಿಸಿದರೆ ಸ್ವಲ್ಪಮಟ್ಟಿಗೆ ಸಮಸ್ಯೆಗೆ ಪರಿಹಾರ ಸಿಗಲಿದೆ.

ಬಿ.ಆರ್. ಶ್ರೀರಾಮರೆಡ್ಡಿ, ದಾಸನಪುರ



ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್ ಮತ್ತು ಭಾರತೀಯ ವಿದ್ಯಾಭವನ ಜಂಟಿಯಾಗಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಹಾಗೂ ಪರ್ವೀನ್ ಕೌರ್ ದಂಪತಿಗೆ ‘ವಿ.ಕೃ. ಗೋಕಾಕ್ ಪ್ರಶಸ್ತಿ’ಯನ್ನು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್‌.ಸಂತೋಷ್ ಹೆಗ್ಡೆ ಪ್ರದಾನ ಮಾಡಿದರು. ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ, ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್‌.ಎನ್‌. ಸುರೇಶ್ ಮತ್ತು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಅನಿಲ್ ಗೋಕಾಕ್ ಇದ್ದಾರೆ —ಪ್ರಜಾವಾಣಿ ಚಿತ್ರ

‘ಗೋಕಾಕರ ಜೀವನ ಸಮರಸ ಸಮನ್ವಯದ ದರ್ಶನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿನಾಯಕ ಕೃಷ್ಣ ಗೋಕಾಕ್ ಅವರ ಜೀವನವು ಸಮರಸ ಮತ್ತು ಸಮನ್ವಯದ ದರ್ಶನ’ ಎಂದು ಸಾಹಿತಿ ಚಿರಂಜೀವಿ ಸಿಂಘ್ ಹೇಳಿದರು.

ವಿನಾಯಕ ಕೃಷ್ಣ ಗೋಕಾಕ್ ವಾಙ್ಮಯ ಟ್ರಸ್ಟ್ ಮತ್ತು ಭಾರತೀಯ ವಿದ್ಯಾಭವನ ಏರ್ಪಡಿಸಿದ್ದ 2023ನೆಯ ಸಾಲಿನ ವಿ.ಕೃ. ಗೋಕಾಕ್ ಪ್ರಶಸ್ತಿ ಸ್ವೀಕರಿಸಿ, ಮಾತನಾಡಿದರು. ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ.

‘ಅಂತರಂಗ ಮತ್ತು ಬಹಿರಂಗಗಳನ್ನು ಸಮತೋಲನಗೊಳಿಸಿಕೊಳ್ಳುವುದೇ ಸಮನ್ವಯ, ಸಹಜ ಮಾರ್ಗ. ಸಾಹಿತ್ಯದಲ್ಲಿ ಮಾತ್ರವಲ್ಲ ಆಧ್ಯಾತ್ಮಿಕವಾಗಿಯೂ ಅವರದು ಸಮನ್ವಯದ ಮಾರ್ಗ’ ಎಂದು ವಿಶ್ಲೇಷಿಸಿದರು.

ಪ್ರಶಸ್ತಿ ಪ್ರದಾನ ಮಾಡಿದ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ, ‘ಯುನೆಸ್ಕೋಗೆ ಭಾರತದಿಂದ ಆಯ್ಕೆಯಾದ ಏಕಮಾತ್ರ ವ್ಯಕ್ತಿ ಚಿರಂಜೀವಿ ಸಿಂಘ್. ಅವರನ್ನು ಕನ್ನಡ ಭಾಷೆ, ಆಡಳಿತಕ್ಕೆ ಮಾತ್ರ ಸೀಮಿತಗೊಳಿಸಬಾರದು. ವಿಶ್ವವ್ಯಾಪಿಯಲ್ಲಿ ಮಾನವ ಜನಾಂಗಕ್ಕೆ ಸಲ್ಲಿಸಿದ ಸೇವೆ ಎಂದು ಪರಿಗಣಿಸಬೇಕು’ ಎಂದು ಸಲಹೆ ನೀಡಿದರು.

ಪತ್ರಕರ್ತ ಸುಗತ ಶ್ರೀನಿವಾಸರಾಜು ಮಾತನಾಡಿ, ‘ಗೋಕಾಕ್ ಮತ್ತು ಚಿರಂಜೀವಿ ಸಿಂಘ್ ಇಬ್ಬರೂ ಎಲ್ಲವನ್ನೂ ಒಳಗೊಳ್ಳುವ ಭಾವದವರು’ ಎಂದರು.

ಗೋಕಾಕ ಟ್ರಸ್ಟ್ ಕಾರ್ಯದರ್ಶಿ ಅನಿಲ್ ಗೋಕಾಕ್, ‘ಚಿರಂಜೀವಿ ಸಿಂಘ್ ಹುಟ್ಟಿದ್ದು ಪಾಕಿಸ್ತಾನದ ಪಂಜಾಬಿನಲ್ಲಿ. ಓದಿದ್ದು ಜರ್ಮನಿಯಲ್ಲಿ. ಕೆಲಸ ಮಾಡಿದ್ದು ಕರ್ನಾಟಕದಲ್ಲಿ. ಅವರ ತಂದೆ ತಾಯಿಯ ಅಸ್ತಿಯನ್ನು ಮಂಡ್ಯದ ತ್ರಿವೇಣಿ ಸಂಗಮದಲ್ಲಿ ವಿಸರ್ಜಿಸಿದವರು. ಜೀವನವನ್ನೇ ಶಿಕ್ಷಣವನ್ನಾಗಿ ಮಾಡಿಕೊಂಡವರು’ ಎಂದು ಶ್ಲಾಘಿಸಿದರು.

ಶ್ವಾಸಕೋಶದ ಬಗ್ಗೆ ಕಾಳಜಿ ಇರಲಿ; ತಜ್ಞ ವೈದ್ಯರ ಕಿವಿಮಾತು

ಶ್ವಾಸಕೋಶ ಆರೋಗ್ಯಕ್ಕೆ ‘ವಾಯು’ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಬಳಿಕ ಶ್ವಾಸಕೋಶ ಹಾಗೂ ಉಸಿರಾಟಕ್ಕೆ ಸಂಬಂಧಿಸಿದ ಸಮಸ್ಯೆಗಳು ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿವೆ. ಆದ್ದರಿಂದ ಶ್ವಾಸಕೋಶದ ಆರೋಗ್ಯಕ್ಕೆ ಆದ್ಯತೆ ನೀಡಿ, ನಿಯಮಿತವಾಗಿ ತಪಾಸಣೆ ಮಾಡಿಸಿಕೊಳ್ಳಬೇಕು’ ಎಂದು ನಗರದ ತಜ್ಞ ವೈದ್ಯರು ಕಿವಿಮಾತು ಹೇಳಿದರು.

ವಿಶ್ವ ಶ್ವಾಸಕೋಶ ದಿನದ ಪ್ರಯುಕ್ತ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯ-ಕ್ರಮದಲ್ಲಿ, ಜಯನಗರದ 5ನೇ ಬ್ಲಾಕ್‌ನಲ್ಲಿ ನೂತನವಾಗಿ ನಿರ್ಮಾಣವಾಗಿರುವ ‘ವಾಯು ಚೆಸ್ಟ್ ಆ್ಯಂಡ್ ಸ್ಲೀಪ್ ಸ್ಪೆಷಲಿಸ್ಟ್ಸ್’ ಕೇಂದ್ರ ಹಾಗೂ ‘ವಾಯು ಪಲ್ಮನರಿ ವೆಲ್ನೆಸ್ ಆ್ಯಂಡ್ ರಿಹ್ಯಾಬಿಲಿಟೇಷನ್’ ಕೇಂದ್ರ ಉದ್ಘಾಟಿ-ಸಲಾಯಿತು. ಈ ಸಂದರ್ಭದಲ್ಲಿ ತಜ್ಞರು ಶ್ವಾಸಕೋಶ ಆರೋಗ್ಯದ ಕುರಿತು ಮಾಹಿತಿ ನೀಡಿದರು.

ಪರಿಸರ ರಾಯಭಾರಿ ಸಾಲುಮರದ ತಿಮ್ಮಕ್ಕ ಈ ಕೇಂದ್ರಗಳನ್ನು ಉದ್ಘಾಟಿಸಿದರು. ಅವರು ಈ ಕೇಂದ್ರದ ಮುಖ್ಯಸ್ಥ, ಶ್ವಾಸಕೋಶ ತಜ್ಞ ಡಾ. ರವೀಂದ್ರ ಮೆಹ್ತಾ ಅವರ ಬಳಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದು, ಮೆಹ್ತಾ ಅವರು ನೀಡುತ್ತಿರುವ ಚಿಕಿತ್ಸೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ವೇಳೆ ಶ್ವಾಸಕೋಶ ತಜ್ಞರಾದ ಡಾ. ಓಂಪ್ರಕಾಶ್, ಡಾ.ಸಂಧ್ಯಾ ನಂಜುಂಡಯ್ಯ, ಡಾ.ಎಚ್.ಬಿ. ಚಂದ್ರಶೇಖರ್, ಡಾ.ಕೆ.ಎಸ್. ಸತೀಶ್, ಡಾ.ಕೆ.ಎನ್. ಮಂಜುನಾಥ್ ಮತ್ತು ಡಾ. ಮುರಳಿ ಮೋಹನ್ ಅವರು ಶ್ವಾಸಕೋಶ ಆರೋಗ್ಯದ ಬಗ್ಗೆ ವಿವರಣೆ ನೀಡಿದರು.

‘ಜಾಗತಿಕ ಮಟ್ಟದಲ್ಲಿ ಕಾಡಿದ ಕೊರೊನಾ ವೈರಾಣು, ಹಲವರ ಶ್ವಾಸಕೋಶಕ್ಕೆ ಹಾನಿ ಮಾಡಿತು. ವಾಯುಮಾಲಿನ್ಯ, ಅಲರ್ಜಿ ಸೇರಿ ವಿವಿಧ ಕಾರಣಗಳಿಂದ ಉಸಿರಾಟ ಸಂಬಂಧಿ ಸಮಸ್ಯೆಗಳು ಹೆಚ್ಚಾಗಿ ಕಾಣಿಸಿಕೊಳ್ಳು-ತ್ತಿವೆ. ಆಸ್ತಮಾದಂತಹ ಸಮಸ್ಯೆಯಿಂದ ಸಾಕಷ್ಟು ಮಂದಿ ಬಳಲುತ್ತಿದ್ದಾರೆ. ಶಿಸ್ತುಬದ್ಧ ನಿರ್ವಹಣೆಯಿಂದ ಸಮಸ್ಯೆ-ಗಳನ್ನು ತಕ್ಕಮಟ್ಟಿಗೆ ತಡೆಗಟ್ಟಲು ಸಾಧ್ಯ’ ಎಂದು ಶ್ವಾಸಕೋಶ ತಜ್ಞರು ತಿಳಿಸಿದರು.

ಅತ್ಯಾಧುನಿಕ ತಂತ್ರಜ್ಞಾನ: ಕೇಂದ್ರಗಳ ಕುರಿತು ಮಾತನಾಡಿದ ಕರ್ನಾಟಕ ಶ್ವಾಸಕೋಶ ಶಾಸ್ತ್ರಜ್ಞರ ಒಕ್ಕೂಟದ ಅಧ್ಯಕ್ಷ ಡಾ.ಕೆ.ಎಸ್. ಸತೀಶ್, ‘ಅಸ್ತಮಾ, ಅಲರ್ಜಿ ಸೇರಿ ಶ್ವಾಸಕೋಶ ಸಂಬಂಧಿ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಹಾಗೂ ಶ್ವಾಸಕೋಶ ಪುನಶ್ಚೇತನಗೊಳಿಸಲು ತೆರೆದಿರುವ ಈ ಪ್ರತ್ಯೇಕ ಕೇಂದ್ರಗಳು, ಸಾರ್ವಜನಿಕರಿಗೆ ತುಂಬಾ ಸಹಕಾರಿಯಾಗುವ ವಿಶ್ವಾಸವಿದೆ. ಅತ್ಯಾಧುನಿಕ ತಂತ್ರಜ್ಞಾನಗಳ ಅಳವಡಿಕೆ ಜತೆಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ಒದಗಿಸಲು ಮುಂದಾಗಿರುವುದು ಶ್ಲಾಘನೀಯ’ ಎಂದರು.

ಇನ್ಫೊಸಿಸ್ ಸಂಸ್ಥೆಯ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ, ‘ರವೀಂದ್ರ ಮೆಹ್ತಾ ಅವರು ಪ್ರತಿಭಾವಂತ ವೈದ್ಯರಷ್ಟೇ ಆಗಿರದೆ, ಸಹಾನುಭೂತಿಯುಳ್ಳವರಾಗಿದ್ದಾರೆ. ಉಸಿರಾಟದ ಆರೋಗ್ಯ ರಕ್ಷಣೆಯಲ್ಲಿ ವಾಯು ಕೇಂದ್ರವು ಹೊಸ ತಾಂತ್ರಿಕ ಪ್ರಗತಿ ತರಲಿದೆ’ ಎಂದು ಹೇಳಿದರು.



‘ವಾಯು’ ಕೇಂದ್ರವನ್ನು ಸಾಲುಮರದ ತಿಮ್ಮಕ್ಕ ಉದ್ಘಾಟಿಸಿದರು. ಡಾ. ರವೀಂದ್ರ ಮೆಹ್ತಾ, ಡಾ. ಸಮೀರ್ ಬನ್ಸಾಲ್ ಹಾಗೂ ಕೇಂದ್ರದ ಸಿಬ್ಬಂದಿ ಇದ್ದಾರೆ – ಪ್ರಜಾವಾಣಿ ಚಿತ್ರ

‘ಶ್ವಾಸಕೋಶ ಪುನಃಶ್ಚೇತನ’

‘ಆಸ್ತಮಾ, ಶ್ವಾಸಕೋಶ ಸಂಬಂಧಿ ಸಮಸ್ಯೆ, ನಿದ್ರೆ ಸಂಬಂಧಿ ಸಮಸ್ಯೆ, ಅಲರ್ಜಿಯಂತಹ ಸಮಸ್ಯೆಗಳಿಗೆ ಕೇಂದ್ರದಲ್ಲಿ ಚಿಕಿತ್ಸೆ ಒದಗಿಸಲಾಗುತ್ತದೆ. ಶ್ವಾಸಕೋಶ ಪುನಃಶ್ಚೇತನಕ್ಕೂ ವಿಶೇಷ ಕಾರ್ಯಕ್ರಮ ರೂಪಿಸಲಾಗಿದ್ದು, ಶ್ವಾಸಕೋಶದ ಕಾರ್ಯವಿಧಾನವನ್ನು ಸುಧಾರಿಸಲಾಗುತ್ತದೆ. ದೇಹಕ್ಕೆ ಆಮ್ಲಜನಕ ಪೂರೈಕೆ ಮಾಡುವ ಶ್ವಾಸಕೋಶ, ಪ್ರತಿಯೊಂದು ಅಂಗವನ್ನೂ ಪೋಷಿಸುತ್ತದೆ. ಆದ್ದರಿಂದ ಶ್ವಾಸಕೋಶದ ಆರೋಗ್ಯಕ್ಕೆ ಆದ್ಯತೆ ನೀಡುವುದು ಮುಖ್ಯ. ಈ ನಿಟ್ಟಿನಲ್ಲಿ ನಮ್ಮ ಕೇಂದ್ರ ಕಾರ್ಯನಿರ್ವಹಿಸಲಿದೆ’ ಎಂದು ಡಾ. ರವೀಂದ್ರ ಮೆಹ್ತಾ ಹೇಳಿದರು.

ತಿಮ್ಮೇಗೌಡ ಕ್ಷಮೆಗೆ ಆಗ್ರಹ

ಬೆಂಗಳೂರು: ಪ್ರಣವಾನಂದ ಸ್ವಾಮೀಜಿ ವಿರುದ್ಧ ಹೇಳಿಕೆ ನೀಡಿರುವ ಕರ್ನಾಟಕ ಪ್ರದೇಶ ಈಡಿಗರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ. ತಿಮ್ಮೇಗೌಡ ಅವರು ಕ್ಷಮೆಯಾಚಿಸಬೇಕು ಎಂದು ರಾಷ್ಟ್ರೀಯ ಈಡಿಗ ಮಹಾಮಂಡಳಿ ಒತ್ತಾಯಿಸಿದೆ.

ಶನಿವಾರ ಮಾತನಾಡಿದ ಮಂಡಳಿಯ ರಾಷ್ಟ್ರೀಯ ಕಾರ್ಯದರ್ಶಿ ಬಿ.ಎಚ್. ಮಂಚೇಗೌಡ, ‘ರಾಷ್ಟ್ರೀಯ ಈಡಿಗ ಮಹಾಮಂಡಳಿಯ ರಾಷ್ಟ್ರೀಯ ಅಧ್ಯಕ್ಷರಾಗಿರುವ ಪ್ರಣವಾನಂದ ಸ್ವಾಮೀಜಿ 70 ಲಕ್ಷ ಈಡಿಗರನ್ನು ಪ್ರತಿನಿಧಿಸುತ್ತಾರೆ. ಆದರೆ, ಕರ್ನಾಟಕ ಪ್ರದೇಶ ಈಡಿಗರ ಸಂಘ ಕೇವಲ 12 ಸಾವಿರ ಜನರನ್ನು ಪ್ರತಿನಿಧಿಸುತ್ತದೆ.ಆದ್ದರಿಂದ, ಸ್ವಾಮೀಜಿ ಅವರ ವಿರುದ್ಧ ನೀಡಿರುವ ಹೇಳಿಕೆಹಿಂಪಡೆದುಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ಸಂಘದ ವಿರುದ್ಧ ಕಾನೂನು ಹೋರಾಟ ಕೈಗೊಳ್ಳಲಾಗುವುದು’ ಎಂದರು. ‘ಪ್ರಣವಾನಂದ ಸ್ವಾಮೀಜಿ ಅವರ ನಿರಂತರ ಹೋರಾಟದಿಂದ ರಾಜ್ಯದಲ್ಲಿ ನಾರಾಯಣ ಗುರು ಈಡಿಗ ಅಭಿವೃದ್ಧಿ ನಿಗಮ ಸ್ಥಾಪನೆಯಾಗಿದೆ. ಆದರೆ, ತಿಮ್ಮೇಗೌಡ ಅವರು ಈಡಿಗರ ಸಂಘದ ಹೆಸರಿನಲ್ಲಿ ಸರ್ಕಾರದಿಂದ ಬರುವ ಅನುದಾನವನ್ನು ವೈಯಕ್ತಿವಾಗಿ ಬಳಸಿಕೊಂಡಿದ್ದಾರೆ. ಈ ಬಗ್ಗೆ ರಾಜ್ಯ ಸರ್ಕಾರ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.



ಪುರಸ್ಕಾರ

ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ಸದಸ್ಯರ ಮಕ್ಕಳಿಗೆ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರು ಪ್ರತಿಭಾ ಪುರಸ್ಕಾರ ವಿತರಣೆ ಮಾಡಿದರು. ಸಂಘದ ಅಧ್ಯಕ್ಷ ರಮೇಶ್ ಎಂ. ಪಾಳ್ಯ, ಉಪಾಧ್ಯಕ್ಷ ದೊಡ್ಡಬೊಮ್ಮಯ್ಯ, ಖಜಾಂಚಿ ಮೋಹನ್ ಕುಮಾರ್ ಬಿ.ಎನ್. ಇದ್ದರು.

ನೇಪಾಳದಲ್ಲಿ ಅಂತರರಾಷ್ಟ್ರಿಯ ಕರ್ನಾಟಕ ರಾಜ್ಯೋತ್ಸವ

ಬೆಂಗಳೂರು: ನೇಪಾಳದ ಕಠ್ಮಂಡುವಿನ ಪಶುಪತಿನಾಥ ದೇವಾಲಯ ಬಳಿ ಇರುವ ಆನಂದ ಪಶುಪತಿ ಸನ್ನಿಧಿಯಲ್ಲಿ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನ.25ರ ಸಂಜೆ 6ಕ್ಕೆ ಅಂತರರಾಷ್ಟ್ರಿಯ 68ನೇ ಕರ್ನಾಟಕ ರಾಜ್ಯೋತ್ಸವ ಮತ್ತು ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ನಡೆಯಲಿದೆ.

ರಾಮಸ್ವಾಮಿ ಗುರೂಜಿ ಕಾರ್ಯಕ್ರಮ ಉದ್ಘಾಟಿಸುವರು. ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಧ್ಯಕ್ಷತೆ ವಹಿಸುವರು. ಐಪಿಎಸ್ ಅಧಿಕಾರಿ ರೂಪಾ ಡಿ. ಮೌದ್ಗಿಲ್, ಐಎಎಸ್ ಅಧಿಕಾರಿ ಜಯರಾಮ್ ರಾಯಪುರ, ಟಿವಿ 9 ಪ್ರಧಾನ ಸಂಪಾದಕ ರಂಗನಾಥ್ ಭಾರದ್ವಾಜ್, ಹಿನ್ನೆಲೆ ಗಾಯಕಿ ಅನುರಾಧ ಭಟ್, ವಕೀಲರಾದ ವಿ. ಶ್ರೀನಿವಾಸ್ ಭಾಗವಹಿಸುವರು ಎಂದು ಸಂಘದ ಅಧ್ಯಕ್ಷ ಎ.ಅಮೃತ್ ರಾಜ್ ತಿಳಿಸಿದ್ದಾರೆ.

ಕರ್ನಾಟಕ ಮತ್ತು ಕಠ್ಮಂಡುವಿನ ಪಶುಪತಿನಾಥ ದೇವಾಲಯಕ್ಕೆ ನೂರಾರು ವರ್ಷಗಳ ಸ್ನೇಹ, ಸಾಂಸ್ಕೃತಿಕ ಸಂಬಂಧವಿದೆ. ನೇಪಾಳದಲ್ಲಿ ಸಾವಿರಾರು ಕನ್ನಡಿಗರು ನೆಲೆಸಿದ್ದಾರೆ. ಕನ್ನಡ ಉಳಿಸಿ, ಬೆಳೆಸಬೇಕು. ವಿಶ್ವಮಾನ್ಯತೆ ಸಿಗಬೇಕು ಎಂಬ ಕಾರಣಕ್ಕಾಗಿ ಅಂತರರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ನೇಪಾಳದಲ್ಲಿ ಹಮ್ಮಿಕೊಳ್ಳಲಾಗಿದೆ. 2024ರಲ್ಲಿ ಶ್ರೀಲಂಕಾದಲ್ಲಿ ರಾಜ್ಯೋತ್ಸವ ಹಮ್ಮಿಕೊಳ್ಳಲಾಗುವುದು ಎ.ಅಮೃತ್ ರಾಜ್ ತಿಳಿಸಿದ್ದಾರೆ.

‘ಕಾವ್ಯಕ್ರಮ’ದಲ್ಲಿ 5 ಕವನ ಸಂಕಲನಗಳ ಬಿಡುಗಡೆ

‘ನಾನು’ ಮುಕ್ತ ಕವನಗಳು ಬರಲಿ: ಕಾಯ್ಕಿಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನಿಂದಲೂ ಕವನಗಳು ‘ನಾನು’ ಪಿಡುಗಿಗೆ ಒಳಗಾಗಿವೆ. ‘ನಾನು’ ಬಳಸದೇ ಬರೆಯುವುದನ್ನು ಕವಿಗಳು ರೂಢಿಸಿ-ಕೊಳ್ಳಬೇಕು ಎಂದು ಕವಿ ಜಯಂತ್ ಕಾಯ್ಕಿಣಿ ಹೇಳಿದರು.

ವೀರಲೋಕ ವತಿಯಿಂದ ಭಾನುವಾರ ನಡೆದ ಐದು ಕವನ ಸಂಕಲನಗಳ ಬಿಡುಗಡೆ ಸಮಾರಂಭ ‘ಕಾವ್ಯಕ್ರಮ’ದಲ್ಲಿ ಅವರು ಮಾತನಾಡಿದರು.

‘ನಾನು ಮತ್ತು ಸಮಾಜದ ನಡುವೆ ಅಂತರ ಇಟ್ಟುಕೊಳ್ಳದೇ ಬರೆದಾಗ ಕಾವ್ಯದ ದಿಕ್ಕು ಬದಲಾಗುತ್ತದೆ. ಬರಹಗಾರರಿಗೆ ಕಾಣ್ಕೆ ಮತ್ತು ಕೌಶಲಗಳು ಇರಬೇಕು’ ಎಂದು ಸಲಹೆ ನೀಡಿದರು.

ಯಾವುದೇ ಕಾವ್ಯ, ಕಲಾಕೃತಿ, ಸಾಹಿತ್ಯಕ್ಕೆ ಆರಾಧನೆ, ಆಪಾದನೆಗಿಂತ ಆಸ್ವಾದನೆ ಮುಖ್ಯ. ಜೀವನವನ್ನು ಹುರಿಗೊಳಿಸಲು ಕಾವ್ಯ ಬೇಕು ಎಂದರು.

ಸಾಹಿತಿ ಅಬ್ದುಲ್ ರಶೀದ್ ಮಾತನಾಡಿ, ‘ಕಾವ್ಯ ಖಡ್ಗವಾಗಲಿ, ಗುರಾಣಿಯಾಗಲಿ, ಬಕೆಟಾಗಲಿ, ಛತ್ರಿಯಾಗಲಿ ಎಂದು ಏನೇನೋ ಬಯಸುವವರು, ಕಾವ್ಯ ವಿದ್ವಾಂಸರು ಇಲ್ಲದ, ಕಾವ್ಯವನ್ನು ಸಂಭ್ರಮಿಸುವ-ವರಷ್ಟೇ ಇರುವ ಅಪ್ಪಟ ಕಾವ್ಯಪ್ರೇ-ಮಿಗಳ ಕಾರ್ಯಕ್ರಮ ಇದು’ ಎಂದು ಬಣ್ಣಿಸಿದರು.

ಸಾಹಿತಿ ಜೋಗಿ ಮಾತನಾಡಿ, ‘ಪ್ರಕಾಶಕ ಕೇಂದ್ರಿತ, ಲೇಖಕ ಕೇಂದ್ರಿತ-ವಾಗಿದ್ದ ಪುಸ್ತಕವನ್ನು ಓದುಗ ಕೇಂದ್ರಿ-ತವನ್ನಾಗಿ ಮಾಡಿದ ಕೀರ್ತಿ ವೀರಕಪುತ್ರ ಶ್ರೀನಿವಾಸ್ ಅವರಿಗೆ ಸಲ್ಲುತ್ತದೆ. ಆನ್‌ಲೈನ್ ಮೂಲಕ ಊಟ, ತಿಂಡಿ ತರಿಸಿದಷ್ಟು ಸುಲಭದಲ್ಲಿ ಪುಸ್ತಕಗಳನ್ನು ಓದುಗರಿಗೆ ತಲುಪಿಸುವ ಕೆಲಸವನ್ನು ಅವರು ಮಾಡುತ್ತಿದ್ದಾರೆ’ ಎಂದು ಶ್ಲಾಘಿಸಿದರು.

ವಾಸುದೇವ ನಾಡಿಗ್, ನಂದಿನಿ ಹೆದ್ದುರ್ಗ, ಫಾಲ್ಗುಣ ಗೌಡ, ಸದಾಶಿವ ಸೊರಟೂರು, ಪಾಪುಗುರು ಅವರ ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ರಾಜಶೇಖರ್ ಮಠಪತಿ ಕೃತಿಗಳನ್ನು ಪರಿಚಯಿಸಿದರು. ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್, ವೀರಕಪುತ್ರ ಶ್ರೀನಿವಾಸ್ ಮಾತನಾಡಿದರು.

ಕೃತಿಗಳ ಪರಿಚಯ

ಕೃತಿ: ನಿನ್ನ ಧ್ಯಾನದ ನೂರೊಂದು ಹಣತೆ
ಲೇಖಕ: ವಾಸುದೇವ ನಾಡಿಗ್
ದರ: ₹ 170

ಕೃತಿ: ಒಂದು ಆದಿಮ ಪ್ರೇಮ
ಲೇಖಕಿ: ನಂದಿನಿ ಹೆದ್ದುರ್ಗ
ದರ: ₹ 150

ಕೃತಿ: ಬಿಂಜೆಮುಳ್ಳು
ಲೇಖಕ: ಫಾಲ್ಗುಣ ಗೌಡ
ದರ: ₹ 120

ಕೃತಿ: ಗಾಯಗೊಂಡ ಸಾಲುಗಳು
ಲೇಖಕ: ಸದಾಶಿವ ಸೊರಟೂರು
ದರ: ₹ 110

ಕೃತಿ: ಮಣ್ಣೇ ಮೊದಲು
ಲೇಖಕ: ಪಾಪುಗುರು
ದರ: ₹ 120

ಎಲ್ಲ ಕೃತಿಗಳ ಪ್ರಕಾಶಕರು: ವೀರಲೋಕ ಬುಕ್ಸ್



ಬೆಂಗಳೂರಿನ ಸಿ. ಅಶ್ವತ್ಥ್ ಕಲಾಭವನದಲ್ಲಿ ವೀರಲೋಕ ಭಾನುವಾರ ಆಯೋಜಿಸಿದ ಕವನ ಸಂಕಲನಗಳ ಬಿಡುಗಡೆ ಸಮಾರಂಭದಲ್ಲಿ ಸಾಹಿತಿಗಳಾದ ಜೋಗಿ, ಜಯಂತ್ ಕಾಯ್ಕಿಣಿ, ಅಬ್ದುಲ್ ರಶೀದ್ ಮತ್ತು ಮತ್ತು ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್ ಚರ್ಚೆಯ ನಡುವೆ ಸಂಭ್ರಮದಲ್ಲಿರುವುದು. ಪ್ರಜಾವಾಣಿ ಚಿತ್ರ/

‘ಪ್ರಶಸ್ತಿಗಾಗಿ ಬರೆಯುವುದಲ್ಲ’

‘ಪ್ರಶಸ್ತಿಗಾಗಿ ಬರೆಯುವುದಲ್ಲ, ಬರೆದಿರುವುದಕ್ಕೆ ಪ್ರಶಸ್ತಿ ಬಂದರೆ ಆ ಕ್ಷಣ ಸಂಭ್ರಮಿಸಿ ಮುಂದಕ್ಕೆ ಹೋಗಬೇಕು. ಪ್ರಶಸ್ತಿಯ ಸುತ್ತಲೇ ಸುತ್ತುತ್ತಿರಬಾರದು. ಮ್ಯಾರಥಾನ್ ಓಟಗಾರ ಓಡುತ್ತಿರುವಾಗ ರಸ್ತೆ ಬದಿಯಲ್ಲಿ ಇರುವ ಜನರು ಲಿಂಬು ಜ್ಯೂಸ್ ಅಥವಾ ಬೇರೆ ಹಣ್ಣಿನ ರಸ ನೀಡುತ್ತಾರೆ. ಓಟಗಾರ ಅದನ್ನು ಕುಡಿದು ಮುಂದಕ್ಕೆ ಹೋಗುತ್ತಿರುತ್ತಾನೆ. ಅದು ಬಿಟ್ಟು ಲಿಂಬು ಜ್ಯೂಸ್ ಕೊಟ್ಟರು ಎಂದು ಲಿಂಬು ಅಥವಾ ಲೋಟವನ್ನು ತಲೆ ಮೇಲೆ ಹೊತ್ತು ತಿರುಗಿದರೆ ಓಟ ನಿಂತು ಹೋಗುತ್ತದೆ. ಪ್ರಶಸ್ತಿಯೂ ಅಷ್ಟೇ’ ಎಂದು ಜಯಂತ ಕಾಯ್ಕಿಣಿ ಮಾರ್ಮಿಕವಾಗಿ ಹೇಳಿದರು.

ವಿವಿಧೆಡೆ ರಸ್ತೆ ತಡೆದು ರೈತರು, ಕನ್ನಡಪರ ಸಂಘಟನೆಗಳ ಸದಸ್ಯರಿಂದ ಧರಣಿ

ಕಾವೇರಿ ಹೋರಾಟ ಇನ್ನಷ್ಟು ಬಿರುಸು

ಪ್ರಜಾವಾಣಿ ವಾರ್ತೆ

ಮಂಡ್ಯ: ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡಿರುವ ಸರ್ಕಾರದ ಕ್ರಮ ಖಂಡಿಸಿ ಮೈಸೂರು ಭಾಗದ ಜಿಲ್ಲೆಗಳಲ್ಲಿ ಭಾನುವಾರವೂ ಪ್ರತಿಭಟನೆ ಸರಣಿ ಮುಂದುವರಿಯಿತು.

ಬೆಂಗಳೂರಿನ ಕಾವೇರಿ ನದಿ ನೀರಿನ ರಕ್ಷಣಾ ಹೋರಾಟ ಸಮಿತಿ ಮತ್ತು ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ಕಾರ್ಯಕರ್ತರು ಮಂಡ್ಯದ ಜೆ.ಸಿ.ವೃತ್ತದ ಹೆದ್ದಾರಿಯಲ್ಲಿ ಮಲಗಿ ಪ್ರತಿಭಟಿಸಿದ್ದು, 'ನೀರು ಹರಿಸುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕು' ಎಂದು ಆಗ್ರಹಿಸಿದರು. ವೇದಿಕೆ ಸಂಸ್ಥಾಪಕ ಗಿರೀಶ್ ಶಿವಾರ್ಚಕ ನೇತೃತ್ವದಲ್ಲಿ ಜಿಲ್ಲಾ ರೈತಹಿತರಕ್ಷಣಾ ಸಮಿತಿ ಧರಣಿ ನಡೆಸುತ್ತಿರುವ ಸ್ಥಳಕ್ಕೆ ತೆರಳಿ ಬೆಂಬಲ ಸೂಚಿಸಿದರು.

ಕಾಂಗ್ರೆಸ್ ಶಾಸಕ ಪಿ.ಎಂ. ನರೇಂದ್ರಸ್ವಾಮಿ, ರೈತ ಹಿತರಕ್ಷಣಾ ಸಮಿತಿ ಧರಣಿ ಸ್ಥಳಕ್ಕೆ ಭೇಟಿ ನೀಡಿ ಕೇಂದ್ರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. 'ಒಕ್ಕೂಟದಲ್ಲಿರುವುದೇ ಸಂಕಷ್ಟ ತಂದೊಡ್ಡಿದೆ. ಪ್ರಧಾನಿ ಮೌನ ವಹಿಸಿದ್ದು, ಒಕ್ಕೂಟ ವ್ಯವಸ್ಥೆಗೆ ಅರ್ಥವಿದೆಯೇ' ಎಂದು ಪ್ರಶ್ನಿಸಿದರು.

'ಕಾವೇರಿ ನೀರಿನ ವಿಚಾರದಲ್ಲಿ ಸಂಕಷ್ಟ ಸೂತ್ರಕ್ಕೆ ಎಲ್ಲ ರಾಜ್ಯಗಳು ಸಮ್ಮತಿಸಬೇಕು. ರಾಜ್ಯದ ಸಂಸದರು ಕೇಂದ್ರದ ಮೇಲೆ ಒತ್ತಡ ಹೇರಬೇಕು. ಒಂದೂವರೆ ತಿಂಗಳು ಕಳೆದರೆ ನಮ್ಮ ಭಾಗದ ರೈತರ ಕಷ್ಟ ಹೇಳತೀರದಾಗುತ್ತದೆ' ಎಂದು ಆತಂಕ ವ್ಯಕ್ತಪಡಿಸಿದರು.

ಶ್ರೀರಂಗಪಟ್ಟಣದಲ್ಲಿ ಭೂಮಿತಾಯಿ ಹೋರಾಟ ಸಮಿತಿ ಸದಸ್ಯರು ಬೆಂಗಳೂರು ಮೈಸೂರು ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ತಿ.ನರಸೀಪುರ ಬಂದ್‌ಗೆ ಕರೆ: 'ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಸೆ. 26 ರಂದು ತಾಲ್ಲೂಕು ಕಬಿನಿ ಕಾವೇರಿ ಹೋರಾಟ ಸಮಿತಿ ತಿ.ನರಸೀಪುರ ಬಂದ್‌ಗೆ ಕರೆ ನೀಡಿದೆ.

'ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘ, ದಲಿತ ಸಂಘರ್ಷ ಸಮಿತಿ, ನಯಜನ ಕ್ಷತ್ರಿಯ ಸಂಘ ಸೇರಿ 27 ಸಂಘಟನೆಗಳು ಬೆಂಬಲಿಸಿವೆ. ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಬಂದ್ ನಡೆಯಲಿದೆ' ಎಂದು ರೈತ ಮುಖಂಡ ಕಿರಗಸೂರು ಶಂಕರ್ ತಿಳಿಸಿದರು.


ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಭಾನುವಾರ ಚಾಮರಾಜನಗರದಲ್ಲಿ ಬಾರುಕೋಲು ಚಳವಳಿ ನಡೆಸಿದರು

ಬಾರುಕೋಲು ಚಳವಳಿ

ಚಾಮರಾಜನಗರ: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಭಾನುವಾರ ಇಲ್ಲಿ ಬಾರುಕೋಲು ಚಳವಳಿ ನಡೆಸಿದರು.

ಚಾಮರಾಜೇಶ್ವರ ಉದ್ಯಾನದಿಂದ ಭುವನೇಶ್ವರಿ ವೃತ್ತದವರೆಗೆ ಮೆರವಣಿಗೆ ನಡೆಸಿದರು. ತಮಿಳುನಾಡು ನೋಂದಣಿಯ ಸರಕು ಸಾಗಣೆಯ ಲಾರಿ ತಡೆದು, ತಮಿಳುನಾಡು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಕೊಳ್ಳೇಗಾಲದ ಬಸ್ ನಿಲ್ದಾಣದಲ್ಲಿ ಎಸ್‌ಡಿಪಿಐ ಕಾರ್ಯಕರ್ತರು, ರೈತ ಸಂಘದ ಸದಸ್ಯರು ಪ್ರತಿಭಟಿಸಿದರು.

ಇಂದು ಹೇಮಾವತಿ ಜಲಾಶಯಕ್ಕೆ ಮುತ್ತಿಗೆ (ಹಾಸನ ವರದಿ): 'ತಮಿಳುನಾಡಿಗೆ ನೀರು ಹರಿಸಿರುವುದನ್ನು ವಿರೋಧಿಸಿ ಸೆ.25ರ ಬೆಳಿಗ್ಗೆ 10.30ಕ್ಕೆ ಗೊರೂರಿನ ಹೇಮಾವತಿ ಜಲಾಶಯಕ್ಕೆ ಮುತ್ತಿಗೆ ಹಾಕಲಾಗುವುದು' ಎಂದು ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಸ್.ಲಿಂಗೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬ್ರಾಹ್ಮಣ ಮಹಾಸಭಾ ಬೆಂಬಲ

ದಾವಣಗೆರೆ: ಕಾವೇರಿ ನೀರಿನ ವಿಷಯದಲ್ಲಿ ರಾಜ್ಯ ಸರ್ಕಾರವು ರಾಜ್ಯದ ರೈತರ ಹಿತ ಕಾಪಾಡಬೇಕು ಎಂದು ಆಗ್ರಹಿಸಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ರೈತಪರ ಹೋರಾಟಕ್ಕೆ ಬೆಂಬಲ ಸೂಚಿಸಲು ನಿರ್ಧರಿಸಿದೆ.

ಇಲ್ಲಿ ಭಾನುವಾರ ನಡೆದ 2023ನೇ ಸಾಲಿನ ರಾಜ್ಯ ಕಾರ್ಯಕಾರಿಣಿಯಲ್ಲಿ ಸುದೀರ್ಘ ಚರ್ಚೆ ನಡೆದು ಮೇಲಿನ ನಿರ್ಣಯವೂ ಸೇರಿದಂತೆ ಒಟ್ಟು ಏಳು ನಿರ್ಣಯವನ್ನು ಮಹಾಸಭಾ ಕೈಗೊಂಡಿತು.

ಪ್ರಧಾನಿ ಮೌನ ಸರಿಯಲ್ಲ–ರಾಮಲಿಂಗಾರೆಡ್ಡಿ

ಹುಬ್ಬಳ್ಳಿ: 'ಕಾವೇರಿ ಸಂಕಷ್ಟದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಮೌನ ವಹಿಸಿರುವುದು ಸರಿಯಲ್ಲ. ಅವರು ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಪರಿಹಾರಕ್ಕೆ ಮುಂದಾಗಬೇಕು' ಎಂದು ಸಚಿವ ರಾಮಲಿಂಗಾರೆಡ್ಡಿ ಆಗ್ರಹಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದಲ್ಲಿ ಪ್ರಸ್ತುತ ಬರವಿದ್ದು, ಜನತೆ ಸಂಕಷ್ಟದಲ್ಲಿ ಇರುವುದು, ಹಾಗೂ ನದಿಯಲ್ಲಿ ನೀರಿಲ್ಲದಿರುವುದು ಸುಪ್ರೀಂ ಕೋರ್ಟ್‌ಗೆ ಗೊತ್ತಿಲ್ಲವೇ? ಎಂದು ಪ್ರಶ್ನಿಸಿದರು. 'ಪ್ರತಿಭಟನೆ ತಪ್ಪಲ್ಲ. ಪ್ರತಿಭಟನೆ, ಬಂದ್ ನಡೆಸುವವರು ಜನರ ಆಸ್ತಿಗೆ ನಷ್ಟ ಉಂಟುಮಾಡದಿರಲಿ' ಎಂದು ಹೇಳಿದರು.

'ಸಂಸದರ ಮೌನ ಏಕೆ'

ರಬಕವಿ ಬನಹಟ್ಟಿ (ಬಾಗಲಕೋಟೆ ಜಿಲ್ಲೆ): 'ಕುಡಿಯುವ ನೀರಿನ ವಿಷಯದಲ್ಲಿ ರಾಜಕೀಯ ಬೆರೆಸದೆ ಎಲ್ಲರೂ ಒಗ್ಗಟ್ಟಾಗಿ ಸಮಸ್ಯೆಯನ್ನು ಪರಿಹರಿಸಬೇಕಿದೆ. ಕಾವೇರಿ ವಿಷಯದಲ್ಲಿ ರಾಜ್ಯದ ಸಂಸದರು ಮೌನಕ್ಕೆ ಜಾರಿರುವುದು ಯಾವ ಕಾರಣಕ್ಕೆ ಎಂಬುದು ಗೊತ್ತಾಗುತ್ತಿಲ್ಲ' ಎಂದು ವಿಧಾನಪರಿಷತ್ ಸದಸ್ಯ ಜಗದೀಶ ಶೆಟ್ಟರ್ ಹೇಳಿದರು.

ತಾಲ್ಲೂಕಿನ ಹಿಪ್ಪರಗಿ ಗ್ರಾಮದಲ್ಲಿ ಭಾನುವಾರ ಮಾಜಿ ಉಪರಾಷ್ಟ್ರಪತಿ ಬಿ.ಡಿ.ಜತ್ತಿ ಅವರ 111ನೇ ಜನ್ಮದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರೈತರ ಹಿತಾಸಕ್ತಿಯ ಕಡೆಗಣನೆ ಸರಿಯಲ್ಲ' ಎಂದರು.

ಇಂದು ಚಲನಚಿತ್ರ ವಾಣಿಜ್ಯ ಮಂಡಳಿ ಸಭೆ

ಬೆಂಗಳೂರು: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ವಿವಿಧ ಸಂಘಟನೆಗಳು ಕರೆ ನೀಡಿರುವ ಬಂದ್‌ಗೆ ಬೆಂಬಲ ನೀಡುವ ಕುರಿತು ಚರ್ಚಿಸಲು ಸೋಮವಾರ ಮಂಡಳಿಯ ಸಭೆ ಕರೆಯಲಾಗಿದೆ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ (ಕೆಎಫ್‌ಸಿಸಿ) ಅಧ್ಯಕ್ಷ ಎನ್.ಎಂ.ಸುರೇಶ್ ತಿಳಿಸಿದ್ದಾರೆ. 'ಕಾವೇರಿ ನಮ್ಮ ಜನ್ಮಸಿದ್ಧ ಹಕ್ಕು. ಕನ್ನಡದ ನೆಲ, ಜಲ ಹಾಗೂ ಭಾಷೆ ವಿಚಾರ ಬಂದ ಸಂದರ್ಭದಲ್ಲಿ ಚಿತ್ರರಂಗ ಸದಾ ಬೆಂಬಲಕ್ಕೆ ನಿಂತಿದೆ. ಈಗಲೂ ಬೆಂಬಲಕ್ಕೆ ನಿಲ್ಲುವುದು ನಮ್ಮ ಧರ್ಮ, ಕರ್ತವ್ಯ' ಎಂದರು.

ಸುದ್ದಿ 2 ನಿಮಿಷ

ವಿದ್ಯಾರ್ಥಿನಿಗೆ ₹3.65 ಲಕ್ಷ ದೇಣಿಗೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಎಂಬಿಬಿಎಸ್ ಕೋರ್ಸ್‌ಗೆ ಆಯ್ಕೆ ಆಗಿರುವ ತಾಲ್ಲೂಕಿನ ಘೋಟಾಳದ ಬಡ ಕುಟುಂಬದ ವಿದ್ಯಾರ್ಥಿನಿ ಸುಪ್ರಿಯಾ ದೀಪಕ್ ಕಾಳೆ ಅವರಿಗೆ ತಾಲ್ಲೂಕು ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ಸಂಘದಿಂದ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ₹1.11 ಲಕ್ಷ ಸೇರಿದಂತೆ ವಿವಿಧ ಸಂಘಟನೆಗಳಿಂದ ಒಟ್ಟು ₹3.65 ಲಕ್ಷ ದೇಣಿಗೆ ನೀಡಲಾಗಿದೆ.

ತಾಲ್ಲೂಕು ಮರಾಠಾ ನೌಕರರ ಬಳಗದಿಂದ ₹1.71 ಲಕ್ಷ, ಶೆಡೋಳ ಗೆಳೆಯರ ಬಳಗದಿಂದ ₹35 ಸಾವಿರ, ಎಜಿಟಿ ಶಿಕ್ಷಕರ ಸಂಘದಿಂದ ₹32,100, ಚಿತ್ರದುರ್ಗ ಸಹಪಾಠಿ ಬಳಗದಿಂದ ₹11,200, ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದಿಂದ ₹5 ಸಾವಿರ ಧನಸಹಾಯ ಒದಗಿಸಲಾಗಿದೆ.



ತಾಲ್ಲೂಕು ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಶೇಖ್ ಮಹೇಬೂಬ್ ಪಟೇಲ್ ಮಾತನಾಡಿ, 'ಬಡ ಪ್ರತಿಭೆಗೆ ಧನ ಸಹಾಯ ನೀಡುತ್ತಿರುವ ಸಂಘದ ಬಸವಕಲ್ಯಾಣ ಹಾಗೂ ಹುಲಸೂರ ಘಟಕದ ಪದಾಧಿಕಾರಿಗಳ ಕಾರ್ಯ ಶ್ಲಾಘನೀಯ' ಎಂದರು.

ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಯೋಗರಾಜ ಕಹಳೆ ವಿದ್ಯಾರ್ಥಿನಿಗೆ ದೇಣಿಗೆ ನೀಡಿದರು.

'ರಡ್ಡಿ ಸಮಾಜದ ರಾಷ್ಟ್ರೀಯ ಸಮಾವೇಶ ಶೀಘ್ರ'

ಬಾಗಲಕೋಟೆ: 'ರಡ್ಡಿ ಸಮಾಜದ ಒಗ್ಗಟ್ಟಿಗಾಗಿ ಶೀಘ್ರದಲ್ಲೇ ರಾಷ್ಟ್ರಮಟ್ಟದ ಸಮಾವೇಶ ನಡೆಸಲಾಗುವುದು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಜಿಲ್ಲಾ ರಡ್ಡಿ ನೌಕರರ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿ, 'ದೇಶದ ವಿವಿಧ ರಾಜ್ಯಗಳಲ್ಲಿರುವ ರಡ್ಡಿ ಸಮಾಜದ ಜನರನ್ನು ಒಂದೆಡೆ ಸೇರಿಸುವ ಉದ್ದೇಶದಿಂದ ಈ ಸಮಾವೇಶ ನಡೆಸಲಾಗುವುದು. ರಾಜಕೀಯ ಉದ್ದೇಶಕ್ಕಾಗಿ ಸಮಾವೇಶ ಮಾಡುವುದಿಲ್ಲ. ಕರ್ನಾಟಕ, ಆಂಧ್ರ, ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರ ಸೇರಿದಂತೆ ಅನೇಕ ರಾಜ್ಯಗಳಲ್ಲಿ ರಡ್ಡಿ ಸಮಾಜದ ಜನರಿದ್ದಾರೆ. ಅವರೆಲ್ಲರನ್ನೂ ಒಗ್ಗೂಡಿಸಲು ಸಮಾವೇಶ ನಡೆಸಲು ಉದ್ದೇಶಿಸಲಾಗಿದೆ' ಎಂದರು.

'ಈ ಕುರಿತು ಬೆಂಗಳೂರಿನ ರಡ್ಡಿ ಜನಸಂಘದಲ್ಲಿ ಅ.9ರಂದು ಸಭೆ ಆಯೋಜಿಸಲಾಗಿದೆ. ಸಮಾವೇಶದ ಸ್ಥಳ ಹಾಗೂ ದಿನಾಂಕ ನಿಗದಿ ಕುರಿತು ಚರ್ಚಿಸಲಾಗುವುದು' ಎಂದು ಹೇಳಿದರು.

ಬೆಂಗಳೂರು, ರಾಮನಗರ ಬಂದ್ ನಾಳೆ

ಒಂದನೇ ಪುಟದಿಂದ...

'ಕೆಲವು ಸಂಘಟನೆಗಳು ಮಂಗಳವಾರ ಕರೆ ನೀಡಿರುವ ಬಂದ್ ವಾಪಸ್ ಪಡೆಯುವಂತೆ ಕೋರಿದ್ದವು. ನಾಡಿನ ಜನರು, ರೈತರ ಹಿತದೃಷ್ಟಿಯಿಂದ ಬಂದ್‌ಗೆ ಕರೆ ನೀಡಲಾಗಿದ್ದು ಬಂದ್ ವಾಪಸ್ ಪಡೆಯುವ ಪ್ರಶ್ನೆಯೇ ಇಲ್ಲ. ಬಂದ್ ಯಶಸ್ವಿಗೊಳಿಸುವ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ರೈತರು ನೋವು ತಿಳಿಸುತ್ತೇವೆ' ಎಂದು ಹೋರಾಟಗಾರರು ಹೇಳಿದರು.

ಬೆಳಿಗ್ಗೆ 11ಕ್ಕೆ ಬೆಂಗಳೂರಿನ ಪುರಭವನದಿಂದ ಪ್ರತಿಭಟನಾ ರ‍್ಯಾಲಿ ಆರಂಭವಾಗಲಿದೆ. ಚಲನಚಿತ್ರ ವಾಣಿಜ್ಯ ಮಂಡಳಿ ಸದಸ್ಯರು, ಕನ್ನಡ ಸಂಘಟನೆಗಳ ಮುಖಂಡರು, ರೈತರು, ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು, ಬಿಬಿಎಂಪಿ ಕಾರ್ಮಿಕರು, ಕೆಎಸ್‌ಆರ್‌ಟಿಸಿ ಕನ್ನಡ ಕಾರ್ಮಿಕರ ಸಂಘ, ಓಲಾ–ಊಬರ್ ಚಾಲಕರ ಸಂಘ, ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ, ಕರ್ನಾಟಕ ಮರಾಠ ಮಂಡಳ, ರಾಜ್ಯ ಕಾರ್ಮಿಕ ಪರಿಷತ್‌ನ ಸದಸ್ಯರು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

ಬಿಎಂಟಿಸಿ ಬಸ್‌ಗಳನ್ನು ರಸ್ತೆಗಿಳಿಸದಂತೆ ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಕರೆ ನೀಡಿದ್ದು ಬಸ್ ಸಂಚಾರದಲ್ಲಿ ವ್ಯತ್ಯಯವಾಗುವ ಸಾಧ್ಯತೆಯಿದೆ. ಆಟೊ, ಕ್ಯಾಬ್ ಸಂಚಾರ ಇರುವುದಿಲ್ಲ. ಕರ್ನಾಟಕ ಟೆಲಿವಿಷನ್ ಕಲಾವಿದರ ಸಂಘ ಚಿತ್ರೀಕರಣ ಬಂದ್ ಮಾಡಲು ತೀರ್ಮಾನಿಸಿದೆ.

ರಾಮನಗರದಲ್ಲೂ ಅಂದು ಬೆಳಿಗ್ಗೆಯಿಂದ ಸಂಜೆ 5ರವರೆಗೆ ಜಿಲ್ಲೆಯಾದ್ಯಂತ ಬಂದ್ ಇರಲಿದೆ. ತುರ್ತು ಸೇವೆಗಳಾದ ಆಸ್ಪತ್ರೆ, ಔಷಧದ ಅಂಗಡಿಗಳ ಜೊತೆಗೆ ಸಾರಿಗೆ ವ್ಯವಸ್ಥೆ, ರೇಷ್ಮೆ ಮಾರುಕಟ್ಟೆ ಹೊರತುಪಡಿಸಿ ಉಳಿದೆಲ್ಲವೂ ಬಂದ್ ಆಗಿರಲಿವೆ ಎಂದು ಮುಖಂಡರು ಮಾಹಿತಿ ನೀಡಿದ್ದಾರೆ.

ಆಮ್ ಆದ್ಮಿ ಪಕ್ಷದ ರಾಜ್ಯ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಮಾತನಾಡಿ, 'ಶಾಂತಿಯುತ ಬಂದ್ ನಡೆಸುತ್ತೇವೆ. ತಕ್ಷಣವೇ ವಿಶೇಷ ಅಧಿವೇಶನ ಕರೆದು, ಸಂಕಷ್ಟ ಸೂತ್ರ ಜಾರಿ ಮಾಡುವ ತನಕ ನೀರು ಬಿಡುವುದಿಲ್ಲ ಎಂದು ಕೇಂದ್ರ ಸರ್ಕಾರ ಮತ್ತು ಕಾವೇರಿ ನೀರು ನಿರ್ವಹಣಾ ಮಂಡಳಿಗೆ ಎಚ್ಚರಿಕೆ ನೀಡಬೇಕು' ಎಂದು ಆಗ್ರಹಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಜಲಸಂಪನ್ಮೂಲ ಸಚಿವರಾದ ಡಿ.ಕೆ. ಶಿವಕುಮಾರ್ ಬಂದ್ ಬಗ್ಗೆ ಲಘುವಾಗಿ ಮಾತನಾಡಿದ್ದಾರೆ. ಅವರಿಗೆ ಅಧಿಕಾರ ಶಾಶ್ವತ ಅಲ್ಲ. ನೀವೂ ಮೇಕೆದಾಟು ಹೋರಾಟ ನಡೆಸಿ ಅಧಿಕಾರಕ್ಕೆ ಬಂದಿದ್ದೀರಿ. ಈಗ ನೀವು ಮೌನ ವಹಿಸಿದ್ದೀರಿ' ಎಂದು ಹೇಳಿದರು.

ಏನಿರುವುದಿಲ್ಲ

- ಊಬರ್–ಓಲಾ ಕ್ಯಾಬ್
- ಆಟೊರಿಕ್ಷಾ
- ಖಾಸಗಿ ಸಾರಿಗೆ
- ಚಿತ್ರಮಂದಿರ

ಏನಿರಲಿದೆ

- ಮೆಟ್ರೊ
- ಕೆಲವು ಬಿಎಂಟಿಸಿ ಬಸ್
- ಆಸ್ಪತ್ರೆ
- ಹಾಲು–ತರಕಾರಿ
- ದಿನಪತ್ರಿಕೆಗಳು

29ಕ್ಕೆ ಕರ್ನಾಟಕ ಬಂದ್

ಸೆ.29ರಂದು ಕರ್ನಾಟಕ ಬಂದ್‌ಗೆ ಕನ್ನಡ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಕರೆ ನೀಡಿದ್ದಾರೆ.

ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ.ಗೋವಿಂದ್, ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷರಾದ ಶಿವರಾಮೇಗೌಡ, ಪ್ರವೀಣ್ ಶೆಟ್ಟಿ ಬಣದ ಜತೆಗೆ ಸೋಮವಾರ ಸಭೆ ನಡೆಸಿ ಅಂತಿನ ತೀರ್ಮಾನ ಕೈಗೊಳ್ಳುತ್ತೇವೆ ಎಂದು ತಿಳಿಸಿದ್ದಾರೆ.

ಶಾಲಾ ಮುಖ್ಯಸ್ಥರಿಗೆ ಅನುಮತಿ

ಬಂದ್ ನಡೆಯುವ ಜಿಲ್ಲೆಗಳಲ್ಲಿ ಪರಿಸ್ಥಿತಿ ಅವಲೋಕಿಸಿ ರಜೆ ನೀಡಲು ಆಯಾ ಶಾಲೆಗಳ ಮುಖ್ಯಸ್ಥರಿಗೆ ಅನುಮತಿ ನೀಡಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ.ಕಾವೇರಿ ತಿಳಿಸಿದ್ದಾರೆ.

'ರುಪ್ಸ' ಶಾಲೆಗಳಿಗೆ ರಜೆ

ಬೆಂಗಳೂರು: ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘದ(ರುಪ್ಸ) ಶಾಲೆಗಳಿಗೆ ರಜೆ ನೀಡಲು ತೀರ್ಮಾನಿಸಲಾಗಿದೆ. ಪರೀಕ್ಷಾ ವಿದ್ಯಾರ್ಥಿಗಳು ಮಾತ್ರ ಕಪ್ಪುಪಟ್ಟಿ ಧರಿಸಿ ಪರೀಕ್ಷೆಗೆ ಹಾಜರಾಗುತ್ತಾರೆ ಎಂದು 'ರುಪ್ಸ' ಅಧ್ಯಕ್ಷ ಲೋಕೇಶ್ ತಾಳಿಕೋಟೆ ತಿಳಿಸಿದ್ದಾರೆ.

'ಮೂರುವರೆ ಸಾವಿರಕ್ಕೂ ಹೆಚ್ಚು ಐ.ಟಿ ಕಂಪನಿಗಳ ನೌಕರರು ಕೆಲಸಕ್ಕೆ ರಜೆ ಹಾಕಿ ರ‍್ಯಾಲಿ ನಡೆಸಲಿದ್ದಾರೆ' ಎಂದು ಸಂಘಟನೆ ಅಧ್ಯಕ್ಷ ಶಿವಾನಂದ್ ಹೇಳಿದರು.

ನಿಧನ ವಾರ್ತೆ

ಕಮಲಾ ಹೆಮ್ಮಿಗೆ



ಧಾರವಾಡ: ಸಾಹಿತಿ ಕಮಲಾ ಹೆಮ್ಮಿಗೆ (69) ಅವರು ಬೆಂಗಳೂರಿನ ಹೆಸರಘಟ್ಟದ ಸಪ್ತಗಿರಿ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ಅವರು ಮೂಲತಃ ಮೈಸೂರು ಜಿಲ್ಲೆಯ ಹೆಮ್ಮಿಗೆ ಗ್ರಾಮದವರು. ಒಂದೂವರೆ ವರ್ಷದಿಂದ ಧಾರವಾಡದಲ್ಲಿ ವಾಸವಾಗಿದ್ದರು.

1973ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಜಾನಪದವನ್ನು ಮುಖ್ಯವಿಷಯವನ್ನಾಗಿ ಆರಿಸಿಕೊಂಡು ಎಂ.ಎ. ಪದವಿ ಪಡೆದಿದ್ದರು. ಸವದತ್ತಿ ಯಲ್ಲಮ್ಮ ಹಾಗೂ ದೇವದಾಸಿ ಪದ್ಧತಿಯ ಮೇಲೆ ಮಹಾಪ್ರಬಂಧ ರಚಿಸಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದಿದ್ದರು. ಆಕಾಶವಾಣಿ ಧಾರವಾಡ ಮತ್ತು ಮಂಗಳೂರು ಕೇಂದ್ರಗಳಲ್ಲಿ ಹಾಗೂ ದೂರದರ್ಶನದ ಬೆಂಗಳೂರು ಮತ್ತು ತಿರುವನಂತಪುರದ ಕೇಂದ್ರಗಳಲ್ಲಿ ವೃತ್ತಿಯಲ್ಲಿದ್ದರು. ಅವಿವಾಹಿತೆಯಾಗಿದ್ದ ಅವರು ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅನುವಾದ, ಸಂಪಾದನಾ ಗ್ರಂಥಗಳನ್ನು ರಚಿಸಿದ್ದು, ಅಂಕಣಗಾರ್ತಿಯಾಗಿದ್ದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಸಹಿತ ಅನೇಕ ವೇದಿಕೆಗಳಲ್ಲಿ ವಿಚಾರ ಮಂಡಿಸಿದ್ದರು. 'ವಿಷಕನ್ಯೆ', 'ಮುಂಜಾನೆ ಬಂದವನು', 'ನೀನೆ ನನ್ನ ಆಕಾಶ' ಮೊದಲಾದ ಕವನ ಸಂಕಲನಗಳು, ಕೆಲವು ಕಾದಂಬರಿಗಳು, ಕತೆಗಳನ್ನು ರಚಿಸಿದ್ದರು. ರಾಜ್ಯೋತ್ಸವ ಪ್ರಶಸ್ತಿ ಸಹಿತ ಅನೇಕ ಪುರಸ್ಕಾರಗಳು ಸಂದಿವೆ. ಬೆಂಗಳೂರಿನಲ್ಲಿ ಸೋಮವಾರ ಅವರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದು ಜಿಲ್ಲಾಮಟ್ಟದ 'ಜನತಾ ದರ್ಶನ'

ಒಂದನೇ ಪುಟದಿಂದ...


'ಸಣ್ಣಪುಟ್ಟ ಕೆಲಸಗಳಿಗೆ ಜನರು ಮುಖ್ಯಮಂತ್ರಿ ಕಚೇರಿವರೆಗೆ ಬರುತ್ತಿದ್ದಾರೆ. ಆಡಳಿತಕ್ಕೆ ಚುರುಕು ಮುಟ್ಟಿಸಲು, ಸಾರ್ವಜನಿಕರ ಅಲೆದಾಟ ತಪ್ಪಿಸಲು, ಸಾಧ್ಯವಾದಷ್ಟು ಸ್ಥಳದಲ್ಲೇ ಪರಿಹಾರ ಕಂಡುಕೊಳ್ಳಲು ಜಿಲ್ಲಾಮಟ್ಟದ ಜನತಾ ದರ್ಶನ ನೆರವಾಗಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಜನತಾ ದರ್ಶನದಲ್ಲಿ ಬರುವ ಅಹವಾಲುಗಳಿಗೆ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯ ಮೂಲಕ ಪರಿಹಾರ ಒದಗಿಸಲು 'ಪ್ರಜಾಧ್ವನಿ ಆ್ಯಪ್' ಸಿದ್ಧಪಡಿಸಲಾಗಿದೆ. ಇದುವರೆಗೂ ಸ್ವೀಕೃತವಾದ ಅರ್ಜಿ, ಮನವಿಗಳನ್ನು ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ (ಐಪಿಜಿಆರ್‌ಎಸ್) ಹಾಗೂ ಇ-ಆಫೀಸ್ ತಂತ್ರಾಂಶದಲ್ಲಿ ದಾಖಲಿಸಿಕೊಂಡು ವಿಲೇವಾರಿ ಮಾಡಲಾಗುತ್ತಿತ್ತು. ಇದೇ ಮೊದಲ ಬಾರಿ ಎರಡೂ ತಂತ್ರಾಂಶ ಒಳಗೊಂಡ ಹೈಬ್ರಿಡ್ ಆ್ಯಪ್ ಸಿದ್ಧಪಡಿಸಲಾಗಿದೆ. ಸಮಸ್ಯೆಗಳಿಗೆ ಪ್ರತಿ ಇಲಾಖೆಯ ಮುಖ್ಯಸ್ಥರು ಆ್ಯಪ್ ಮೂಲಕವೇ ಉತ್ತರ ನೀಡಲಿದ್ದಾರೆ.

ಬಹಿರಂಗ ಹೇಳಿಕೆ ನೀಡದಂತೆ ತಾಕೀತು

ಸಿಎಂ, ಡಿಸಿಎಂ ಹುದ್ದೆ ಸೃಷ್ಟಿ ಪಕ್ಷದ ಆಂತರಿಕ ವಿಷಯ: ವೇಣುಗೋಪಾಲ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹುದ್ದೆ ಸೇರಿದಂತೆ ಆಂತರಿಕ ವಿಚಾರಗಳ ಕುರಿತು ಬಹಿರಂಗ ಹೇಳಿಕೆಗಳನ್ನು ನೀಡಬಾರದು. ಪಕ್ಷ ಮತ್ತು ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಪಕ್ಷದ ವೇದಿಕೆಯಲ್ಲಿ ಮಾತ್ರ ಮಾತನಾಡಬೇಕು' ಎಂದು ರಾಜ್ಯ ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರಿಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಾಕೀತು ಮಾಡಿದ್ದಾರೆ.

ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಹುದ್ದೆಗಳಿಗೆ ಸಂಬಂಧಿಸಿದಂತೆ ಪಕ್ಷದೊಳಗೆ ನಡೆಯುತ್ತಿರುವ ಚರ್ಚೆಯ ಕುರಿತು ಭಾನುವಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಬಹಿರಂಗವಾಗಿ ಈ ರೀತಿಯಹೇಳಿಕೆ ನೀಡುವುದರಿಂದ ಪಕ್ಷಕ್ಕೆ ಹಾನಿಯಾಗುತ್ತದೆ. ರಾಜ್ಯ ಸರ್ಕಾರದ ಕಾರ್ಯ ನಿರ್ವಹಣೆಯ ಮೇಲೂ ಪ್ರತಿಕೂಲ ಪರಿಣಾಮಗಳಾಗುತ್ತವೆ. ಯಾರೇ ಬಹಿರಂಗವಾಗಿ ಅಂತಹ ಹೇಳಿಕೆ ನೀಡಿದರೂ ಸಹಿಸುವುದಿಲ್ಲ' ಎಂದು ಎಚ್ಚರಿಕೆ ನೀಡಿದ್ದಾರೆ.

ನಾಲ್ಕು ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದಿರುವ ಕರ್ನಾಟಕ ಸರ್ಕಾರವು, ಮಹಿಳೆಯರು, ಬಡವರು ಮತ್ತು ಸಾಮಾನ್ಯ ಜನರ ಆಶಯಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದೆ. ದೇಶದಲ್ಲೇ ವಿಭಿನ್ನವಾದ 'ಕರ್ನಾಟಕ ಮಾದರಿ' ಅನುಷ್ಠಾನಕ್ಕೆ ಬಂದಿದೆ ಎಂದು ಹೇಳಿದ್ದಾರೆ.

'ಕಾಂಗ್ರೆಸ್‌ನ ಕೆಲವು ನಾಯಕರು ಮತ್ತು ಸಚಿವರೂ ಇಂತಹ ಚರ್ಚೆಗೆ ಪ್ರತಿಕ್ರಿಯಿಸಿ ಹೇಳಿಕೆಗಳನ್ನು ನೀಡುತ್ತಿರುವುದು ಗಮನಕ್ಕೆ ಬಂದಿದೆ. ಬಿಜೆಪಿ ಮತ್ತು ಇತರ ಪ್ರಾದೇಶಿಕ ಪಕ್ಷಗಳ ಕಾರ್ಯಸೂಚಿಗೆ ಬಲಿಯಾಗಿ ಕಾಂಗ್ರೆಸ್ ನಾಯಕರು ಈ ರೀತಿ ವರ್ತಿಸಬಾರದು. ರಾಜ್ಯ ಸರ್ಕಾರವು ತನ್ನ ಗುರಿ ಸಾಧಿಸಲು ಪಕ್ಷವು ಸಂಘಟಿತವಾಗಿ ಬೆಂಬಲಕ್ಕೆ ನಿಲ್ಲಬೇಕು. ಪಕ್ಷದ ನಾಯಕರು ವಿಭಜನೆಯ ಅಥವಾ ಗೊಂದಲದ ಹೇಳಿಕೆಗಳನ್ನು ನೀಡುವುದು ಪಕ್ಷದ ಶಿಸ್ತಿನ ಉಲ್ಲಂಘನೆಯಾಗುತ್ತದೆ. ಒಗ್ಗಟ್ಟೇ ಪಕ್ಷದ ಯಶಸ್ಸಿನ ಸೂತ್ರ ಎಂಬುದನ್ನು ಅರಿಯಬೇಕು' ಎಂದರು.

'ಮುಸ್ಲಿಂ ಮತಗಳಿಲ್ಲದೇ ಎಚ್‌ಡಿಕೆ ಗೆದ್ದರಾ?'

ಬೆಂಗಳೂರು: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ಚನ್ನಪಟ್ಟಣ ಕ್ಷೇತ್ರದಲ್ಲಿ ಯಾರ ಮತಗಳಿಂದ ಗೆಲುವು ಸಾಧಿಸಿದರು ಎಂದು ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಪ್ರಶ್ನಿಸಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮುಸ್ಲಿಂ ಸಮುದಾಯದ ಜತೆ ನಾನು ನಿಂತಿದ್ದೆ. ಆದರೆ, ಸಮುದಾಯ ಜೆಡಿಎಸ್ ಜತೆ ನಿಲ್ಲಲಿಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರಸ್ವಾಮಿ ಹೇಳಿದ್ದಾರೆ. ಚನ್ನಪಟ್ಟಣದಲ್ಲಿ ಮುಸ್ಲಿಂ ಸಮುದಾಯ ಮತ ನೀಡದಿದ್ದರೆ ಅವರು ಗೆಲ್ಲುತ್ತಿದ್ದರೆ ಎನ್ನುವುದನ್ನು ಖಚಿತಪಡಿಸಲಿ ಎಂದರು.

ಚನ್ನಪಟ್ಟಣದಲ್ಲಿ ಕುಮಾರಸ್ವಾಮಿ ಅವರು ದೊಡ್ಡ ಅಂತರದಲ್ಲಿ ಗೆಲುವು ಪಡೆಯದಿದ್ದರೂ ಮುಸ್ಲಿಂ ಸಮುದಾಯದವರು ಒಟ್ಟಾಗಿ ಮತ ನೀಡಿದ್ದರಿಂದ ಸೋಲನ್ನು ತಪ್ಪಿಸಿಕೊಂಡರು ಎಂದು ಹೇಳಿದರು.

ಜೆಡಿಎಸ್ ಶಾಸಕರಾದ ಎಚ್. ಡಿ. ರೇವಣ್ಣ, ಎಂ.ಟಿ. ಕೃಷ್ಣಪ್ಪ, ಸುರೇಶ್ ಬಾಬು, ಶರಣಗೌಡ ಕಂದಕೂರ, ಕರೆಮ್ಮ ಜಿ. ನಾಯಕ್, ಸಿ.ಎನ್. ಬಾಲಕೃಷ್ಣ ಅವರು ಮುಸ್ಲಿಂ ಸಮುದಾಯದವರು ತಮಗೆ ಮತ ಹಾಕಿಲ್ಲವೆಂದು ಹೇಳಲಿ? ಮುಸ್ಲಿಂ ಸಮುದಾಯ ಜೆಡಿಎಸ್‌ಗೆ ಮತ ಕೊಟ್ಟಿದ್ದಕ್ಕೆ 19 ಸ್ಥಾನಗಳು ಬಂದಿವೆ. ಮುಸ್ಲಿಮರು ಕೈಕೊಟ್ಟಿದ್ದರೆ 6ಕ್ಕಿಂತ ಹೆಚ್ಚು ಸ್ಥಾನ ಬರುತ್ತಿರಲಿಲ್ಲ ಎಂದರು.

ಕುಮಾರಸ್ವಾಮಿ ಹೇಳಿಕೆ ಮುಸ್ಲಿಂ ಸಮುದಾಯಕ್ಕೆ ಮಾಡಿದ ಅವಮಾನ. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರು ಕೋಮುವಾದ ವಿರೋಧಿಸಿದ್ದರು. ಕುಮಾರಸ್ವಾಮಿ ತಮ್ಮ ಹಿತಕ್ಕೆ ಗೌಡರ ತತ್ವ ಬಲಿಕೊಟ್ಟಿದ್ದಾರೆ ಎಂದರು.

ಬಿಎಸ್‌ವೈ ಭೇಟಿಯಾದ ನಿಖಿಲ್

ಬೆಂಗಳೂರು: ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಭಾನುವಾರ ಭೇಟಿಮಾಡಿ, ಕೆಲಕಾಲ ಚರ್ಚಿಸಿದರು. ಬಿಜೆಪಿ ಶಾಸಕ ಮುನಿರತ್ನ ಜತೆಗಿದ್ದರು.

ಭೇಟಿ ಬಳಿಕ ಪತ್ರಕರ್ತರ ಜತೆ ಮಾತನಾಡಿದ ನಿಖಿಲ್, 'ಇದೊಂದು ಸೌಜನ್ಯದ ಭೇಟಿ. ಹಿರಿಯರಾದ ಯಡಿಯೂರಪ್ಪ ಅವರ ಆಶೀರ್ವಾದ ಪಡೆಯಲು ಬಂದಿದ್ದೆ. ನಾನು ರಾಜಕಾರಣದಿಂದ ದೂರ ಸರಿಯುವೆ ಎಂದು ಎಲ್ಲಿಯೂ ಹೇಳಿಲ್ಲ. ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧೆ ಕುರಿತು ಈಗ ಏನನ್ನೂ ಹೇಳುವುದಿಲ್ಲ. ಈಗ ಸೂಕ್ತ ಕಾಲವೂ ಅಲ್ಲ' ಎಂದು ಪ್ರತಿಕ್ರಿಯಿಸಿದರು.

'ರಾಜಕೀಯ ಕೇವಲ ಗಣಿತವಲ್ಲ'

ಬೆಂಗಳೂರು: 'ರಾಜಕಾರಣ ಎಂದರೆ ಕೇವಲ ಗಣಿತವಲ್ಲ. ಅಲ್ಲಿ ರಸಾಯನ ವಿಜ್ಞಾನವೂ ಇರುತ್ತದೆ' ಎಂದು ಬಿಜೆಪಿ ಮುಖಂಡ ಸಿ.ಟಿ. ರವಿ ಭಾನುವಾರ ಹೇಳಿದರು.

ಜೆಡಿಎಸ್ ಈಗ ಎನ್‌ಡಿಎ ಭಾಗವಾಗಿದೆ. ಎರಡೂ ಪಕ್ಷಗಳ ಕಾರ್ಯಕರ್ತರ ಹಂತದಲ್ಲಿ ಮೈತ್ರಿ ರಸಾಯನ ವಿಜ್ಞಾನ ಕೆಲಸ ಮಾಡಬೇಕು. ಸಮನ್ವಯ ಸಾಧಿಸಬೇಕು ಎಂದು ಹೇಳಿದರು.

ಮತ್ತೆ ಸಾವಿರ ಮದ್ಯದಂಗಡಿ?

ಒಂದನೇ ಪುಟದಿಂದ...

379 ಪರವಾನಗಿ ಹರಾಜು: ರಾಜ್ಯದ ವಿವಿಧೆಡೆ 247 ಮದ್ಯದಂಗಡಿ ತೆರೆಯಲು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಸಂಸ್ಥೆಗೆ ಮಂಜೂರಾತಿ ನೀಡಲಾಗಿತ್ತು. ಅವು ಇನ್ನೂ ಆರಂಭವಾಗಿಲ್ಲ. 1987ರಲ್ಲಿ ನಿಗದಿಪಡಿಸಿದ್ದ ಕೋಟಾದ ಅಡಿಯಲ್ಲಿ ಇನ್ನೂ 137 ಮದ್ಯದಂಗಡಿ ಪರವಾನಗಿ ವಿತರಣೆಗೆ ಅವಕಾಶವಿದೆ. ಒಟ್ಟು 379 ಮದ್ಯದಂಗಡಿ ಪರವಾನಗಿಗಳನ್ನು ಎರಡು ವರ್ಷಗಳ ಅವಧಿಗೆ ಖಾಸಗಿಯವರಿಗೆ ಹರಾಜಿನ ಮೂಲಕ ನೀಡುವ ಪ್ರಸ್ತಾವವನ್ನು ಅಬಕಾರಿ ಇಲಾಖೆ ಸಿದ್ಧಪಡಿಸಿದೆ.

ದೀರ್ಘಕಾಲದಿಂದ ನವೀಕರಣವಾಗದೇ ಉಳಿದಿರುವ 200ಕ್ಕೂ ಹೆಚ್ಚು ಮದ್ಯದಂಗಡಿಗಳ ಪರವಾನಗಿಗಳಿಗೆ ಮರುಜೀವ ನೀಡುವುದಕ್ಕೂ ಇಲಾಖೆ ಮುಂದಾಗಿದೆ. ಅಂತಹ ಎಲ್ಲ ಪರವಾನಗಿಗಳನ್ನು ರದ್ದುಗೊಳಿಸಿ, ಅಷ್ಟೇ ಸಂಖ್ಯೆಯ ಹೊಸ ಪರವಾನಗಿ ವಿತರಿಸುವ ಪ್ರಸ್ತಾವವೂ ಇಲಾಖೆಯಲ್ಲಿ ಚರ್ಚೆಯ ಹಂತದಲ್ಲಿದೆ ಎಂದು ಮೂಲಗಳು ಹೇಳಿವೆ.

'ಮದ್ಯಭಾಗ್ಯ': ಎಚ್‌ಡಿಕೆ ಟೀಕೆ

ಒಂದನೇ ಪುಟದಿಂದ...

ಈ ಕುರಿತು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಅಬಕಾರಿ ಆದಾಯ ಹೆಚ್ಚಿಸಲು ಮೂರು ಸಾವಿರ ಜನಸಂಖ್ಯೆ ಇರುವ ಹಳ್ಳಿಗಳು ಹಾಗೂ ಸೂಪರ್ ಮಾರ್ಕೆಟ್‌ಗಳಲ್ಲಿ ಮದ್ಯ ಮಾರಾಟಕ್ಕೆ ಅವಕಾಶ ನೀಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ನಾರಿಯರಿಗೆ ಶಕ್ತಿ ತುಂಬುತ್ತೇವೆ ಎನ್ನುವ ಸರ್ಕಾರ, ಗ್ರಾಮಗಳಲ್ಲೂ ಮದ್ಯ ಮಾರಾಟಕ್ಕೆ ಉತ್ತೇಜನ ನೀಡುವ ಮೂಲಕ ಮಹಿಳೆಯರ ಬಾಳಿಗೆ ಬೆಂಕಿ ಹಾಕುತ್ತಿದೆ. ಗೃಹಲಕ್ಷ್ಮಿಗೂ ಗ್ರಹಣವಾಗಿದೆ. ಅನ್ನಭಾಗ್ಯಕ್ಕೆ ಅಕ್ಕಿ ಹೊಂದಿಸುವ ಬದಲು ಮದ್ಯಭಾಗ್ಯಕ್ಕೆ ಉತ್ತೇಜನ ನೀಡುತ್ತಿದೆ. ಇದು ಕಾಂಗ್ರೆಸ್‌ನ 6ನೇ ಗ್ಯಾರಂಟಿ' ಎಂದಿದ್ದಾರೆ.

'ಅಕ್ಕಿ, ಬೇಳೆ, ದವಸಧಾನ್ಯ, ಹಣ್ಣು ತರಕಾರಿ, ಹಾಲು-ಮೊಸರು ಸಿಗುವ ಸೂಪರ್ ಮಾರುಕಟ್ಟೆಗಳಲ್ಲಿ ಮದ್ಯ ಮಾರಾಟಕ್ಕೆ ಅವಕಾಶ ನೀಡುವುದು ಅಸಹ್ಯದ ಪರಮಾವಧಿ. ಇದು ಸಮಾಜವಾದವೇ' ಎಂದು ಪ್ರಶ್ನಿಸಿದ್ದಾರೆ.

'ರಾಜಕೀಯ ಲಾಭಕ್ಕಾಗಿ'

ಒಂದನೇ ಪುಟದಿಂದ...

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಇದೊಂದು ಮನೆಮುರುಕ ಪ್ರಸ್ತಾವ. ಮನೆಯ ಯಜಮಾನಿಗೆ ತಿಂಗಳಿಗೆ ₹2,000 ಕೊಟ್ಟು, ಯಜಮಾನನಿಂದ ₹6,000 ಸೂರೆ ಮಾಡುವ ಹುನ್ನಾರವಿದು. ಹೆದ್ದಾರಿಗಳ ಇಕ್ಕೆಲಗಳಲ್ಲಿ ಮದ್ಯದಂಗಡಿ ತೆರೆಯುವುದರಿಂದ ಮತ್ತಷ್ಟು ಅಪಘಾತ, ಸಾವು, ನೋವು ಉಂಟಾಗಬಹುದು' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಾಲ್, ಸೂಪರ್ ಮಾರುಕಟ್ಟೆಗಳಲ್ಲಿ ಮದ್ಯದಂಗಡಿ ತೆರೆದರೆ ಯುವಕರು ಸುಲಭವಾಗಿ ಮದ್ಯದ ದಾಸರಾಗಲು ಅವಕಾಶ ನೀಡಿದಂತಾಗುತ್ತದೆ. ಸಣ್ಣ ಗ್ರಾಮ ಪಂಚಾಯಿತಿಗಳಲ್ಲಿ ಮದ್ಯದಂಗಡಿ ಪರವಾನಗಿ ನೀಡುವುದು ಕೂಡ ಬಲಗೈಯಲ್ಲಿ ಖರ್ಚು ಮಾಡಿ, ಎಡಗೈಯಲ್ಲಿ ವಸೂಲಿ ಮಾಡುವ ನಿರ್ದಯಿ ಚಿಂತನೆ ಎಂದು ದೂರಿದ್ದಾರೆ.

'ಸರ್ಕಾರ ತನ್ನ ನಿಲುವು ಬದಲಿಸದಿದ್ದರೆ 'ಶಕ್ತಿ' ಯೋಜನೆಯಡಿ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿನೀಡುತ್ತಿರುವ ಮಹಿಳೆಯರು ಸರ್ಕಾರದ ವಿರುದ್ಧ 'ಸ್ತ್ರೀ ಶಕ್ತಿ' ಪ್ರದರ್ಶನಕ್ಕೆ ಇಳಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ' ಎಂದು ಸುರೇಶ್ ಕುಮಾರ್ ಹೇಳಿದ್ದಾರೆ.


ಇನ್ನಷ್ಟು ಹೊಸ ಪ್ರಸ್ತಾವಗಳು

- ಮೈಕ್ರೋ ಬ್ರೀವರಿ ಪರವಾನಗಿ ಶುಲ್ಕ ₹2.30 ಲಕ್ಷದಿಂದ ₹5 ಲಕ್ಷಕ್ಕೆ ಹೆಚ್ಚಳ
- ಮಹಾನಗರ ಪಾಲಿಕೆ ಹಾಗೂ ಪ್ರವಾಸೋದ್ಯಮ ಇಲಾಖೆಯಿಂದ ಅನುಮೋದನೆ ಪಡೆದ ರೆಸ್ಟೋರೆಂಟ್‌ಗಳಲ್ಲಿ ಬಿಯರ್ ಚಿಲ್ಲರೆ ಮಾರಾಟ ಘಟಕಕ್ಕೆ ಅನುಮತಿ ನೀಡುವುದು
- ತಡವಾಗಿ ಪರವಾನಗಿ ನವೀಕರಣ ಮಾಡುವವರಿಗೆ ಶೇ 25ರಷ್ಟು ದಂಡ ವಿಧಿಸುವುದು

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	96.80	6,156	6,874
ಹಾರಂಗಿ	2,859	2,855.94	992	2,800
ಕಬಿನಿ	2284.00	2,274.70	3,061	4,890
ಹೇಮಾವತಿ	2,922	2,897.10	2,704	1,360
ಲಿಂಗನಮಕ್ಕಿ	1,819	1,787.20	1,651	3,769.26
ಸೂಪಾ (ಮೀ)	564	545.47	3,299	4,330
ಮಾಣಿ	595	580.72	487	00
ತುಂಗಭದ್ರಾ	1,633	1,619.85	2,830	9,885
ಮಲಪ್ರಭಾ	2079.50	2,065.35	00	1,019
ಘಟಪ್ರಭಾ	2175	2,164.98	1,759	180
ಭದ್ರಾ	186	160.5	710	490
ಆಲಮಟ್ಟಿ (ಮೀ)	519.60	518.98	4,263	19,321
ನಾರಾಯಣಪುರ (ಮೀ)	492.25	490.91	19,503	9,349

* ನೆಲಮಟ್ಟದಿಂದ



ಎಂಬಿಎ ಮಾಡಿದರೆ ಭವಿಷ್ಯ ಇದೆಯೇ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ಈಗ ಬಿಬಿಎ ಮೂರನೇ ವರ್ಷದಲ್ಲಿದ್ದೇನೆ. ಮುಂದೆ ಎಂಬಿಎ ಮಾಡುವ ನಿರ್ಧಾರ ಸರಿಯೇ?

ಹೆಸರು, ಊರು ತಿಳಿಸಿಲ್ಲ.

ಬಿಬಿಎ ನಂತರ ಎಂಬಿಎ ಕೋರ್ಸ್ ಉತ್ತಮ ಆಯ್ಕೆ. ಉದ್ಯಮಗಳ ಅಭಿವೃದ್ಧಿಗೆ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಉಪಯೋಗಿಸುವ ಯೋಜನೆಗಳನ್ನು ರಚಿಸಿ, ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದೇ ಮ್ಯಾನೇಜ್‌ಮೆಂಟ್‌ನ ಮೂಲ ಉದ್ದೇಶ. ಈ ಜವಾಬ್ದಾರಿಗಳನ್ನು ನಿರ್ವಹಿಸಲು, ಸಮಗ್ರವಾದ ಜ್ಞಾನ ಮತ್ತು ಕೌಶಲಗಳನ್ನು ಎಂಬಿಎ ಕೋರ್ಸಿನಲ್ಲಿ ನೀಡಲಾಗುತ್ತದೆ. ನೈಪುಣ್ಯ ಮತ್ತು ಚತುರತೆ ವರ್ಧಿಸಿ, ಯಾವುದೇ ಕೆಲಸವನ್ನು ನಿಭಾಯಿಸುವ ಆತ್ಮವಿಶ್ವಾಸ ಬೆಳೆಯುತ್ತದೆ. ಎಂಬಿಎ ಕೋರ್ಸಿನಲ್ಲಿ ವೃತ್ತಿಗೂ, ಜೀವನಕ್ಕೂ ಅಗತ್ಯ ಮೌಲ್ಯಗಳ ಮನದಟ್ಟಾಗುತ್ತದೆ. ವೃತ್ತಿ ಮತ್ತು ಖಾಸಗಿ ಜೀವನಗಳೆರಡರಲ್ಲೂ ಯಶಸ್ಸು ಸಾಧಿಸಬಹುದು. ದೇಶದಲ್ಲಿ ಸುಮಾರು 5,000ಕ್ಕೂ ಹೆಚ್ಚಿನ ಎಂಬಿಎ ಕಾಲೇಜುಗಳಿದ್ದು, ಸಿಎಟಿ, ಪಿಜಿಸಿಯಿಟಿಗಳಂತಹ ಪರೀಕ್ಷೆಗಳ ಮೂಲಕ ಪ್ರವೇಶದ ಆಯ್ಕೆಯಾಗುತ್ತದೆ. ಕ್ಯಾಂಪಸ್ ನೇಮಕಾತಿ ಇರುವ, ಉತ್ತಮ ರ್‍ಯಾಂಕಿಂಗ್

ಇರುವ ಪ್ರತಿಷ್ಠಿತ ಕಾಲೇಜು/ವಿಶ್ವವಿದ್ಯಾಲಯದಲ್ಲಿ ಎಂಬಿಎ ಮಾಡಬೇಕು. ಈ ಮಾಹಿತಿಯನ್ನು ಅನೇಕ ಮಾಧ್ಯಮಗಳು ಅಂತರ್ಜಾಲದಲ್ಲಿ ಪ್ರಕಟಿಸುತ್ತವೆ. ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=1TcHjPKJ1gw

ಇನ್ನಷ್ಟು ಪ್ರಶ್ನೋತ್ತರಕ್ಕಾಗಿ www.prajavani.net ನೋಡಿ.

ಸಾಗರೋತ್ತರ ಕಲಿಕೆಗೆ ಸುಲಭದ ದಾರಿ

ನಾಗೇಶ ಜಿ. ವೈದ್ಯ

> ವಿದೇಶದಲ್ಲಿ ಅಧ್ಯಯನ ಮಾಡಲು ಆಸಕ್ತಿಯಿರುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಹಾಗೂ ಆರ್ಥಿಕವಾಗಿ ಬೆಂಬಲ ನೀಡಲು ಹಲವು ವಿದ್ಯಾರ್ಥಿವೇತನಗಳಿವೆ. ಬಡ್ಡಿ ರಹಿತ, ಕಡಿಮೆ ಬಡ್ಡಿಯ ದೀರ್ಘಾವಧಿ ಸಾಲಗಳೂ ಲಭ್ಯವಿವೆ.

ವಿದೇಶದಲ್ಲಿ ವ್ಯಾಸಂಗ ಮಾಡುವುದು ಅನೇಕ ವಿದ್ಯಾರ್ಥಿಗಳ ಕನಸು. ವಿಪುಲ ಉದ್ಯೋಗಾವಕಾಶ, ಓದಿನ ನಂತರವೂ ಅಲ್ಲೇ ಉದ್ಯೋಗ ಅರಸಲು ಇರುವ ಅವಕಾಶ, ಹೆಚ್ಚಿನ ವೇತನ, ಹೆಚ್ಚಿನ ಭದ್ರತೆ ಮತ್ತು ವಲಸೆ ಹೋಗುವ ಕಾರಣಕ್ಕಾಗಿ ವಿದೇಶಿ ತಾಣಗಳು ವಿದ್ಯಾರ್ಥಿಗಳನ್ನು ಕೈ ಬೀಸಿ ಕರೆಯುತ್ತಿವೆ. ವಿದೇಶದಲ್ಲಿ ವ್ಯಾಸಂಗ ಮುಗಿಸಿದವರಿಗೆ, ಭಾರತದಲ್ಲಿಯೂ ಉತ್ತಮ ಉದ್ಯೋಗವನ್ನು ಪಡೆಯಲು ಸಾಧ್ಯವಾಗುತ್ತದೆ.

ಆದರೆ, ಭಾರತದಲ್ಲಿ ಓದಿ, ವಿದೇಶದಲ್ಲಿ ಉದ್ಯೋಗ ಪಡೆಯುವುದು ಕಷ್ಟಕರ. ಹೆಚ್ಚಿನ ವಿದೇಶಿ ಉದ್ಯೋಗದಾತರು ವೀಸಾವನ್ನು ಪ್ರಾಯೋಜಿಸದಿರುವುದೇ ಕಾರಣ. ವಿದೇಶದಲ್ಲೇ ಓದಿ, ಅಲ್ಲಿಯೇ ಉದ್ಯೋಗ ಪಡೆಯುವುದು ಸುಲಭವೆಂದೇ ಪರಿಗಣಿಸಲಾಗುತ್ತದೆ.

ವಿದೇಶಕ್ಕೆ ಹಾರುವ ಮುನ್ನ

ನೀವು ಆಯ್ಕೆ ಮಾಡಿಕೊಳ್ಳುವ ದೇಶ, ವಿಶ್ವವಿದ್ಯಾಲಯ ಹಾಗೂ ಕೋರ್ಸ್ ಅವಲಂಬಿಸಿ, ಅಧ್ಯಯನ ವೆಚ್ಚವು ಬದಲಾಗುತ್ತದೆ. ಉದ್ಯೋಗದಾತರು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಓದಿದವರಿಗೆ ಆದ್ಯತೆ ನೀಡುವುದರಿಂದ, ನಿಮ್ಮ ವೃತ್ತಿಜೀವನವನ್ನು ಅಭಿವೃದ್ಧಿಪಡಿಸಲು ಅಂತಹವುಗಳನ್ನೇ ಆಯ್ಕೆ ಮಾಡಿಕೊಂಡರೆ ಆಯ್ಕೆಗಳು ಹೆಚ್ಚುವುದರೊಂದಿಗೆ, ಅಧಿಕ ಸಂಬಳವನ್ನೂ ನಿರೀಕ್ಷಿಸಬಹುದು.

ಪ್ರತಿಷ್ಠಿತ ವಿಶ್ವವಿದ್ಯಾಲಗಳಲ್ಲಿ ಎಂಬಿಎ ಪ್ರವೇಶ ಪಡೆಯಲು ಜಿಆರ್‌ಇ, ಜಿಮ್ಯಾಟ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದು ಅನಿವಾರ್ಯ. ವಿದ್ಯಾರ್ಥಿಗಳಿಗೆ ನೀಡಲಾಗುವ ವೀಸಾದ ಅವಧಿ ಅಧ್ಯಯನ ಮುಗಿದ ನಂತರ ಎಷ್ಟು ಕಾಲ ಮಾನ್ಯವಾಗುತ್ತದೆ ಎಂಬುದನ್ನೂ ಗಮನಿಸಿ. ಅಮೆರಿಕ ಮತ್ತು ಬ್ರಿಟನ್‌ನಲ್ಲಿ ಅಧ್ಯಯನದ ನಂತರ ಉದ್ಯೋಗ ವೀಸಾ ಆಗಿ ಪರಿವರ್ತಿಸಲು ಅವಕಾಶವಿದೆ. ಎರಡು ವರ್ಷಗಳ ಕಾಲ ನೀಡಲಾಗುತ್ತದೆ. ಕೆನಡಾದಲ್ಲಿ ಈ ಅವಧಿ ಮೂರು ವರ್ಷದ್ದಿದೆ. ಆ ಅವಧಿಯಲ್ಲೇ ನೀವು ಉದ್ಯೋಗವನ್ನು ಪಡೆದುಕೊಳ್ಳಬೇಕು. ಕೆಲಸ ಪಡೆದ ಮೇಲೆ ನಿಯಮಾನುಸಾರ ಶಾಶ್ವತ ರೆಸಿಡೆನ್ಸಿಗೆ ಅರ್ಜಿ ಸಲ್ಲಿಸಬಹುದು.

ಆಯಾ ದೇಶ ಹಾಗೂ ನೀವು ಆಯ್ದುಕೊಳ್ಳುವ ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿಯನ್ನು ಅವಲಂಬಿಸಿ, ಖರ್ಚು ಭಿನ್ನವಾಗಿರುತ್ತವೆ. ಜರ್ಮನಿ, ಫಿನ್‌ಲ್ಯಾಂಡ್ ಮತ್ತು ನಾರ್ವೆ ದೇಶಗಳು ಯಾವುದೇ ಬೋಧನಾ ಶುಲ್ಕವಿಲ್ಲದೇ ಅಥವಾ ಕೈಗೆಟುಕುವ ಖರ್ಚಿನಲ್ಲಿ ಅಂತರರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತವೆ. ಅತ್ಯುತ್ಕೃಷ್ಟ ಬೋಧನೆಗಾಗಿ ಹೆಸರಾಗಿರುವ ವಿಶ್ವವಿದ್ಯಾಲಯಗಳಲ್ಲಿ ಶುಲ್ಕ ಕೂಡ ಗಣನೀಯವಾಗಿ ಹೆಚ್ಚಾಗಿರುತ್ತದೆ. ನಿಮಗೆ ಸಿಗಬಹುದಾದ ಯಾವುದೇ ಹಣಕಾಸಿನ ನೆರವಿಗಾಗಿ ಮೊದಲೇ ಪರಿಶೀಲಿಸಿ. ಅಮೆರಿಕ, ಆಸ್ಟ್ರೇಲಿಯಾ, ಬ್ರಿಟನ್, ಕೆನಡಾ, ಜರ್ಮನಿಯ ಹೆಚ್ಚಿನ ವಿಶ್ವವಿದ್ಯಾಲಯಗಳಲ್ಲಿ ಅಂತರರಾಷ್ಟ್ರೀಯ ವಿದ್ಯಾರ್ಥಿಗಳು ಸ್ಥಳೀಯ ಭಾಷಾ ಜ್ಞಾನ ಹೊಂದಿರುವುದು ಅತ್ಯಗತ್ಯ. ಭಾರತದಲ್ಲಿರುವಾಗಲೇ ಅವುಗಳಲ್ಲಿ ಪ್ರಾವೀಣ್ಯವನ್ನು ಪಡೆದುಕೊಳ್ಳಿ. ಇದು ಭವಿಷ್ಯದಲ್ಲಿ ಉದ್ಯೋಗ ಪಡೆಯಲಿಕ್ಕೂ ಸಹಾಯಕಾರಿಯಾಗುತ್ತದೆ.

ಡಿಪ್ಲೊಮಾದಿಂದ ಆರಂಭಿಸಿ

ಭಾರತದಲ್ಲಿ 12ನೇ ತರಗತಿಯನ್ನು ಪೂರ್ಣಗೊಳಿಸಿದ ನಂತರ, ವಿದೇಶಿ ಅಧ್ಯಯನವನ್ನು ಸರ್ಟಿಫಿಕೆಟ್ ಕೋರ್ಸ್ ಅಥವಾ ಡಿಪ್ಲೊಮಾದೊಂದಿಗೆ ಆರಂಭಿಸಬಹುದು. ಇವು ತ್ವರಿತ ಉದ್ಯೋಗಕ್ಕಾಗಿ ನಿಮ್ಮನ್ನು ಅಣಿಗೊಳಿಸುತ್ತವೆ. ಸ್ನಾತಕ ಪೂರ್ವ ಅಧ್ಯಯನಕ್ಕೂ ಅವಕಾಶವಿದೆ. ಅಮೆರಿಕ, ಆಸ್ಟ್ರೇಲಿಯಾ, ಕೆನಡಾಗಳಲ್ಲಿ ಎರಡು ವರ್ಷದ ಅವಧಿಯ ಪದವಿಪೂರ್ವ ಅಸೋಸಿಯೇಟ್ ಪದವಿ (ಸಹವರ್ತಿ ಪದವಿ) ಕೋರ್ಸ್‌ಗಳಿವೆ. ಪದವೀಧರರು ಸ್ನಾತಕೋತ್ತರ ಪದವಿಗಾಗಿ ಪ್ರವೇಶ ಪಡೆಯಬಹುದು.

ನಿಮ್ಮ ಅಧ್ಯಯನಕ್ಕೆ ವಿಷಯವನ್ನು ಆಯ್ಕೆ ಮಾಡಿಕೊಳ್ಳುವಾಗ, ಆ ದೇಶದಲ್ಲಿ ಅಂತಹ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳೂ ಇರುವುದನ್ನು ಗುರುತಿಸಿಕೊಳ್ಳಿ. ಪ್ರಸ್ತುತ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತಕ್ಕೆ(STEM) ಜಾಗತಿಕ ಮಟ್ಟದಲ್ಲಿ ಬೇಡಿಕೆಯಿದೆ. ಹಾಗೆಯೇ ಡೇಟಾ ಸೈನ್ಸ್ ಮತ್ತು ಡೇಟಾ ಅನಾಲಿಟಿಕ್ಸ್, ರೊಬೊಟಿಕ್ಸ್, ಕೃತಕ ಬುದ್ಧಿಮತ್ತೆ, ಜೈವಿಕ ತಂತ್ರಜ್ಞಾನ, ಆತಿಥ್ಯ ಮತ್ತು ಪ್ರವಾಸೋದ್ಯಮ, ಕೃಷಿ ಮತ್ತು ಆಹಾರ ವಿಜ್ಞಾನ, ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್, ಐಟಿ ಮತ್ತು ಟೆಲಿಕಾಂ, ಬಯೋಟೆಕ್ನಾಲಜಿ, ಆರೋಗ್ಯ, ಹಣಕಾಸು ಸೇವೆಗಳನ್ನು ಅಧ್ಯಯನ ಮಾಡಿದವರಿಗೆ ವಿಪುಲವಾದ ಉದ್ಯೋಗಾವಕಾಶಗಳಿವೆ.

ವಿದೇಶಗಳಲ್ಲಿ ಓದುವ ಭಾರತೀಯ ವಿದ್ಯಾರ್ಥಿಗಳಿಗೆ ಭಾರತದಲ್ಲೇ ಅನೇಕ ವಿದ್ಯಾರ್ಥಿವೇತನಗಳು ಲಭ್ಯವಿವೆ. ಕೆಲವು ಬಡ್ಡಿ ರಹಿತ ಅಥವಾ ಕಡಿಮೆ ಬಡ್ಡಿಯ ಸಾಲದ ಯೋಜನೆಗಳೂ ಇವೆ. ಹಾಗೆಯೇ ಅಧ್ಯಯನ ಮಾಡುವ ದೇಶಗಳ ಸರ್ಕಾರಗಳು, ವಿಶ್ವವಿದ್ಯಾಲಯಗಳೂ ವಿದ್ಯಾರ್ಥಿ ವೇತನವನ್ನು ನೀಡುತ್ತವೆ.

ಭಾಗ 1

ಹಲವಾರು ದೇಶಗಳಲ್ಲಿ ವಿದ್ಯಾರ್ಥಿಗಳು ಕಿರಿಯರಿಗೆ ಬೋಧಕರಾಗಿ ತಾತ್ಕಾಲಿಕವಾಗಿ ಕೆಲಸ ಮಾಡಲಿಕ್ಕೂ ಅನುವು ಮಾಡಿಕೊಡುತ್ತವೆ. ಹಾಗಾಗಿ, ನಿಮ್ಮ ಖರ್ಚನ್ನು ಕೆಲವು ಮಟ್ಟಿಗೆ ಹೊಂದಿಸಬಹುದು. ಭಾರತೀಯ ವಿದ್ಯಾರ್ಥಿಗಳಿಗೆ ಲಭ್ಯವಿರುವ ಪ್ರಮುಖ ವಿದ್ಯಾರ್ಥಿವೇತನಗಳನ್ನು ನೋಡೋಣ.

ವಿದೇಶದಲ್ಲಿ ಅಧ್ಯಯನಕ್ಕೆ ಸ್ಕಾಲರ್‌ಶಿಪ್

ಭಾರತ ಸರ್ಕಾರದಿಂದ ಪ್ರಾಯೋಜಿತವಾದ, ಇನ್ನು ಕೆಲವು ವಿವಿಧ ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳಿಂದ ಕೊಡಲಾಗುವ ವಿದ್ಯಾರ್ಥಿ ವೇತನಗಳಿವೆ. ಇನ್ನು ಕೆಲವು ಯೋಜನೆಗಳು ಬಡ್ಡಿ ರಹಿತ ಅಥವಾ ಕಡಿಮೆ ಬಡ್ಡಿಯಲ್ಲಿ ಸಾಲ ಒದಗಿಸುತ್ತವೆ. ಒಂದೊಂದು ಯೋಜನೆಗೂ ಅದರದ್ದೇ ಆದ ನಿಯಮಗಳಿವೆ. ಉತ್ತಮ ಶೈಕ್ಷಣಿಕ ದಾಖಲೆ ಇರಬೇಕು. ಎಲ್ಲ ವಿದ್ಯಾರ್ಥಿ ವೇತನಗಳಿಗೂ ನೀವು ಅರ್ಜಿ ಸಲ್ಲಿಸುವಾಗ ಭಾರತದಲ್ಲಿ ನೆಲೆಸಿರಬೇಕಿರುವುದು ಕಡ್ಡಾಯ.

(ಮುಂದಿನವಾರ: ಇನ್ನಷ್ಟು ವಿದ್ಯಾರ್ಥಿ ವೇತನಗಳು / ಶೈಕ್ಷಣಿಕ ಸಾಲಗಳ ಕುರಿತ ವಿವರ)

ಅಗಾ ಖಾನ್ ಫೌಂಡೇಶನ್

ಯಾರಿಗೆ : ಅಮೆರಿಕ, ಬ್ರಿಟನ್, ಫ್ರಾನ್ಸ್, ಕೆನಡಾ ಮತ್ತು ಪೋರ್ಚುಗಲ್‌ನ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುವವರಿಗೆ.
ಅರ್ಹತೆ: ಅತ್ಯುತ್ತಮ ಶೈಕ್ಷಣಿಕ ದಾಖಲೆ ಹೊಂದಿರಬೇಕು. ವಯಸ್ಸು 30ಕ್ಕಿಂತ ಕಡಿಮೆ ಇರಬೇಕು.
ಮೊತ್ತ: ಬೋಧನಾ ಶುಲ್ಕ ಮತ್ತು ಜೀವನ ವೆಚ್ಚ (ಶೇ.50 ಅನುದಾನ ಹಾಗೂ ಶೇ.50 ಸಾಲವಾಗಿ). ಸಾಲದ ಭಾಗಕ್ಕೆ ಶೇ.5ರ ವಾರ್ಷಿಕ ಸೇವಾ ಶುಲ್ಕವಿದೆ. ಕುಟುಂಬದ ಹಿರಿಯರೊಬ್ಬರ ಜಾಮೀನು ಕೂಡ ಅವಶ್ಯ. ಅಧ್ಯಯನ ಮುಗಿದ ಆರು ತಿಂಗಳಿಗೆ ಮರುಪಾವತಿ ಆರಂಭ. ಸಾಲ ಮರುಪಾವತಿಗೆ ಐದು ವರ್ಷಗಳ ಅವಧಿ ನೀಡಲಾಗುತ್ತದೆ. ವಿವರಗಳಿಗೆ https://the.akdn/en/home ಜಾಲತಾಣಕ್ಕೆ ಭೇಟಿ ನೀಡಬಹುದು.

ರಾಷ್ಟ್ರೀಯ ಸಾಗರೋತ್ತರ ವಿದ್ಯಾರ್ಥಿವೇತನ

ಯಾರಿಗೆ : ಸ್ನಾತಕೋತ್ತರ ಪದವಿ ಮತ್ತು ಪಿಎಚ್‌ಡಿ ಮಾಡುವವರಿಗೆ.
ಅರ್ಹತೆ : ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಭೂರಹಿತ ಕೃಷಿ ಕಾರ್ಮಿಕರು ಮತ್ತು ಸಾಂಪ್ರದಾಯಿಕ ಕುಶಲಕರ್ಮಿಗಳ ವರ್ಗಗಳ ಕಡಿಮೆ ಆದಾಯ ಪಡೆಯುವ ಕುಟುಂಬದ ವಿದ್ಯಾರ್ಥಿಗಳು. ಪದವಿಯಲ್ಲಿ ಕನಿಷ್ಠ ಶೇ.55 ಅಂಕಗಳನ್ನು ಪಡೆದಿರಬೇಕು. ವಯಸ್ಸು 35ರ ಒಳಗೆ ಇರಬೇಕು. ಆದಾಯ ₹6 ಲಕ್ಷ ಗಳ ಮಿತಿಯಲ್ಲಿ ಇರತಕ್ಕದ್ದು. ಶೇ.30ರಷ್ಟು ವಿದ್ಯಾರ್ಥಿವೇತನ ಮಹಿಳಾ ವಿದ್ಯಾರ್ಥಿಗಳಿಗೆ ಮೀಸಲು.
ಮೊತ್ತ: ಬೋಧನಾ ಶುಲ್ಕ, ನಿರ್ವಹಣಾ ಭತ್ಯೆ, ವೈದ್ಯಕೀಯ ವಿಮೆ, ವೀಸಾ ಶುಲ್ಕ, ಪ್ರಾಸಂಗಿಕ ಪ್ರಯಾಣ ಮತ್ತು ಸಲಕರಣೆ ಭತ್ಯೆ.

ಹೆಚ್ಚಿನ ವಿವರಗಳಿಗೆ https://socialjustice.gov.in/schemes/28

II PUC BIOLOGY

REPRODUCTION


Reproduction in flowering plants

20. How does pollination take place in Zostera?
Ans:- Zostera (Sea Grass) is marine angiosperm. Pollen grains are long and ribbon-like, upto 2500 mm in size. Exine is absent. The filamentous pollen grains float below the surface of water as they have a specific gravity exactly similar to that of water stigmas are also quite long. The two have a fair chance to come in contact for pollination.

21. What is Epihydrophily?
Ans:- Epihydrophily is a mode of pollination which takes place on the surface of water. ***Eg:-*** *Lemna, Vallisneria.*

22. How does pollination take place in Vallisneria?
Ans:- Vallisneria (Tape Grass or Eel Grass) is submerged, dioecious, fresh water plant. Male plant produces a large number of male flowers which after breaking, rise upward in closed state and open on the surface of water. Each male flower has two functional stamens, two tepals forming boat like structure while a third small upwardly bent tepal forms a sail. Female plant produces female flowers singly at the tip long pedicels that bring the flowers on the surface of water. Stigma is trifid. During floating, male flowers are drawn in the depression of female flower. Ripe anthers of open male flowers come in contact with large trifid stigma of the female to effect pollination. After the pollination, female flower closes again. It is brought down into water by coiling of stalk.

Male and Female flowers of Vallisneria



23. What is Zoophily?
Ans:- Zoophily is a mode of pollination in which the biotic agency of animals is used for transfer of pollens from anthers of one flower to the stigma of another flower.

24. Mention the subtypes of Zoophily.
Ans:- Zoophily has several subtypes, they are - entomophily, malacophily, chiropterophily, ornithophily, myrmecophily and anthrophily.

25. Mention some animals carrying out Zoophily.
Ans:- Gecko Lizard, Garden Lizard (reptiles), arboreal (tree dwelling) rodents, lemurs (primates).

26. What is Entomophily?
Ans:- Entomophily is transfer of pollen grains from anthers of one flower to the stigma of another flower with the help of insects like moths, bees, wasps, butterflies, beetles, wasps, ants, flies, etc.

27. Mention the characteristics of Entomophilous Flowers.
Ans:- Some characteristics of Entomophilous Flowers are (i) Flowers are coloured for attracting the insects. Moths are attracted towards the white flowers. Reddish flowers attract butterflies and waps. Honey bees are attracted towards the bluish-purplish-violet-yellow flowers which appear coloured in ultra-violet vision of bees. Honey bees rarely visit a red flower because it appears black in ultra-violet radiations.
(ii) Both sepals and petals are well developed.
(iii) Petals are usually coloured. Where petals are not showy, other flower parts become conspicuous. e.g., coloured bract in *Bougainvillea*, involucres in *Euphorbia* and *Poinsettia*, coloured leaves in *Euporbia Pulcherrima*, Spathes in arioids, one sepal enlarged in *Mussaenda*, stamens in ***Callistemon*** (Bottle Brush), *Acacia and Mimosa.*
iv) Flowers are generally large in size so that they become conspicuous from a distance. Where flowers are small in size, they are aggregated to from conspicuous groups.
v) Flowers commonly produce odour. It can be pleasant (Jasmine, Rose, Mustard, Chameli, Champa) or foul (*Aristolochia*, Arum, *Rafflesia*). Foul odour attracts flies and beetles. Foul smell of *Rafflesia* (largest flower) attracts carrion flies for pollination.
vi) Majority of flowers have landing platform for insects.
vii) Special markings are present on petals to guide the insects to nectar. They are called **nectar guides** or **honey guides**, *e.g., Viola.*
viii) Visiting insects are fed by either nectar as in case of *Adhatoda*, Buttercup, Jasmine, Bottle Brush and Larkspur or edible pollen as in *Magnolia, Papaver, Rosa and Clematis*. Bees visit flowers for obtaining both nectar and edible pollen. They have special sacs for gathering pollen. The same are called **pollen baskets.**
Some flowers provide **shelter** to pollinators. Others provide them safe place to deposit eggs *e.g.,**Amorphophallus.***
ix) Pollen grains are covered by a yellow sticky substance called **pollenkitt.**
x) Pollen grains are **Spiny** and heavy.
xi) Normally stamens are inserted except when they take part in insect attraction, *e.g., Mimosa.*
xii) Stigma is inserted and sticky.
Honey bees rarely visit a red flower because it appears black in ultra-violet radiations.

28. What is Ornithophily?
Ans:- Ornithophily is the mode of pollination where the birds are the agents of pollination.

29. Name some of the birds that bring about pollination?
Ans:- Sun birds, Humming birds, Myna, Parrot, Bulbul and Crow.

30. Mention the characteristics of Ornithophilous Flowers.
Ans:- The characteristics of Ornithophilous Flowers are -
(i) Flowers are large sized.
(ii) They are brightly coloured with yellowish, orange, reddish or bluish colour.
(iii) Odour is generally absent.
(iv) Corolla is often funnel shaped.
(v) Floral parts are strong and leathery.
(vi) Flowers secrete a lot of nectar.

31. Name some of the common Ornithophilous Flowers.
Ans:- Some of the common Ornithophilous Flowers are – Bignonia, Tecomaria (Honey Suckle), Butea monosperma, Erythrina and Graillea, Callistemon, Bombax, Agave, etc.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಅಭ್ಯಾಸ 1.1

3) ಇವುಗಳಲ್ಲಿ ಯಾವುವು ಸಮಾಂತರ ಶ್ರೇಢಿಗಳಾಗಿವೆ? ಸಮಾಂತರ ಶ್ರೇಢಿಗಳಾಗಿದ್ದಲ್ಲಿ ಸಾಮಾನ್ಯ ವ್ಯತ್ಯಾಸ ಕಂಡುಹಿಡಿದು ಅದರ ಮುಂದಿನ ಮೂರು ಪದಗಳನ್ನು ಬರೆಯಿರಿ

(iv) – 10, – 6, – 2, 2, ……….
ಪರಿಹಾರ:

$-10, -6, -2, 2, \ldots$

$a_2 - a_1 = -6 - (-10) = -6 + 10 = 4$

$a_3 - a_2 = -2 - (-6) = -2 + 6 = 4$

$a_4 - a_3 = 2 - (-2) = 2 + 2 = 4$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ
ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 4$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.
ಮುಂದಿನ ಮೂರು ಪದಗಳು

$2 + 4 = 6$
$6 + 4 = 10$
$10 + 4 = 14$

(v) 3, 3 + √2 , 3 + 2 √2, 3 + 3 √2 , . . .
Soln: $3, 3+\sqrt{2}, 3+2\sqrt{2}, 3+3\sqrt{2}, \ldots$

$a_2 - a_1 = (3+\sqrt{2}) - 3 = \sqrt{2}$
$a_3 - a_2 = (3+2\sqrt{2}) - (3+\sqrt{2}) = \sqrt{2}$
$a_4 - a_3 = (3+3\sqrt{2}) - (3+2\sqrt{2}) = \sqrt{2}$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ
ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = \sqrt{2}$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.
ಮುಂದಿನ ಮೂರು ಪದಗಳು

$(3+3\sqrt{2}) + \sqrt{2} = 3 + 4\sqrt{2}$
$(3+4\sqrt{2}) + \sqrt{2} = 3 + 5\sqrt{2}$
$(3+5\sqrt{2}) + \sqrt{2} = 3 + 6\sqrt{2}$

(vi) 0.2, 0.22, 0.222, 0.2222, . . .
ಪರಿಹಾರ:

$0.2, 0.22, 0.222, 0.2222, \ldots$
$a_2 - a_1 = (0.22) - 0.2 = 0.02$
$a_3 - a_2 = (0.222) - (0.22) = 0.002$

ಇಲ್ಲಿ $a_2 - a_1 \neq a_3 - a_2$
ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(vii) 0, – 4, – 8, –12, . ………. .
Soln: $0, -4, -8, -12, \ldots$

$a_2 - a_1 = -4 - 0 = -4$
$a_3 - a_2 = -8 - (-4) = -8 + 4 = -4$
$a_4 - a_3 = -12 - (-8) = -12 + 8 = -4$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ
ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = -4$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.
ಮುಂದಿನ ಮೂರು ಪದಗಳು

$-12 + (-4) = -16$
$-16 + (-4) = -20$
$-20 + (-4) = -24$

(viii) $-\frac{1}{2}, -\frac{1}{2}, -\frac{1}{2}, -\frac{1}{2}, \ldots$
Soln: $-\frac{1}{2}, -\frac{1}{2}, -\frac{1}{2}, -\frac{1}{2}, \ldots$

$a_2 - a_1 = -\frac{1}{2} - \left(-\frac{1}{2}\right) = -\frac{1}{2} + \frac{1}{2} = 0$
$a_3 - a_2 = -\frac{1}{2} - \left(-\frac{1}{2}\right) = -\frac{1}{2} + \frac{1}{2} = 0$
$a_4 - a_3 = -\frac{1}{2} - \left(-\frac{1}{2}\right) = -\frac{1}{2} + \frac{1}{2} = 0$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ
ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 0$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.
ಮುಂದಿನ ಮೂರು ಪದಗಳು

$-\frac{1}{2} + 0 = -\frac{1}{2}$
$-\frac{1}{2} + 0 = -\frac{1}{2}$
$-\frac{1}{2} + 0 = -\frac{1}{2}$

(ix) 1, 3, 9, 27, . . .
ಪರಿಹಾರ: $a_2 - a_1 = 3 - 1 = 2$
$a_3 - a_2 = 9 - 3 = 6$
$a_4 - a_3 = 27 - 9 = 18$

ಇಲ್ಲಿ $a_2 - a_1 \neq a_3 - a_2$
ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(x) *a, 2a, 3a, 4a,* . . .
ಪರಿಹಾರ:

$a_2 - a_1 = 2a - a = a$
$a_3 - a_2 = 3a - 2a = a$
$a_4 - a_3 = 4a - 3a = a$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ
ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = a$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.
ಮುಂದಿನ ಮೂರು ಪದಗಳು

$4a + a = 5a$
$5a + a = 6a$
$6a + a = 7a$

(xi) $a, a^2, a^3, a^4, \ldots$
ಪರಿಹಾರ: $a_2 - a_1 = a^2 - a = a(a-1)$
$a_3 - a_2 = a^3 - a^2 = a^2(a-1)$

ಇಲ್ಲಿ $a_2 - a_1 \neq a_3 - a_2$
ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(xii) $\sqrt{2}, \sqrt{8}, \sqrt{18}, \sqrt{32} \ldots$
ಪರಿಹಾರ:

$\sqrt{2}, \sqrt{8}, \sqrt{18}, \sqrt{32}, \ldots$
$a_2 - a_1 = \sqrt{8} - \sqrt{2} = 2\sqrt{2} - \sqrt{2} = \sqrt{2}$
$a_3 - a_2 = \sqrt{18} - \sqrt{8}$

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿದ್ಯಾರ್ಥಿ ವೇತನ ಕೈಪಿಡಿ

ಎಲ್‌ಐಸಿ ವಿದ್ಯಾಧನ್

ವಿವರ: ಎಲ್‌ಐಸಿ ಹೌಸಿಂಗ್ ಫೈನಾನ್ಸ್‌ನಿಂದ ನೀಡುವ ಎಲ್‌ಐಸಿ ಎಚ್‌ಎಫ್‌ಎಲ್ ವಿದ್ಯಾಧನ್ ಸ್ಕಾಲರ್‌ಶಿಪ್‌ಗೆ ಅರ್ಜಿ ಆಹ್ವಾನಿಸಲಾಗಿದೆ. 11 ನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ಕಲಿಯುತ್ತಿರುವ ಕಡಿಮೆ ಆದಾಯದ ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಸಬಲೀಕರಣಗೊಳಿಸುವ ಉದ್ದೇಶ ಹೊಂದಿದೆ.
ಅರ್ಹತೆ: 11ನೇ ತರಗತಿ ಮತ್ತು ಮೊದಲ ವರ್ಷದ ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಲ್ಲಿ (2023-24 ಶೈಕ್ಷಣಿಕ ವರ್ಷದಲ್ಲಿ) ಅಧ್ಯಯನ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಅರ್ಜಿದಾರರು ತಮ್ಮ ಹಿಂದಿನ ಅರ್ಹತಾ ಪರೀಕ್ಷೆಯಲ್ಲಿ ಶೇ 60 ಹೆಚ್ಚು ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ₹ 3,60,000ಕ್ಕಿಂತ ಹೆಚ್ಚಿರಬಾರದು.
ಆರ್ಥಿಕ ಸಹಾಯ: ವಾರ್ಷಿಕ ₹ 25 ಸಾವಿರ
ಅರ್ಜಿ ಸಲ್ಲಿಸಲು ಕೊನೆಯ ದಿನ: ಸೆಪ್ಟೆಂಬರ್ 30
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಮಾಹಿತಿಗೆ: Short Url: www.b4s.in/praja/LHVC11

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ವಿವೇಕ ಎಂಬುದು ವಯಸ್ಸಿಗೆ ಅನುಗುಣವಾಗಿ ಬರುವುದಿಲ್ಲ. ಅದು ಬರುವುದು ಶಿಕ್ಷಣ ಮತ್ತು ಕಲಿಕೆಯಿಂದ.

-ಆ್ಯಂಟನ್ ಚೆಖೋವ್

ಮಾರ್ಗಸೂಚಿ ದರ ಪರಿಷ್ಕರಣೆ ವಿಳಂಬವಾದರೂ ಸೂಕ್ತ ತೀರ್ಮಾನ

ಸ್ಥಿರಾಸ್ತಿಗಳ ಮೇಲಿನ ಮಾರ್ಗಸೂಚಿ ದರವನ್ನು ಶೇಕಡ 25ರಿಂದ ಶೇಕಡ 30ರವರೆಗೆ ಹೆಚ್ಚು ಮಾಡಲು ರಾಜ್ಯ ಸರ್ಕಾರ ಕೈಗೊಂಡಿರುವ ತೀರ್ಮಾನವು ಹೆಚ್ಚುವರಿ ವರಮಾನ ಸಂಗ್ರಹಕ್ಕೆ ನೆರವಾಗಲಿದೆ. ಅಲ್ಲದೆ, ರಿಯಲ್ ಎಸ್ಟೇಟ್ ವಹಿವಾಟುಗಳಲ್ಲಿ ಕಪ್ಪುಹಣದ ಚಲಾವಣೆಯನ್ನು ಒಂದು ಹಂತದವರೆಗೆ ನಿಯಂತ್ರಿಸುವಲ್ಲಿಯೂ ನೆರವಾಗಬಹುದು. ಮಾರ್ಗಸೂಚಿ ದರ ಅಂದರೆ ನಿರ್ದಿಷ್ಟ ಪ್ರದೇಶದಲ್ಲಿ ಸ್ಥಿರಾಸ್ತಿಯ ಮಾರಾಟಕ್ಕೆ ಸರ್ಕಾರ ನಿಗದಿ ಮಾಡಿರುವ ಕನಿಷ್ಠ ದರ. ಈಗಿನ ಪರಿಷ್ಕರಣೆಯ ಪರಿಣಾಮವಾಗಿ ಸರ್ಕಾರವು ಮುದ್ರಾಂಕ ಶುಲ್ಕದ ಮೂಲಕ ಹೆಚ್ಚುವರಿಯಾಗಿ ₹ 2,000 ಕೋಟಿ ವರಮಾನ ಸಂಗ್ರಹಿಸಲು ಸಾಧ್ಯವಾಗುತ್ತದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದ್ದಾರೆ. ಕಾನೂನಿನ ಪ್ರಕಾರ, ಮಾರ್ಗಸೂಚಿ ದರವನ್ನು ಪ್ರತಿವರ್ಷವೂ ಪರಿಷ್ಕರಣೆ ಮಾಡಬೇಕು. ಆದರೆ, 2019ರ ನಂತರದಲ್ಲಿ, ಅಂದರೆ ಸರಿಸುಮಾರು ನಾಲ್ಕೂವರೆ ವರ್ಷಗಳ ಕಾಲ, ಮಾರ್ಗಸೂಚಿ ದರದ ಪರಿಷ್ಕರಣೆ ಆಗಿರಲಿಲ್ಲ. ಮಾರ್ಗಸೂಚಿ ದರವನ್ನು ಪರಿಷ್ಕರಣೆ ಮಾಡದೇ ಇದ್ದಿದ್ದಕ್ಕೆ ಕೋವಿಡ್ ಸಾಂಕ್ರಾಮಿಕದ ಕಾರಣ ನೀಡಲಾಗಿತ್ತು. ಇದು ಸರಿಯೋ ತಪ್ಪೋ ಎಂಬುದು ಬೇರೆ ವಿಚಾರ. ಮುದ್ರಾಂಕ ಮತ್ತು ನೋಂದಣಿ ಇಲಾಖೆಗೆ 2023–24ನೇ ಹಣಕಾಸು ವರ್ಷದಲ್ಲಿ ₹ 25 ಸಾವಿರ ಕೋಟಿ ವರಮಾನ ಸಂಗ್ರಹಿಸುವ ಗುರಿಯನ್ನು ಹಣಕಾಸು ಖಾತೆಯ ಜವಾಬ್ದಾರಿಯನ್ನೂ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ನಿಗದಿ ಮಾಡಿದ್ದಾರೆ. ಮಾರ್ಗಸೂಚಿ ದರ ನಿಗದಿಗೆ ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಆಧರಿಸಿದ ವೈಜ್ಞಾನಿಕ ಹಾಗೂ ತಾರ್ಕಿಕ ವ್ಯವಸ್ಥೆಯೊಂದನ್ನು ರೂಪಿಸುವ ಭರವಸೆಯನ್ನು ಕೂಡ ಮುಖ್ಯಮಂತ್ರಿ ನೀಡಿದ್ದರು. ಹೊಸ ದರವು ರಾಜ್ಯದಾದ್ಯಂತ ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ.



ಮಾರ್ಗಸೂಚಿ ದರ ಪರಿಷ್ಕರಣೆಯಿಂದ ರಾಜ್ಯದ ವರಮಾನ ಹೆಚ್ಚಲಿದೆ. ರಿಯಲ್ ಎಸ್ಟೇಟ್ ವಲಯದ ಹಿತವೂ ಇದರಲ್ಲಿ ಅಡಗಿದೆ

ವಾಸ್ತವದಲ್ಲಿ, ಇಂದು ಸ್ಥಿರಾಸ್ತಿಯು ಮಾರಾಟವಾಗುವ ನೈಜ ಮಾರುಕಟ್ಟೆ ಬೆಲೆಗೂ ಮಾರ್ಗಸೂಚಿ ದರಕ್ಕೂ ಬಹಳ ವ್ಯತ್ಯಾಸ ಇದೆ. ಮುದ್ರಾಂಕ ಶುಲ್ಕ ಹಾಗೂ ಬಂಡವಾಳ ವೃದ್ಧಿ ತೆರಿಗೆಯನ್ನು ಪಾವತಿಸುವುದು ಮಾರ್ಗಸೂಚಿ ದರವನ್ನು ಆಧರಿಸಿದೆ. ಸಚಿವ ಕೃಷ್ಣ ಬೈರೇಗೌಡ ಅವರು ಹೇಳಿರುವ ಪ್ರಕಾರ, ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ಥಿರಾಸ್ತಿಗಳ ಮಾರುಕಟ್ಟೆ ಬೆಲೆಯು ಮಾರ್ಗಸೂಚಿ ಬೆಲೆಗಿಂತ ಐನೂರು ಪಟ್ಟು ಹೆಚ್ಚಿದೆ. ರಾಷ್ಟ್ರೀಯ ಹೆದ್ದಾರಿ ಸಮೀಪದಲ್ಲಿ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆಯು ಎಕರೆಗೆ ₹ 5 ಲಕ್ಷದಿಂದ ₹ 10 ಲಕ್ಷದವರೆಗೆ ಇದೆ. ಆದರೆ ಮಾರುಕಟ್ಟೆ ಬೆಲೆಯು ಎಕರೆಗೆ ₹ 10 ಕೋಟಿಗೂ ಹೆಚ್ಚಾಗಿದೆ. ಇಂತಹ ಕಡೆಗಳಲ್ಲಿ ಮಾರ್ಗಸೂಚಿ ದರವನ್ನು ಶೇಕಡ 50ರವರೆಗೆ ಹೆಚ್ಚಿಸಲಾಗುತ್ತಿದೆ. ಮಾರ್ಗಸೂಚಿ ದರ ಹಾಗೂ ಮಾರುಕಟ್ಟೆ ಬೆಲೆಯ ಮಧ್ಯದ ಮೊತ್ತವನ್ನು ಸಾಮಾನ್ಯವಾಗಿ ನಗದು ರೂಪದಲ್ಲಿ ಪಾವತಿ ಮಾಡಲಾಗುತ್ತಿದೆ. ಇದು ಬಂಡವಾಳ ವೃದ್ಧಿ ತೆರಿಗೆ ಹಾಗೂ ಮುದ್ರಾಂಕ ಶುಲ್ಕದ ವಂಚನೆಗೆ ಕಾರಣವಾಗುತ್ತಿದೆ. ಸ್ಥಿರಾಸ್ತಿಗಳ ಮಾರಾಟ ನಡೆದಾಗ ಅದರ ಮಾರಾಟ ಬೆಲೆಯನ್ನು ಕಡಿಮೆ ಮಟ್ಟದಲ್ಲಿ ತೋರಿಸುತ್ತಿರುವುದರ ಪರಿಣಾಮವಾಗಿ ಕಪ್ಪುಹಣ ಸೃಷ್ಟಿಯಾಗುತ್ತಿದೆ ಎಂದು ಆದಾಯ ತೆರಿಗೆ ಇಲಾಖೆಯು ಮತ್ತೆ ಮತ್ತೆ ಹೇಳಿದೆ. ಈ ವಹಿವಾಟುಗಳಲ್ಲಿ ಆಸ್ತಿ ಖರೀದಿ ಮಾಡುವವರು ಕಪ್ಪುಹಣವನ್ನು ಸ್ಥಿರಾಸ್ತಿಗಳಲ್ಲಿ ತೊಡಗಿಸುತ್ತಿದ್ದಾರೆ. ಅಂದರೆ, ಆಸ್ತಿ ಮಾರಾಟ ಮಾಡುವವರು ಹಣಕಾಸು ವ್ಯವಸ್ಥೆಯ ಲೆಕ್ಕಕ್ಕೇ ಸಿಗದ ಹಣವನ್ನು ಪಡೆದುಕೊಳ್ಳುತ್ತಿದ್ದಾರೆ.

ಮಾರ್ಗಸೂಚಿ ದರವನ್ನು ಹೆಚ್ಚು ಮಾಡಿರುವ ಕಾರಣ ಮುದ್ರಾಂಕ ಶುಲ್ಕವೂ ಹೆಚ್ಚಾಗುತ್ತದೆ. ಹೀಗಾಗಿ ಸ್ಥಿರಾಸ್ತಿಗಳ ಬೆಲೆ ತುಸು ಹೆಚ್ಚಳವಾಗುವುದು ಸಹಜ. ಹೀಗಿದ್ದರೂ, ಮಾರ್ಗಸೂಚಿ ದರವನ್ನು ಪರಿಷ್ಕರಿಸಿರುವುದರಲ್ಲಿ ರಾಜ್ಯದ ಹಿತ ಇದೆ. ರಿಯಲ್ ಎಸ್ಟೇಟ್ ವಲಯದ ಹಿತ ಇದೆ. ಏಕೆಂದರೆ, ದರ ಪರಿಷ್ಕರಣೆಯ ಕಾರಣದಿಂದಾಗಿ ಕಪ್ಪುಹಣದ ಚಲಾವಣೆಯ ಮೇಲೆ ನಿಯಂತ್ರಣ ಹೇರಲು ಸಾಧ್ಯವಾಗುತ್ತದೆ, ಸರ್ಕಾರದ ವರಮಾನ ಹೆಚ್ಚಾಗುತ್ತದೆ ಹಾಗೂ ವಹಿವಾಟುಗಳಲ್ಲಿ ಒಂದಿಷ್ಟು ಪಾರದರ್ಶಕತೆ ಬರುತ್ತದೆ.

ದಿನದ ಟ್ವೀಟ್

ಸಂತೋಷದ ಮೂಲ



ಹೆಣ್ಣುಮಕ್ಕಳೇ ಒಂದು ಕುಟುಂಬದ ಆಧಾರಸ್ತಂಭ. ಮನೆಯ ಸಂತೋಷ ಹಾಗೂ ಆನಂದದ ಮೂಲವೇ ಅವರಾಗಿದ್ದು, ನಮ್ಮ ಜೀವನವನ್ನು ಸುಂದರವಾಗಿಸುತ್ತಾರೆ. ಮೂವರು ಪುತ್ರಿಯರ ಹೆಮ್ಮೆಯ ತಂದೆಯಾಗಿ, ಹೆಣ್ಣುಮಕ್ಕಳ ದಿನಾಚರಣೆಯ ಈ ಸಂದರ್ಭದಲ್ಲಿ (ಸೆ. 24), ಎಲ್ಲ ಹೆಣ್ಣುಮಕ್ಕಳಿಗೂ ಶುಭ ಕೋರುತ್ತೇನೆ.

ಪ್ರಲ್ಹಾದ ಜೋಶಿ, ಕೇಂದ್ರ ಸಂಸದೀಯ ವ್ಯವಹಾರ ಸಚಿವ

ಕಿಡಿನುಡಿ



ಕರ್ನಾಟಕದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರದ ಯಶಸ್ಸು ಕಂಡು ಬಿಜೆಪಿ ಹಾಗೂ ಇತರ ಪ್ರಾದೇಶಿಕ ಪಕ್ಷಗಳು ವಿಚಲಿತವಾಗಿವೆ. ಕೆಲವು ಮಾಧ್ಯಮಗಳನ್ನು ಬಳಸಿಕೊಂಡು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹುದ್ದೆಗಳ ವಿಚಾರದಲ್ಲಿ ಗೊಂದಲ ಸೃಷ್ಟಿಸಲು ಯತ್ನಿಸುತ್ತಿವೆ.

ಕೆ.ಸಿ.ವೇಣುಗೋಪಾಲ್, ಎಐಸಿಸಿ ಪ್ರಧಾನ ಕಾರ್ಯದರ್ಶಿ

25 ವರ್ಷಗಳ ಹಿಂದೆ

ಶುಕ್ರವಾರ, 25-9-1998

- **ಸಿ.ಟಿ.ಬಿ.ಟಿ.: ಆತಂಕ ದೂರ ಆದರೆ ಸಹಿ–ವಾಜಪೇಯಿ**

ವಿಶ್ವಸಂಸ್ಥೆ, ಸೆ. 24 (ಪಿಟಿಐ)– ಸಮಗ್ರ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದಕ್ಕೆ (ಸಿಟಿಬಿಟಿ) 1999ರ ಸೆಪ್ಟೆಂಬರ್ ಗಡುವಿಗೆ ಮುನ್ನ ಸಹಿ ಹಾಕಲು ಭಾರತ ಸಿದ್ಧ. ಆದರೆ ಅದಕ್ಕೆ ಮೊದಲು ಭಾರತದ ವಿರುದ್ಧ ವಿಧಿಸಿರುವ ದಿಗ್ಬಂಧನಗಳನ್ನು ರದ್ದು ಮಾಡಬೇಕು ಹಾಗೂ ದೇಶದ ಇತರ ಆತಂಕಗಳನ್ನು ದೂರ ಮಾಡಬೇಕು ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಇಲ್ಲಿ ಘೋಷಿಸಿದರು.

ವಿಶ್ವಸಂಸ್ಥೆಯ 53ನೇ ಮಹಾಧಿವೇಶನವನ್ನು ಉದ್ದೇಶಿಸಿ ಅವರು ಮಾತನಾಡಿದರು.

- **ಆಕ್ಟ್ರಾಯ್ ಅಧ್ಯಯನಕ್ಕೆ ಅಧಿಕಾರಿಗಳ ಸಮಿತಿ**

ಬೆಂಗಳೂರು, ಸೆ. 24– ರಾಜ್ಯದಲ್ಲಿ ಮತ್ತೆ ಆಕ್ಟ್ರಾಯ್ ಪದ್ಧತಿ ಜಾರಿಗೊಳಿಸುವ ಬಗ್ಗೆ ಅಥವಾ ಹಾಲಿ ಜಾರಿಯಲ್ಲಿರುವ ಪ್ರವೇಶ ತೆರಿಗೆ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಕುರಿತು ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸರ್ಕಾರ ಹಿರಿಯ ಅಧಿಕಾರಿಗಳ ಸಮಿತಿ ರಚಿಸಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಬಿ.ಕೆ. ಭಟ್ಟಾಚಾರ್ಯ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಈ ಸಮಿತಿಯಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎನ್.ಎ. ಮುತ್ತಣ್ಣ, ಹಣಕಾಸು ಇಲಾಖೆ ಪ್ರಧಾನ ಕಾರ್ಯದರ್ಶಿ ಸಿ.ಗೋಪಾಲ ರೆಡ್ಡಿ ಹಾಗೂ ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿಯವರು ಸದಸ್ಯರಾಗಿದ್ದಾರೆ.

ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಇಂದು ಇಲ್ಲಿ ನಡೆದ ನಗರಾಭಿವೃದ್ಧಿ ಮತ್ತು ಪೌರಾಡಳಿತ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು ಎಂದು ನಗರಾಭಿವೃದ್ಧಿ ಸಚಿವ ಬಿ.ಎನ್.ಬಚ್ಚೇಗೌಡ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 25-9-1973

- **ಏರಿಸಿದ ಭತ್ತದ ಎತ್ತುವಳಿ ದರ 3 ವರ್ಷಕಾಲ ಏನೇ ಆಗಲಿ ಸ್ಥಿರ**

ಬೆಂಗಳೂರು, ಸೆ. 24– ರಾಜ್ಯ ಸರ್ಕಾರದ ಅವಿಶ್ರಾಂತ ಶ್ರಮದ ಫಲವಾಗಿ ಇದೀಗ ಕೇಂದ್ರದ ಮುಂದೆ ಒಪ್ಪಿಗೆಯ ಹಂತದಲ್ಲಿರುವ ಭತ್ತದ ಎತ್ತುವಳಿಯ ಏರಿಸಿದ ದರವು, ‘ಮುಂದಿನ ಮೂರು ವರ್ಷಗಳವರೆಗೆ, ಯಾವ ಪ್ರಸಂಗದಲ್ಲೇ ಆಗಲಿ ಕೆಳಗಿಳಿಯದು’ ಎಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ರಾಜ್ಯದ ರೈತರಿಗೆ ಆಶ್ವಾಸನೆ ನೀಡಿದರು.

ಬೆಳೆಯು ಚೆನ್ನಾಗಿದ್ದ ವರ್ಷಗಳಲ್ಲಿ ರೈತರಿಗೆ ನ್ಯಾಯವಾದ ಕೊಳ್ಳುವ ಬೆಲೆಯನ್ನು ಇದುವರೆಗೆ ಕೊಟ್ಟಿರಲಿಲ್ಲ. ಅಭಾವ ಬಂದಾಗ ಮಾತ್ರ ಸರ್ಕಾರ ಹೆಚ್ಚಿಸಿದ ಬೆಲೆಯೊಂದಿಗೆ, ರೈತರಿಂದ ಭತ್ತ ಕೊಳ್ಳಲು ಹೋಗುತ್ತಿತ್ತು. ಇದರಿಂದಾಗಿ ರೈತರಿಗೂ ಅತೃಪ್ತಿಯಿದೆ. ಆದರೆ ಇನ್ನು ಮುಂದೆ ಆ ರೀತಿ ಆಗದು ಎಂದು ಮುಖ್ಯಮಂತ್ರಿಯವರು ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.

- **ಬಿ.ಟಿ.ಎಸ್. ಬಸ್, ಖಾಸಗಿ ವ್ಯಾನ್ ಬೆಂಕಿಗೆ ಆಹುತಿ**

ಬೆಂಗಳೂರು, ಸೆ. 24– ಹತ್ತು ದಿನಗಳ ರಜಾದ ನಂತರ ಕಾಲೇಜುಗಳು ಇಂದು ಪುನರಾರಂಭ ಆದಾಗ, ವಿದ್ಯಾರ್ಥಿ ಚಳವಳಿಯ ಹಿಂಸಾಕೃತ್ಯಗಳು ಮರುಕಳಿಸಿದ ಪರಿಣಾಮವಾಗಿ ಒಂದು ಬಿ.ಟಿ.ಎಸ್. ಬಸ್ ಮತ್ತು ಖಾಸಗಿ ವ್ಯಾನೊಂದು ಬೆಂಕಿಗೆ ಆಹುತಿಯಾದವಲ್ಲದೆ, ಕಲ್ಲು ತೂರಾಟದಿಂದ ಇತರ ಕೆಲವು ವಾಹನಗಳಿಗೂ ಹಾನಿಯಾಯಿತು.

ದುಷ್ಟಶಕ್ತಿಗಳಿಂದಾದ ಹಿಂಸಾಕೃತ್ಯ-ಖಂಡನೆ: ವಿದ್ಯಾರ್ಥಿ ಚಳವಳಿ ಹೆಸರಿನಲ್ಲಿ ದುಷ್ಟಶಕ್ತಿಗಳು ಹಿಂಸಾಕೃತ್ಯಗಳನ್ನು ನಡೆಸಿವೆ ಎಂದು ಆಪಾದಿಸಿ, ಇಂದು ನಗರದಲ್ಲಿ ನಡೆದ ಘಟನೆ ಬಗ್ಗೆ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿವಿಧ ಸಮಿತಿಗಳು ಪ್ರತಿಕ್ರಿಯೆ ವ್ಯಕ್ತಪಡಿಸಿವೆ.

ಮನವು ವನವಾದಾಗ ಹುಟ್ಟುವ ವಿಸ್ಮಯದ ಅರಿವು ಅನುಭವಿಸುವೆಡೆಗೆ ನಮ್ಮ ಪಯಣವಿರಲಿ

ನಾಡುಳಿಯುವ ದಾರಿ ಕಾಡಿನಲ್ಲಿದೆ



ವಿಶ್ಲೇಷಣೆ

ಸಬಿತಾ ಬನ್ನಾಡಿ

‘**ನಿತ್ಯಹರಿದ್ವರ್ಣ,** ಅರೆ ನಿತ್ಯಹರಿದ್ವರ್ಣ, ಪೂರ್ತಿ ಎಲೆ ಉದುರಿಸುವ ಮರಗಳು ಹೀಗೆ ನಾನು ಗಿಡಗಳನ್ನು ಪ್ರತ್ಯೇಕಿಸಿ ನೆಡಿಸಿದ್ದೆ. ಆದರೆ ಬೆಳಿತಾ ಬೆಳಿತಾ ಅವು ಇಂಟರ್‌ಕಾಸ್ಟ್ ಮದುವೆ ಮಾಡಿಕೊಂಡು ಅಲ್ಲಿಯದು ಇಲ್ಲಿ, ಇಲ್ಲಿಯದು ಅಲ್ಲಿ ಒಂದರೊಳಗೊಂದು ಬೆರೆತು ಹುಟ್ಟಿ ದಟ್ಟವಾದುವು’ ಎಂದು ತಾವು ಹುಟ್ಟುಹಾಕಿದ ಕಾಡನ್ನು ತೋರಿಸುತ್ತಾ ‘ಹಸಿರುಹಾದಿ’ಯ ತಜ್ಞ ಅ.ನ.ಯಲ್ಲಪ್ಪ ರೆಡ್ಡಿಯವರು ವಿವರಿಸುತ್ತಿದ್ದರು.

ಬೆರೆತು ಬಾಳುವುದೇ ಪ್ರಕೃತಿ ಎನ್ನುವುದನ್ನು ಅವು ಸಾಬೀತು ಮಾಡಿದ್ದುವು. ಆದರೆ ಹುಲುಮಾನವರಾದ ನಾವು ಎಲ್ಲವನ್ನೂ ಬಹಳ ಶಿಸ್ತಾಗಿ ಪ್ರತ್ಯೇಕಿಸಿ ಬೇಲಿ ಹಾಕಿ, ಕಾಂಪೌಂಡ್ ಕಟ್ಟಿ ಕುಬ್ಜಗೊಳಿಸಿ ‘ಚಂದ’ ನೋಡುತ್ತಿರುತ್ತೇವೆ. ಬದುಕಿನ ಪ್ರತಿ ಹಂತದಲ್ಲೂ ಇಂತಹ ಹತ್ತು ಹಲವು ಗಡಿಗೆರೆಗಳನ್ನು ಹಾಕುವುದಕ್ಕೆ ಮತ್ತು ಅವುಗಳನ್ನು ಕಾಪಿಡುವುದಕ್ಕೇ ನಮ್ಮ ಅರೆವಾಸಿ ಚೈತನ್ಯವನ್ನು ವ್ಯಯ ಮಾಡುತ್ತಾ ಆಯಾಸಗೊಳ್ಳುತ್ತಿದ್ದೇವೆ. ‘ಗಂಧರ್ವರ ಸೀಮೆಯಾಯಿತು ಕಾಡಿನಾ ನಾಡು’ ಎನ್ನುವ ಬೇಂದ್ರೆಯವರ ಸಾಲಿನ ಅರ್ಥ ಇನ್ನೂ ನಮಗೆ ಗೊತ್ತೇ ಆಗಿಲ್ಲ. ಯಾಕೆಂದರೆ ನಾಡೊಳಗೆ ಮತ್ತು ನಮ್ಮೊಳಗೆ ನಾವು ಕಾಡನ್ನು ಕಾಪಿಟ್ಟುಕೊಂಡಿಲ್ಲ.


ದಿನದಿನವೂ ವಿಸ್ತರಿಸಿಕೊಳ್ಳುತ್ತಿರುವ ನಮ್ಮ ಭೌತಿಕ ಪ್ರಪಂಚದ ಪ್ರಪಾತ ಬಹಳ ಆಳವಾದುದು ಮಾತ್ರವಲ್ಲ- ವಿಚಿತ್ರವಾದುದೂ ಹೌದು. ಯಾಕೆಂದರೆ, ನಾವೆಲ್ಲರೂ ಈ ಪ್ರಪಾತದೊಳಗೇ ಮಹಲು ಕಟ್ಟಲು ಹವಣಿಸುತ್ತಿರುವಂತೆ ನನಗೆ ಭಾಸವಾಗುತ್ತದೆ. ಹೂಡಿಕೆಯ ಹೆಸರಿನಲ್ಲಿ, ತಜ್ಞರ ವೇಷದಲ್ಲಿ, ಅಧಿಕಾರಿಗಳು, ನೌಕರರು, ಸೇವಕರ ಮುಖವಾಡದಲ್ಲಿ, ಧಾರ್ಮಿಕತೆಯ ಸೋಗಿನಲ್ಲಿ, ರಾಜಕಾರಣದ ಅಂಗಳದಲ್ಲಿ, ಎಲ್ಲೆಲ್ಲೂ ಇಂದು ಮರಗಳ್ಳರು, ಖನಿಜಗಳ್ಳರು, ಭೂಗಳ್ಳರು, ಜೂಜುಕೋರರು, ಗಾಂಜಾ ವಹಿವಾಟುದಾರರು, ದರೋಡೆಕೋರರು, ಕಳ್ಳರು, ಸುಳ್ಳರು ಎಲ್ಲರೂ ಅಧಿಕೃತತೆಯ ಮನ್ನಣೆ ಪಡೆಯುತ್ತಿದ್ದಾರೆ. ಇವರನ್ನೆಲ್ಲಾ ರಕ್ಷಿಸುವ ಅಭೇದ್ಯ, ಅನೂಹ್ಯ ಕೋಟೆಯಲ್ಲಿ, ಇದ್ಯಾವುದರ ಪರಿವೆ ಇಲ್ಲದೆ, ‘ಸುಶಿಕ್ಷಿತ, ಮಧ್ಯಮ ವರ್ಗದ ಮನಃಸ್ಥಿತಿ’ಯಲ್ಲಿ ಸುಖದ ಮುಸುಕನ್ನು ನಾವು ಹುಡುಕುತ್ತಿದ್ದೇವೆ. ಈ ‘ಜುಗಾರಿ ಕ್ರಾಸ್’ನಲ್ಲಿ ಒಂದೆಡೆ, ಕಿರಿಯರು, ಹಿರಿಯರು ಎನ್ನದೆ ಆನ್‌ಲೈನ್ ಬುಕಿಂಗ್ ಮಾಡುವ ಗ್ರಾಹಕರಾಗುತ್ತಾ ಪ್ಲಾಸ್ಟಿಕ್ ತ್ಯಾಜ್ಯ ಹೆಚ್ಚಿಸುವ ಕೊಡುಗೆಯಲ್ಲಿ ಪುಳಕಿತರಾಗುತ್ತಿರುತ್ತೇವೆ. ಇನ್ನೊಂದೆಡೆ, ಅಧಿಕಾರದ ಸವಾರಿ ಮಾಡುವುದು ಹೇಗೆ ಎಂದು ಅಸ್ವಸ್ಥರಾಗುತ್ತಿರುತ್ತೇವೆ.

ಬಹಳ ತಮಾಷೆಯೆಂದರೆ, ಇತ್ತೀಚೆಗೆ ಕೆಲವರು, ಕೋಟು ಧರಿಸುವುದೆಂದರೆ ಕಿರೀಟ ಧರಿಸಿದಂತೆ ಎಂದು ಭಾವಿಸತೊಡಗಿರುವುದು. ಯಾವುದೇ ಒಂದು ಹುದ್ದೆಗೆ ಅದು ಯಾವುದೋ ರೂಪದಲ್ಲಿ ಏರಿದವರು ತಕ್ಷಣವೇ ಕೋಟು ಧರಿಸತೊಡಗುತ್ತಾರೆ. ಹೀಗೇ ಇತ್ತೀಚೆಗೆ ಒಬ್ಬರು ಕೋಟು ಧರಿಸಿ ಪ್ರತ್ಯಕ್ಷರಾದರು. ಅವರು ಯಾರೆಂದು ತಕ್ಷಣಕ್ಕೆ ಯಾರಿಗೂ ತಿಳಿಯಲಿಲ್ಲ. ಆದರೆ ತಮ್ಮ ಕೋಟಿಗೆ ಬೆಲೆ ಕೊಡದೆ, ಎದ್ದು ನಿಲ್ಲದೆ ಇರುವವರನ್ನು ಕಂಡು ಆ ವ್ಯಕ್ತಿ ಸಿಡಿಮಿಡಿಗೊಂಡಿತು. ಹಿಂದೆ ಮುಂದೆ ವಿಚಾರಿಸದೆ ‘ನೋಟಿಸ್ ಜಾರಿ ಮಾಡುತ್ತೇನೆ’ ಎಂದು ಕಿರುಚಾಡಿತು. ತಮ್ಮ ಹುದ್ದೆಯನ್ನು ‘ಅಧಿಕಾರ’ ಎಂದು ತಪ್ಪಾಗಿ ವ್ಯಾಖ್ಯಾನಿಸಿಕೊಂಡು ಬಳಲುವ, ಬಳಲಿಸುವ ಇಂತಹವರ ಬಗೆಗೆ ಅಯ್ಯೋ ಎಂದು ಕನಿಕರಿಸಬೇಕೆನಿಸುತ್ತದೆ. ನಮ್ಮೊಳಗಿನ ಕಾಡು ನಾಶವಾಗಿ ಬರಡಾಗುತ್ತಿರುವುದರ ಲಕ್ಷಣಗಳಿವು. ಶ್ರೇಣೀಕರಣದ ವ್ಯಾಧಿ ನರನಾಡಿಯೊಳಗೆಲ್ಲಾ ಹಬ್ಬಿ ಹರಡಿ, ನಮ್ಮೆದುರು ಇರುವವರೆಲ್ಲಾ ಮನುಷ್ಯರಾಗಿ ಕಾಣಿಸದೆ ಅಧೀನ ಸ್ಥಿತಿಯಲ್ಲಿ ಇರುವವರಾಗಿ ಕಾಣಿಸುವ ಬಡತನವಿದು.

ಇತ್ತೀಚೆಗೆ ಕೋಲ್ಕತ್ತದ ಸಾಮಾನ್ಯ ರೈಲಿನಲ್ಲಿ ಒಂದು ದೃಶ್ಯ ನೋಡಿದೆ. ಬಹಳ ಚೆನ್ನಾಗಿ ಏಕತಾರಿ ನುಡಿಸುತ್ತಾ, ಹಾಡುತ್ತಾ ಬಂದ ವ್ಯಕ್ತಿಯ ಜೊತೆಗೆ ಪ್ರಯಾಣಿಕರೂ ಕೆಲವರು ತಮ್ಮ ಸ್ಟೇಟಸ್ ಮರೆತು ಚಪ್ಪಾಳೆ ಹಾಕುತ್ತಾ, ಗುನುಗುತ್ತಾ, ಸಂತೋಷಪಡುತ್ತಾ ಕೊನೆಗೆ ಅಷ್ಟಿಷ್ಟು ಹಣ ಕೊಡುವವರು ಕೊಟ್ಟರು. ಆತನನ್ನು ಭಿಕ್ಷುಕ ನೆನಿಸದೆ ತಮ್ಮೊಳಗಿನ ಒಬ್ಬ ಎಂಬಂತೆ ಪರಿಗಣಿಸಿದ್ದು ನನಗೆ ಅಪೂರ್ವವೆನಿಸಿತು. ಇಂತಹ ಭಾವಗಳನ್ನು ಬದುಕಿಸಿಕೊಳ್ಳುವುದು ಎಷ್ಟು ಸುಖಕರವಾದುದು.

ನಮ್ಮೊಳಗಿನ ವ್ಯಾಧಿಗಳನ್ನು ಗುಣಮುಖಗೊಳಿಸುವಲ್ಲಿ ಹೀಗೆ ಬೆರೆಯುವಿಕೆಯ ಬದುಕು ಮಾತ್ರವಲ್ಲ, ಕಿರಿದರಲ್ಲೂ ಹಿರಿದನ್ನು ನೋಡುವ ಕಣ್ಣು ಹೊಂದಿರಬೇಕು. ಪೂರ್ಣಚಂದ್ರ ತೇಜಸ್ವಿಯವರ ‘ಕರ್ವಾಲೊ’ ಕಾದಂಬರಿಯಲ್ಲಿ ಒಂದು ಮಾತು ಬರುತ್ತದೆ- ‘ಕ್ವಚಿತ್ತಾಗಿ ಕೇಳಿದ ಅವಳ ಪ್ರಶ್ನೆ ತಕ್ಷಣವೇ ನನ್ನ ಮನಸ್ಸಿನ ನೂರೆಂಟು ವ್ಯಾಧಿಗಳನ್ನು ಎತ್ತಿ ತೋರಿಸಿತು. ಎಂಥ ತಪ್ಪಾದ ಆಲೋಚನಾ ಲಹರಿಯಲ್ಲಿ, ತರ್ಕ ಸರಣಿಯಲ್ಲಿ ಸಿಕ್ಕಿಕೊಂಡಿದ್ದೇವೆ ಎಂದೆನಿಸಿತು. ಆ ಕೂಡಲೇ ನನ್ನ ಮನಸ್ಸು ಹೊಸ ತರ್ಕಕ್ಕೆ, ಹೊಸ ಸರಳತೆಗೆ, ಹೊಸ ವಿಸ್ತಾರಕ್ಕೆ ಪರಿವರ್ತನೆಗೊಂಡಿತು. ನನಗೆ ಸಮಸ್ಯೆಗಳು ಸ್ಪಷ್ಟವಾಗಿ, ಸರಳವಾಗಿ ಕಾಣತೊಡಗಿದವು’.

ಕರ್ವಾಲೊ ಮೂಲಕ ಪರಿಚಯವಾದ, ನೋಡಲು ಗಮಾರನಂತಿರುವ ಮಂದಣ್ಣ ಕಳ್ಳಬಟ್ಟಿ ಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡಿದ್ದು, ಅವನನ್ನು ಬಚಾವ್ ಮಾಡಲು ತಾನು ಮತ್ತು ಕರ್ವಾಲೊ ಕೋರ್ಟಿನಲ್ಲಿ ಅವನ ಪರವಾಗಿ ಸಾಕ್ಷ್ಯ ಹೇಳಬೇಕಾಗುತ್ತದೆ ಎಂಬ ವಿಚಾರದಿಂದ, ತಮ್ಮಂತಹವರು ಇಂತಹ ಪ್ರಕರಣದಲ್ಲಿ ಇವನಿಗೆ ಸಾಕ್ಷ್ಯ ಹೇಳುವುದೇ? ಕರ್ವಾಲೊ ಇಂತಹವನನ್ನು ನೆಚ್ಚಿಕೊಂಡಿದ್ದಾರಲ್ಲ ಅವರಿಗೆ ಬುದ್ಧಿ ಇದೆಯೇ? ತಾನೆಲ್ಲೋ ಯಾವುದೋ ಚಕ್ರವ್ಯೂಹದಲ್ಲಿ ಸಿಲುಕುತ್ತಿದ್ದೇನೆ, ಈ ಊರನ್ನೇ ಬಿಟ್ಟು ಹೊರಟುಬಿಡಬೇಕು ಎಂದೆಲ್ಲಾ ನಿರೂಪಕ ಚಡಪಡಿಸುತ್ತಿದ್ದಾಗ, ಹೆಂಡತಿ, ‘ಮಂದಣ್ಣ ನಿರಪರಾಧಿಯಾಗಿದ್ದರೆ ನೀವಾಗಲೀ ಕರ್ವಾಲೊ ಅವರಾಗಲೀ ಯಾಕೆ ಕೋರ್ಟಿಗೆ ಹೋಗಿ ಸಾಕ್ಷ್ಯ ಹೇಳಬಾರದು. ಅದರಲ್ಲೇನು ಅವಮಾನ?’ ಎಂದು ಕೇಳುತ್ತಾಳೆ. ಅತ್ಯಂತ ಸಾಮಾನ್ಯ ಎನಿಸಬಹುದಾದ ಈ ಪ್ರಶ್ನೆಯೊಳಗಿರುವ ಅಗಾಧತೆ ಅವರಿಗೆ ಧಿಗ್ಗನೆ ಬೆಳಕಿನಂತೆ ಗೋಚರಿಸುತ್ತದೆ. ಬಹುಶಃ ಇವು ತೇಜಸ್ವಿಯವರ ಬದುಕು ಮತ್ತು ಬರಹದ ಪಯಣದ ದಿಕ್ಕನ್ನೇ ಬದಲಿಸಿದ ಮಾತುಗಳಾಗಿರಬೇಕು ಎನಿಸುತ್ತದೆ. ಈ ಬೆಳಕೇ ನಮಗೀಗ ಪ್ರತಿಕ್ಷಣ ಬೇಕಿರುವುದು. ಹೆಂಡತಿಯ ಮಾತು ಎಂಬ ಅಲಕ್ಷ್ಯವೆಂತೋ ಅಂತೆಯೇ ಮಂದಣ್ಣನಂತಹ ಹಳ್ಳಿ ಗಮಾರರಿಗೇನು ಗೊತ್ತಿರುತ್ತದೆ ಎಂಬ ನಿರ್ಲಕ್ಷ್ಯವೂ ನಮ್ಮ ವ್ಯಾಧಿಗಳ ಮುಂದುವರಿದ ರೂಪವೇ ಆಗಿರುತ್ತದೆ. ತೇಜಸ್ವಿಯವರ ಎಲ್ಲ ಕಾದಂಬರಿಗಳ ಪಯಣವೂ ಕಾಡಿನೆಡೆಗೇ ಇರುವುದು ಈ ವ್ಯಾಧಿಯ ನಿವಾರಣೆಯ ದಾರಿಯಾಗಿಯೂ ನಮಗೆ ಕಾಣಬೇಕಿದೆ.



ಕಾಡೆಂದರೆ ಸೌಂದರ್ಯ, ಆಸರೆ, ಪರಸ್ಪರತೆ, ಮೌನ, ಉಲಿ, ಗರ್ಜನೆ, ಸಹಬಾಳ್ವೆ ಮತ್ತು ಅಂತಿಮವಾಗಿ ಸಮೃದ್ಧಿ. ಇವೆಲ್ಲವನ್ನೂ ಅಲ್ಲೇ ಇಟ್ಟು, ಬಿಟ್ಟು ಅದರೊಂದಿಗೆ ಒಡನಾಟ ಸಾಧಿಸುವುದೂ ಸಮೃದ್ಧಿಯೇ. ಆದರೆ ಇದಕ್ಕೆ ವಿರುದ್ಧ ದಾರಿಯಲ್ಲಿ ನಾಡುಗಳು ಮುನ್ನಡೆಯುತ್ತಿವೆ. ಇದರಿಂದ ಹುಟ್ಟುವ ಜಡತ್ವದ ಪರಿಣಾಮ ಏನಾಗಿರುತ್ತದೆ ಎಂಬುದರ ಸೂಚನೆಯನ್ನೂ ತೇಜಸ್ವಿಯವರು ನಮಗೀಗಾಗಲೇ ನೀಡಿ ಹೋಗಿದ್ದಾರೆ (ತೇಜಸ್ವಿಯವರು ಬದುಕಿದ್ದಿದ್ದರೆ ಇದೇ 8ರಂದು ಅವರಿಗೆ 85 ವರ್ಷ ತುಂಬಿರುತ್ತಿತ್ತು). ಉತ್ಸಾಹದ ಕುದಿಯಲ್ಲಿರುವ ಯುವ ಚೈತನ್ಯಕ್ಕೆ ಸಾಧಿಸುವ ಹಂಬಲವಿದ್ದರೂ ಅದಕ್ಕೊಂದು ದಿಕ್ಕು ದೆಸೆ ಇರುವುದಿಲ್ಲ. ‘ಪಾಪ ನಮ್ಮ ಕ್ರಾಂತಿಕಾರಿಗಳಿಗೆ ನಿಜವಾದ ಪ್ರೀತಿಯೋ! ಖೋಟಾ ಪ್ರೀತಿಯೋ ಅಂತೂ ಒಟ್ಟನಲ್ಲಿ ಅದು ತುಂಬಿ ತುಳುಕುತಿತ್ತು. ಆದರೆ ಅದಕ್ಕೆ ಅಡ್ಡಿಯಾಗಿರುವವರು ನಮ್ಮ ದೇಶದ ಸಮಾಜ, ರಾಜಕಾರಣಿಗಳು, ಅಧಿಕಾರಶಾಹಿ, ಸರ್ಕಾರ ಇತ್ಯಾದಿಗಳೆಲ್ಲಾ ಎಂಬುದು ಗೊತ್ತಿರಲಿಲ್ಲ... ತಾವು ಯಾರ, ಯಾವುದರ ವಿರುದ್ಧ ಹೋರಾಡಬೇಕು ಎಂಬುದೂ ಗೊತ್ತಿರಲಿಲ್ಲ. ‘ಪೂರ್ವಾಪರ ವಿವೇಚನೆ ಎನ್ನುವುದು ಅವರ ಶಬ್ದಕೋಶದಲ್ಲೇ ಇರಲಿಲ್ಲ’. ಹಾಗಾಗಿ ಮುನ್ನುಗ್ಗಿ ಹೊಡೆದಾಟ ಮಾಡುವುದೇ ಕ್ರಾಂತಿ ಅಂದ್ಕೋತಾರೆ’ (ಚಿದಂಬರ ರಹಸ್ಯ).

ಇದರೊಂದಿಗೆ, ‘ನಿಯಂತ್ರಿಸಲಾಗದ ಜನಬೆಂಬಲದ ಅಪಾಯಗಳು’ ಕೂಡ ಯಾವುದೇ ಸಂಘ–ಸಂಸ್ಥೆಗಳನ್ನು ಮುಳುಗಿಸುತ್ತವೆ ಎನ್ನುವ ‘ಮಾಯಾಲೋಕ’ದ ಮಾತುಗಳು ಕೂಡಾ ನಮ್ಮೊಳಗೆ ಮೊರೆಯಬೇಕು.

‘ಭೂಮಿ ಇಂದು ಬಿಸಿಯ ಮಟ್ಟ ಮೀರಿ ಕುದಿಯ ಮಟ್ಟ ತಲುಪಿದೆ’ ಎಂದು ಯಲ್ಲಪ್ಪ ರೆಡ್ಡಿಯವರು ಆತಂಕಿತರಾಗಿದ್ದರು. ನಮ್ಮ ಒಳಗೂ ಹೊರಗೂ ಕಾಡು ಬೆಳೆಯುವುದರಿಂದ ಮಾತ್ರ ಎಲ್ಲ ರೀತಿಯ ಕುದಿಗಳು ತಣಿಯಬಲ್ಲವು.

ಚುರುಮುರಿ



ಡೆಪ್ಯುಟಿ ಪಿ.ಎಂ!

• ಸುಮಂಗಲಾ

ಬೆಕ್ಕಣ್ಣ ಖುಷಿಯಿಂದ ಸಂಸತ್ ಭವನದ ಉದ್ಘಾಟನೆಯ ಫೋಟೊಗಳನ್ನು ತೋರಿಸುತ್ತ ಹೇಳಿತು, ‘ನೋಡಿಲ್ಲಿ... ಹೊಸ ಸಂಸತ್ತಿನಾಗೆ ಹೀರೋಯಿನ್‌ಗಳು ಎಷ್ಟ್ ಚಂದ ಪೋಸ್ ಕೊಟ್ಟಾರೆ’.

‘ಆದರೆ ನಮ್ ರಾಷ್ಟ್ರಪತಿಯವರಿಗೇ ಆಹ್ವಾನ ಕೊಟ್ಟರಲಿಲ್ಲವಂತೆ’ ಎಂದೆ.

‘ರಾಷ್ಟ್ರಪತಿಯವರಿದ್ದೇ ತಾನೆ ಸಂಸತ್ತು, ಮನಿಯವ್ರಿಗೆ ಆಹ್ವಾನ ಕೊಡ್ತಾರೇನು ಯಾರರೇ’ ಎಂದು ಉಡಾಫೆಯಿಂದ ಹೇಳಿದ ಬೆಕ್ಕಣ್ಣ ಮುಂದಿನ ಫೋಟೊ ತೋರಿಸಿತು. ‘ನಮ್ ಕುಮಾರಣ್ಣ ದೇಶ ಉಳಿಸಬೇಕಂತ ಹೆಂತಾ ತ್ಯಾಗ ಮಾಡಿ, ಕಮಲಕ್ಕನ ಮನಿಯವ್ರ ಜೊತೆಗೂಡ್ಯಾನೆ’ ಎಂದು ಬಾಯಿತುಂಬ ಹೊಗಳಿತು.

‘ಹೌದ್ಹೌದು, ಕುಮಾರಣ್ಣನ ಪಕ್ಷ ‘ಎಸ್’ ಅಕ್ಷರ ಬಿಸಾಕಿ, ಬರೇ ‘ಜೆಡಿ’ ಅಂತ ಶಾರ್ಟ್ ಆ್ಯಂಡ್ ಸ್ವೀಟ್ ಆಗೈತಿ’.

‘ತಪ್ಪೇನೈತಿ? ಸಂವಿಧಾನದ ಪ್ರಸ್ತಾವನೆ ಹಂಚ್ಯಾರಲ್ಲ, ಅದ್ರಾಗೇ ಸೆಕ್ಯುಲರ್ ಪದ ಕೈಬಿಟ್ಟಾರಂತೆ. ಭಾರತೀಯರ ಜೀನ್ ಒಳಗೇ ಜಾತ್ಯತೀತ ಅನ್ನೂದು ಐತಿ, ಹಿಂಗಾಗಿ ಅದನ್ನು ಪ್ರತ್ಯೇಕವಾಗಿ ಹೇಳೂ ಅಗತ್ಯನೇ ಇಲ್ಲ’.

‘ನಿಮ್ ಕುಮಾರಣ್ಣ ಕರುನಾಡಿನ ಕಮಲಕ್ಕನ ಮನಿಯವ್ರಿನ್ನ ಬಿಟ್ಟು, ಡೆಲ್ಲಿವಳಗ ದೊಡ್ಡ ಕಮಲಕ್ಕನ ಜೊತಿ ಕೈಜೋಡಿಸ್ಯಾನೆ ಅಂದ್ರ ಬ್ಯಾರೆ ಏನೋ ಮಸಲತ್ತು ಇರಬಕು’.

‘ನನಗೂ ಅದೇ ಅನುಮಾನ. ಕುಮಾರಣ್ಣ ಯಾರ ಜೊತಿ ಮೈತ್ರಿ ಮಾಡಿಕೆಂಡರೂ, ಕುರ್ಚಿ ನಂದೇ ಅನ್ನಾಂವ. ಮೋದಿಮಾಮನ ಪ್ರಧಾನಿ ಕುರ್ಚಿನೇ ಬೇಕು ಅಂದ್ರೂ ಅನ್ನಬೌದು!’

‘ಮೋದಿಮಾಮ, ಶಾಣೇ ಅಂಕಲ್ ಕುರ್ಚಿ ಅಂದ್ರೆ ಅದೇನ್ ಮ್ಯೂಸಿಕಲ್ ಚೇರ್ ಏನು?’

‘ಹಂಗಾರೆ ಡೆಪ್ಯುಟಿ ಪಿಎಂ ಕುರ್ಚಿ ರೆಡಿ ಮಾಡ್ರಿ ನನಗ ಅಂತಾನೆ ನಮ್ ಕುಮಾರಣ್ಣ!’

‘ಕೈಪಕ್ಷದೊಳಗೂ ಇನ್ನಾ ಮೂವರು ಡಿಸಿಎಂ ಮಾಡ್ರಿ ಅಂತ ಮುಸುಕಿನ ಗುದ್ದಾಟ ನಡೆದೈತಲ್ಲ’.

‘ಕೈಪಕ್ಷದವರು ಗ್ಯಾರಂಟಿ ಬಲದ ಮೇಲೆ ಹೆಂಗೋ ದಿನ ತಳ್ಳುತಾ ಇದ್ದರು... ಈಗ ಡಿಸಿಎಂ ಕುರ್ಚಿ ಗುದ್ದಾಟಗಳ ಜೊತಿಗಿ ಕಾವೇರಿ ಜ್ವರನೂ ಶುರುವಾಗೈತಿ. ಛೇ... ಪಾಪ’ ಬೆಕ್ಕಣ್ಣ ಲೊಚಗುಟ್ಟಿತು.

ಸಂಗತ

ಸರಕು, ಖರೀದಿ ಮತ್ತು ಹಕ್ಕು

ವ್ಯಾಪಾರಿ– ಬಳಕೆದಾರ ಸಂಬಂಧದ ಯಶಸ್ಸು ಇಬ್ಬರಿಗೂ ಹಿತಕರ

• ಬಿ.ಎಸ್.ಭಗವಾನ್

‘**ಪಾರ್ಸಲ್**’ ಎಂದು ಹೇಳಿ ಒಂದು ಎಳನೀರು ಖರೀದಿಸಿದ್ದೆ. ಬೈಕಿಗೆ ಲಗತ್ತಿಸಲು ಸಾಧ್ಯವಾಗುವಂತೆ ನಾರಿನ ಕುಣಿಕೆಯಿರಲಿ ಅಂದೆ. ಅದಕ್ಕೆ ಆ ವ್ಯಾಪಾರಿ, ಜೋಡಿ ಎಳನೀರು ಕೊಂಡರೆ ಮಾತ್ರ ಕುಣಿಕೆ ಎಂದವನೆ ಮತ್ತೊಬ್ಬ ಗಿರಾಕಿಯತ್ತ ಗಮನ ಹರಿಸಿದ್ದ! ವ್ಯಾಪಾರಿಗಳು ತಮ್ಮಲ್ಲಿಗೆ ಬರುವ ಬಳಕೆದಾರರನ್ನು ಇಂದ್ರ, ಚಂದ್ರರಂತೆ ಪರಿಗಣಿಸುವುದು ಬೇಡ, ಸ್ನೇಹಿತರಂತೆ ಕಂಡರೆ ಸಾಕು. ಬಂದವರು ಎಷ್ಟು ಮೊತ್ತದ ಮಾಲು ಖರೀದಿಸುತ್ತಾರೆ, ತಮಗೆ ಅವರ ವಹಿವಾಟಿನಿಂದ ಬರುವ ಲಾಭವೆಷ್ಟು ಎನ್ನುವುದೇ ವ್ಯಾಪಾರಿಗಳಿಗೆ ಮುಖ್ಯವಾಗಬಾರದು.


ಗ್ರಾಹಕನೇ ವಹಿವಾಟಿನ ದೊರೆ ಎನ್ನುವುದು ಅರ್ಥಶಾಸ್ತ್ರದ ಮೊದಲ ಪಾಠ. ಬಳಕೆದಾರರು ಮಾರುಕಟ್ಟೆಯಲ್ಲಿ ವಸ್ತು ವೈವಿಧ್ಯಗಳೊಂದಿಗೆ ಹಕ್ಕುಗಳನ್ನೂ ಕೊಳ್ಳುತ್ತಾರೆ. ಕೊಳ್ಳುವ ಸರಕಿನ ಗುಣಮಟ್ಟ, ಪ್ರಮಾಣ, ಸಾಮರ್ಥ್ಯ, ತಾಜಾತನ, ಬೆಲೆ ಇವೆಲ್ಲವೂ ಅವರಿಗೆ ಅಹುದಹುದು ಎನ್ನುವಂತಿರಬೇಕು. ಈಚೀಚೆಗೆ ವ್ಯಾಪಾರಿ ದೃಷ್ಟಿಯದೇ ಮೇಲುಗೈಯಾಗುತ್ತಿದೆ. ಬಳಕೆದಾರನೇ ಲಾಭ ತರುವ ಸರಕಾಗಿದ್ದಾನೆ!

ಪದಾರ್ಥಗಳ ಗುಣಮಟ್ಟ ಬರುಬರುತ್ತ ಅಧೋಗತಿಗಿಳಿಯುತ್ತಿದೆ. ಟೂತ್‌ಪೇಸ್ಟ್ ಟ್ಯೂಬಿನಲ್ಲಿ ಗಾಳಿಯದೇ ಕಾರುಬಾರು! ಕೊಂಡ ನಂತರವೂ ಹಣ್ಣುಗಳಲ್ಲಿ ಉತ್ತಮವಾದವನ್ನು ಆರಿಸಿಕೊಳ್ಳಬೇಕು. ಅಂಗಡಿ, ಮಳಿಗೆಯಲ್ಲಿ ಯಾವುದೇ ಪದಾರ್ಥ ಕೊಳ್ಳಲು ಮುಂದಾದರೆ, ಬಹುತೇಕ ‘ಚಿಲ್ಲರೆ ಸರಿಯಾಗಿ ಕೊಡಿ’ ಎನ್ನುವ ತಾಕೀತು. ವ್ಯಾಪಾರಿಗಳಿಗೆ ಮಾತ್ರ ಚಿಲ್ಲರೆಗೆ ಬರವೇ? ಅದು ಗ್ರಾಹಕರಿಗೆ ಇರದೇ? ಹಾಗೆ ನೋಡಿದರೆ ಚಿಲ್ಲರೆ ಇಟ್ಟುಕೊಳ್ಳುವಲ್ಲಿ ಸಾವಿರಾರು ರೂಪಾಯಿಗಳ ವಹಿವಾಟು ನಡೆಸುವ ವ್ಯಾಪಾರಿಗಳು ಒಂದು ಹೆಜ್ಜೆ ಮುಂದಿರಬೇಕು. ಕೊಳ್ಳುವವರು ನಾಣ್ಯಗಳ ಚೀಲದೊಂದಿಗೆ ಮಾರುಕಟ್ಟೆಗೆ ಬರುವರೆಂಬ ನಿರೀಕ್ಷೆಯೇ?

ಅಮೆರಿಕದಲ್ಲಿ, ಸಿಂಗಪುರ, ದುಬೈನಂತಹ ಕಡೆ ಟ್ಯಾಕ್ಸಿಯವ, ಟಾಕೀಸು ಅಥವಾ ಮಾಲ್‌ನ ಸಿಬ್ಬಂದಿ ಕೊನೆಯ ಸೆಂಟ್ ತನಕ ಗ್ರಾಹಕರಿಗೆ ಚಿಲ್ಲರೆ ಮರಳಿಸುತ್ತಾರೆ. ನಮ್ಮಲ್ಲೂ ಇಂಥ ನಿಯತ್ತು, ನಿಖರತೆಯ ವ್ಯವಸ್ಥೆಯಿರಲು ಏನಡ್ಡಿ? ನೋಡಿ, ಇಷ್ಟು ಚಿಲ್ಲರೆ ಉಳಿದಿದೆ, ಬೇರೆ ಏನಾದರೂ ಖರೀದಿಸಿಬಿಡಿ ಎನ್ನುವ ಪುಕ್ಕಟೆ ಸಲಹೆ ಬಳಕೆದಾರನಿಗೆ ಸಂದಿರುತ್ತದೆ. ಪಾದರಕ್ಷೆಗಳ ಬೆಲೆಯೋ ಬರೀ ‘499’, ‘999’. ಕಾಫಿಪುಡಿಯೊಂದಿಗೆ ಸಕ್ಕರೆ, ಉದ್ದಿನ ಬೇಳೆಯೊಂದಿಗೆ ಅಕ್ಕಿ, ಶರ್ಟ್‌ನೊಂದಿಗೆ ಎರಡು ಡಜನ್ ಗುಂಡಿ... ಹೀಗೆ ಉಚಿತವಾಗಿ ಕೊಡುವ ಅಗತ್ಯವೇನಿರದು. ಆಯಾ ಪದಾರ್ಥದ ಗುಣಮಟ್ಟ ಚೆನ್ನಾಗಿದ್ದರೆ ಬಳಕೆದಾರರಿಗೆ ಮುಗಿಬಿದ್ದು ಖರೀದಿಸಲು ಅಷ್ಟೇ ಸಾಕು. ಅವಧಿ ಮುಗಿದ ಅಥವಾ ದೋಷಪೂರಿತ ಸರಕುಗಳಿಗೆ ವಿಶೇಷ ರಿಯಾಯಿತಿ ಕೊಟ್ಟು ಗ್ರಾಹಕರ ಕಣ್ಣಪ್ಪಿಸುವುದು ಒಂದು ಬಗೆಯಾದರೆ, ತುಂಬಿಸಿದ ಪ್ಯಾಕೆಟ್ಟುಗಳಲ್ಲಿ ಕಡಿಮೆ ತೂಕದ ಸರಕು ಇರಿಸುವುದು ಇನ್ನೊಂದು ಬಗೆ. ತಂಗಳು ಪಫ್, ಬನ್, ಬಿಸ್ಕತ್ ಮೈಕ್ರೊ ಓವನ್ನೇರಿ ಬಿಸಿ ಬಿಸಿ ತಾಜಾ ಎನ್ನುವಂತೆ ಗಿರಾಕಿಯ ಕೈ ತಲುಪಿರುತ್ತವೆ! ನಿಸ್ಸಂದೇಹವಾಗಿ ಇವಕ್ಕೆಲ್ಲ ಅಪವಾದಗಳಿವೆ. ಎಲ್ಲೇ ಇದ್ದರೂ ಹುಡುಕಿಕೊಂಡು ಹೋಗಿ ಕೊಳ್ಳೋಣ ಅನ್ನಿಸುವ ಮುಂಗಟ್ಟುಗಳು ಉಂಟು. ಅಂತಹವು ಹೆಚ್ಚಾಗಬೇಕೆನ್ನುವುದೇ ಆಶಯ.

ವಿಮಾನಗಳಲ್ಲೂ ಈಗ ಹಿಂದಿನಂತೆ ಗ್ರಾಹಕ ಸ್ನೇಹಿ ವಾತಾವರಣ ಹೆಚ್ಚಾಗಿ ಕಂಡುಬರುತ್ತಿಲ್ಲ. ಪ್ರಯಾಣಿಕರಿಗೆ ಕೊಡುವ ತಿಂಡಿ, ತಿನಿಸು, ಪಾನೀಯದಲ್ಲಿ ಗುಣಮಟ್ಟದ ಕೊರತೆ, ಪರಿಮಾಣವೂ ಕಡಿಮೆ. ಮತ್ತೆ ಮತ್ತೆ ಗೋಗರೆದರೆ ಮಾತ್ರ ನೀರು.

60-70ರ ದಶಕದಲ್ಲಿ ಬಾಡಿಗೆ ಮನೆಗೆ ಯಾವುದೇ ಕರಾರು ಪತ್ರ ಇರುತ್ತಿರಲಿಲ್ಲ. ಒಂದು ತಿಂಗಳ ಬಾಡಿಗೆ ಮುಂಗಡ ನೀಡುತ್ತಲೇ ಮಾಲೀಕರು ಕೀಲಿಕೈ ಕೊಡುತ್ತಿದ್ದರು. ಇಂದು ಮನೆ ಮಾಲೀಕರ ಪಾಲಿಗೆ ಬಾಡಿಗೆದಾರ ಬಹುತೇಕ ವೈರಿಯಂತೆ ತೋರುತ್ತಾನೆ. ಮಾಲೀಕ ಮತ್ತು ಬಾಡಿಗೆದಾರರ ನಡುವಿನ ವಿಶ್ವಾಸವನ್ನು ಹನ್ನೊಂದು ತಿಂಗಳ ಮುಂಗಡ ಬಾಡಿಗೆ ದಿಢೀರನೆ ತುಂಬಿಕೊಡಲು ಸಾಧ್ಯವೆ? ಇದು ಹಾಗಿರಲಿ, ತಮಗೇ ಮನೆ ಬೇಕು, ಒಡೆದು ಕಟ್ಟಬೇಕು, ನವೀಕರಿಸಬೇಕು ಎಂಬಂತಹ ನೆಪಗಳು, ಇರುವವರನ್ನು ಖಾಲಿ ಮಾಡಿಸಿ ಇನ್ನಷ್ಟು ಅಧಿಕ ಬಾಡಿಗೆಯ ಬೆನ್ನೇರುವ ತಂತ್ರಗಳು ತಾನೆ? ಅರಮನೆಯಾದರೂ ವರ್ಷಾಂತರದಲ್ಲಿ ಅಂದಗೆಡುವುದು, ಬಣ್ಣ ಮಂಕಾಗುವುದು, ಗೋಡೆ ಶಿಥಿಲ ಸಾಧ್ಯ, ಬಾಗಿಲು, ಅಗುಳಿ ಅಳ್ಳಕವಾಗುವುದು. ಮನೆ ಬಿಡುವಾಗ ‘ಸವಕಳಿ ವೆಚ್ಚ’ದ ಹೇರಿಕೆ ಸಮರ್ಥನೀಯವೇ?



ಅನ್ನಕ್ಕಿಷ್ಟು ಸಾಂಬಾರು, ಇಡ್ಲಿಗಿಷ್ಟು ಚಟ್ನಿ ಅಥವಾ ಪೂರಿಗಿಷ್ಟು ಸಾಗು ಎನ್ನುವ ನಿರ್ಧಾರ ಬಳಕೆದಾರನದೇ ವಿನಾ ಹೋಟೆಲ್ ಒಡೆಯನದ್ದಲ್ಲವಲ್ಲ. ಇದೆಲ್ಲಿ, ಹೇಗೆ ಕಳೆದುಹೋಯಿತು ವ್ಯಾಪಾರಿ ಮತ್ತು ಗ್ರಾಹಕರ ನಡುವಿನ ನೆಚ್ಚಿಗೆ, ಭರವಸೆ. ಇಂದು ಬಿಡಿ, ಒಲ್ಲೆನೆಂದರೂ ಮೇಜಿನ ಮೇಲೆ ನೀರಿನ ಬಾಟಲ್ಲು ಬಿಲ್ ಸೇರಲು ಪ್ರತ್ಯಕ್ಷವಾಗಿರುತ್ತದೆ!

ಜನಪದರಲ್ಲಿ ‘ಕೊಸರು’ ಎಂಬ ಗ್ರಾಹಕಸ್ನೇಹಿ ಪರಿಕಲ್ಪನೆ ಇಂದಿಗೂ ಪ್ರಚಲಿತವಿದೆ. ದವಸಧಾನ್ಯ, ಸೊಪ್ಪುಸದೆ, ಹೂವು, ಹಣ್ಣು, ತರಕಾರಿ ವಗೈರೆ ಒದಗಿಸುವಾಗ ತೂಕ, ಅಳತೆ, ಎಣಿಕೆಯಲ್ಲಿ ವ್ಯತ್ಯಯ ಆಗಬಹುದು. ತನ್ನಿಂದಾದ ಆ ಕೊರೆಗೆ ಗ್ರಾಹಕ ಗುರಿಯಾಗಬಾರದು ಎನ್ನುವುದು ವ್ಯಾಪಾರಿಯ ಕಾಳಜಿ. ಅದಕ್ಕಾಗಿ ಮೇಲೊಂದು ಹಿಡಿ ಸರಕು, ಹೆಚ್ಚಿಗೆ ನಾಲ್ಕೈದಾದರೂ ಎಣಿಕೆ. ಬಳಕೆದಾರನಲ್ಲಿ ಮನುಷ್ಯನನ್ನು ಕಾಣುವುದೆಂದರೆ ಇದೇ ಅಲ್ಲವೆ?

ವಾಚಕರ ವಾಣಿ

ಪರಿಷತ್ತಿನ ಪ್ರಕಟಣೆ: ಬೇಕು ಜಿಲ್ಲಾ ಮಳಿಗೆ

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಳನ್ನು ಜಿಲ್ಲಾ ಮಟ್ಟದಲ್ಲಿ ಮಾರಾಟ ಮಾಡುವ ವ್ಯವಸ್ಥೆ ಇಲ್ಲ. ಹೀಗಾಗಿ, ಪ್ರಕಟಿತ ಪುಸ್ತಕಗಳನ್ನು ವರ್ಷಗಳ ನಂತರ ಪರಿಷತ್ತಿಗೆ ಲುಕ್ಸಾನು ಮಾಡಿಕೊಂಡು ಬೆಂಗಳೂರಿನಲ್ಲಿ ಮಾರಾಟ ಮಾಡಲಾಗುತ್ತಿದೆ. ಇದನ್ನು ತಪ್ಪಿಸಲು, ಪರಿಷತ್ತು ಪ್ರಕಟಿಸಿದ ಪುಸ್ತಕಗಳನ್ನು ಮೂಲ ಬೆಲೆಯಲ್ಲಿ ಮಾರಾಟ ಮಾಡಲು ಜಿಲ್ಲಾ ಮಟ್ಟದಲ್ಲಿ ಮಳಿಗೆಗಳನ್ನು ತೆರೆಯಬೇಕು.

ಬಸವರಾಜ ಹುಡೇದಗಡ್ಡಿ, ಬೆಂಗಳೂರು

ವಿಶಾಲ ಮನೋಭಾವ, ಗಮನಾರ್ಹ ಹೇಳಿಕೆ

ಈ ಬಾರಿ ಮೈಸೂರು ದಸರಾ ಉದ್ಘಾಟನೆಗೆ ರಾಜ್ಯ ಸರ್ಕಾರದಿಂದ ಆಯ್ಕೆಯಾಗಿರುವ ಸಂಗೀತ ನಿರ್ದೇಶಕ ಹಂಸಲೇಖ ಅವರು ಇತ್ತೀಚೆಗೆ ನಡೆದ ಮಾಧ್ಯಮಗೋಷ್ಠಿಯಲ್ಲಿ ‘ನನಗಿಂತಲೂ ಹಿರಿಯರಾದ 92 ವರ್ಷದ ಜ್ಞಾನವೃದ್ಧರೂ ಹಿರಿಯರೂ ಶರಣ ಸಾಹಿತಿಯೂ ಆದ ಗೊ.ರು.ಚನ್ನಬಸಪ್ಪ, ಸಂಗೀತ ಸಾಧಕ ರಾಜೀವ್ ತಾರಾನಾಥ ಹಾಗೂ ಮೇರು ಸಾಹಿತಿ ದೇವನೂರ ಮಹಾದೇವ ಅವರಂತಹ ಗಣ್ಯಾತಿಗಣ್ಯರು ಇರುವಾಗ ಇಂತಹ ಮಹೋನ್ನತ ಅವಕಾಶವನ್ನು ಅವರಿಗೆ ನೀಡಿದರೆ ಒಳ್ಳೆಯದಿತ್ತು’ ಎಂದು ತಮ್ಮ ಮನದಾಳದ ಮಾತುಗಳನ್ನು ಆಡಿದ್ದಾರೆ. ಇದು ಹಂಸಲೇಖ ಅವರ ವಿಶಾಲ ಮನೋಭಾವಕ್ಕೆ ಕೈಗನ್ನಡಿ ಹಿಡಿಯುವಂತಿದೆ. ಅಲ್ಲದೆ, ಅಧಿಕಾರ, ಗೌರವ, ಪುರಸ್ಕಾರ, ಕುರ್ಚಿಗಾಗಿ ಹಪಹಪಿಸುವ ಸ್ವಾರ್ಥ ವ್ಯಕ್ತಿಗಳ ನಡುವೆ ಈ ಹೇಳಿಕೆ ಗಮನ ಸೆಳೆಯುವಂತಿದೆ.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

ತೆರೆದ ಪುಸ್ತಕ ಪರೀಕ್ಷೆಗೆ ಕಾಲ ಸನ್ನಿಹಿತ

ಒಂಬತ್ತನೇ ತರಗತಿಗೆ ಮೌಲ್ಯಾಂಕನ ಪರೀಕ್ಷೆ ಮತ್ತು ಪ್ರಥಮ ಪಿಯುಸಿಗೆ ಈವರೆಗೆ ನಡೆಯುತ್ತಿದ್ದ ಜಿಲ್ಲಾ ಮಟ್ಟದ ಪರೀಕ್ಷೆಗೆ ಬದಲಾಗಿ ‘ಬೋರ್ಡ್’ ಪರೀಕ್ಷೆ ನಡೆಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಸೆ. 24). ರಾಜ್ಯ ಮಟ್ಟದ ಪರೀಕ್ಷೆಯೆಂದಾಗ ಜಿಲ್ಲಾವಾರು ಪ್ರತಿಷ್ಠೆ ಕಾಯ್ದುಕೊಳ್ಳಲು ಆಯಾ ಜಿಲ್ಲೆಯಲ್ಲಿ ಒಳಒಪ್ಪಂದಗಳಾಗುತ್ತವೆ. ಮಕ್ಕಳು ಪಾರದರ್ಶಕವಾಗಿ ಪರೀಕ್ಷೆ ಬರೆಯಲಿ ಎಂಬ ಕಾರಣಕ್ಕೆ ಪರಿವೀಕ್ಷಕರನ್ನು ನೇಮಿಸಿದರೆ, ಪರಿವೀಕ್ಷಕರ ಪಾರದರ್ಶಕತೆಯ ಪರಿಶೀಲನೆಗೆ ಮತ್ತೊಬ್ಬ ಅಧಿಕಾರಿಯ ನೇಮಕ ಅನಿವಾರ್ಯವಾಗಿಬಿಟ್ಟಿದೆ. ಯಾರು ಯಾರನ್ನೂ ನಂಬುವ ಹಾಗಿಲ್ಲ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಇದಕ್ಕೆಲ್ಲ ಉತ್ತರವೆಂದರೆ, ನಮ್ಮ ಪರಿಸರಕ್ಕೆ ಒಗ್ಗುವಂತಹ ‘ತೆರೆದ ಪುಸ್ತಕದ ಪರೀಕ್ಷೆ’. ಇದರಿಂದ ಮಕ್ಕಳಲ್ಲಿ ಪರೀಕ್ಷೆಯ ಭಯ ಹೋಗಲಾಡಿಸಬಹುದು. ಮಕ್ಕಳನ್ನು ಅಪರಾಧಿಗಳಂತೆ ಪರಿಗಣಿಸಿ ಪರೀಕ್ಷೆಯಲ್ಲಿ ಅವರನ್ನು ಕಾಯುವ ಕಾಯಕ ಶಿಕ್ಷಕರಿಗೂ ತಪ್ಪುತ್ತದೆ ಎಂಬುದು ತಜ್ಞರ ಅಭಿಪ್ರಾಯ ಸಹ ಆಗಿದೆ. ಪರೀಕ್ಷೆಯಲ್ಲಿ ನಿಗದಿತ ಸಮಯ ಇರುವುದರಿಂದ, ಪುಸ್ತಕ ಹುಡುಕಿ ಬರೆಯುವ ವಿದ್ಯಾರ್ಥಿ ನೂರಕ್ಕೆ ನೂರರಷ್ಟು ಅಂಕ ಗಳಿಸಲು ಸಾಧ್ಯವಿಲ್ಲ. ಹೀಗಿರುವಾಗ ಈ ಒಂದು ಪ್ರಯೋಗವನ್ನು ಶಿಕ್ಷಣ ಇಲಾಖೆಯು ಪಬ್ಲಿಕ್ ಪರೀಕ್ಷೆಯಲ್ಲಿ ಜಾರಿಗೆ ತರಬಾರದೇಕೆ?

ಜಿ.ಪಳನಿಸ್ವಾಮಿ ಜಾಗೇರಿ, ಕೊಳ್ಳೇಗಾಲ

ನಮಗೀಗ ಬೇಕಿದೆ ನವೀನ ಧರ್ಮ!

‘ಧರ್ಮ’ ಎನ್ನುವ ಪದ ಕಿವಿಗೆ ಬೀಳುತ್ತಿದ್ದಂತೆಯೇ, ಇಂದು ಮನಸ್ಸಿನ ಮುನ್ನೆಲೆಗೆ ಬಂದು ನಿಲ್ಲುವುದು ‘ಜಾತಿಜಗಳ’ ಮಾತ್ರ! ಧರ್ಮ ಎನ್ನುವುದು ಜಾತಿಯಲ್ಲ. ಆಧುನಿಕ ಯುಗದಲ್ಲಿ ನಮಗೆ ಕಾಣಸಿಗುತ್ತಿರುವುದು ವಿನಾಶಕಾರಿ ರಾಕ್ಷಸೀ ಬಲದ ರಾಜಕೀಯ ಪಟ್ಟಭದ್ರರ ವಿಷದ ಹಾವುಗಳ ಜಾತಿ ಮಾತ್ರ. ಈ ನಂಜುಕೋರರ ಕೋಲಾಹಲದಲ್ಲಿ, ಧರ್ಮ ಎನ್ನುವುದಕ್ಕಿರುವ ‘ಅಧ್ಯಾತ್ಮ’ ಎಂಬ ಆಯಾಮವನ್ನೇ ನಾವಿಂದು ಮರೆತುಬಿಟ್ಟಿದ್ದೇವೆ.

ಅಧ್ಯಾತ್ಮ ಎಂದರೆ ‘ಆತ್ಮ’ದ ಅಡಿಯಲ್ಲಿ ಬರುವುದು ಎಂದರ್ಥ. ಭೌತ ಕಾಯದಲ್ಲಿ ಜೀವಂತಿಕೆಯಿದ್ದಾಗ, ಅಲ್ಲಿ ಐಚ್ಛಿಕ ಮತ್ತು ಅನೈಚ್ಛಿಕ ಕ್ರಿಯೆಗಳು ನಡೆಯುತ್ತವೆ. ಐಚ್ಛಿಕ ಕ್ರಿಯೆಗಳಲ್ಲಿ ‘ನಮ್ಮತನ’ ಎಂಬುದೂ ಇರುತ್ತಾ ಹೋಗುತ್ತದೆ. ಅದು, ‘ನಾನು’ ಮತ್ತು ‘ನಾವು’ ಎನ್ನುವ ವೈಯಕ್ತಿಕ ಮತ್ತು ಸಾಮುದಾಯಿಕ ‘ಮನಸ್ಸು’. ಮನಸ್ಸಿನಲ್ಲಿರುವುದು ಭಾವ ಮತ್ತು ಬುದ್ಧಿ. ಬುದ್ಧಿಯನ್ನು ಭಾವ ಪ್ರಚೋದಿಸುತ್ತದೆ. ಬುದ್ಧಿ, ನಮ್ಮಿಂದ ಕ್ರಿಯೆ ಮಾಡಿಸುತ್ತದೆ. ಈ ಕ್ರಿಯಾದಿಗಳಿಂದಾಗುವ ಸಂಕೀರ್ಣವೇ ಸಮಾಜ. ಬಿಡಿ ವ್ಯಕ್ತಿಗಳ ಮನಸ್ಸು ‘ಆತ್ಮ’ ಎಂದಿಟ್ಟುಕೊಂಡರೆ, ಆತ್ಮ-ಆತ್ಮಗಳ ಒಕ್ಕೂಟವೇ ‘ಪರಮಾತ್ಮ’ನೆಂಬ ಸಮಾಜವಾಗುತ್ತದೆ! ಇಲ್ಲಿ ನಾವು ಯಾರಿಗೇ ವಂಚನೆ ಮಾಡಿದರೂ ಅದರ ಪರಿಣಾಮ ನಮ್ಮ ಹಿತಾಸಕ್ತಿಯ ಮೇಲೂ ಆಗುತ್ತದೆ. ಇದು ಮನುಷ್ಯ ಧರ್ಮ. ರಾಜಕಾರಣಿಗಳೆಂಬ ಪ್ರಾಣಿಗಳಿಗೆ ಈ ಅರಿವಿರುವುದಿಲ್ಲ. ಆ ವರ್ಗಕ್ಕೆ ಸೇರಿದವರನ್ನು ಸಮಾಜದ ಆಚೆಗಿರಿಸುವ ನವೀನ ಧರ್ಮವನ್ನು ನಾವಿಂದು ಅಳವಡಿಸಿಕೊಳ್ಳಬೇಕಾಗಿದೆ!

ಆರ್.ಕೆ.ದಿವಾಕರ, ಬೆಂಗಳೂರು

ಅತಿಥಿ ಉಪನ್ಯಾಸಕರ ನೇಮಕ: ಗೊಂದಲವೇಕೆ?

ರಾಜ್ಯ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಸರ್ಕಾರಿ ಪದವಿ ಕಾಲೇಜುಗಳಲ್ಲಿ 2023- 24ನೇ ನಿಗದಿತ ಶೈಕ್ಷಣಿಕ ಅವಧಿಗೆ ಬೋಧನಾ ಕಾರ್ಯನಿರ್ವಹಿಸಲು ಅತಿಥಿ ಉಪನ್ಯಾಸಕರ ನೇಮಕ ಪ್ರಕ್ರಿಯೆ ನಡೆಯುತ್ತಿದೆ. ಪ್ರತಿ ಶೈಕ್ಷಣಿಕ ವರ್ಷದಂತೆ ಇದು ತಾತ್ಕಾಲಿಕ ನೇಮಕವಾಗಿದ್ದು, ಇದನ್ನು ಪೂರ್ಣಾವಧಿ ಉಪನ್ಯಾಸಕರಿಗೆ ಆಗಿ ಉಳಿದ ಕಾರ್ಯಭಾರಕ್ಕೆ ಮಾತ್ರ ನಿಯೋಜನೆ ಮಾಡಲಾಗುತ್ತಿದೆ. ಇದು ಕಾಯಂ ಆಗಿರುವುದಿಲ್ಲ ಎಂದು ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಅದರಂತೆ ಇದಕ್ಕೆ ಈ ಹಿಂದಿನಂತೆ ಅರ್ಹತಾ ಮಾನದಂಡವಾಗಿ ಸ್ನಾತಕೋತ್ತರ ಪದವಿ ಅಂಕಗಳು, ಕೆಸೆಟ್, ನೆಟ್, ಎಂ.ಫಿಲ್, ಪಿಎಚ್.ಡಿ. ಸೇವಾ ಹಿರಿತನವನ್ನು ನಿಗದಿಪಡಿಸುವುದರ ಜೊತೆಗೆ ಅಂಗವಿಕಲರಿಗೆ ಶೇ 10 ಹೆಚ್ಚುವರಿ ಅಂಕಗಳನ್ನು ನೀಡುವುದಾಗಿ ಇಲಾಖೆಯು ತನ್ನ ಆದೇಶದಲ್ಲಿ ಹೇಳಿತ್ತು. ಆದರೆ ಈಗ ಕಲ್ಯಾಣ ಕರ್ನಾಟಕ ಮೀಸಲಾತಿಯನ್ನು ಹೆಚ್ಚುವರಿಯಾಗಿ ನೀಡಿ ಮರು ಆದೇಶ ಹೊರಡಿಸಿದೆ. ಅದರಂತೆ ವಿವಿಧ ವಿಷಯಕ್ಕೆ ನಿಗದಿತ ದಿನಾಂಕಗಳಂದು ಸೂಕ್ತ ಅಭ್ಯರ್ಥಿಗಳು ಕೌನ್ಸೆಲಿಂಗ್‌ಗೆ ಹಾಜರಾಗುವಂತೆ ಸೂಚಿಸಿದೆ.

ಇದು ಪೂರ್ಣಾವಧಿ ನೇಮಕಾತಿ ಅಲ್ಲದಿದ್ದ ಮೇಲೆ ಶೈಕ್ಷಣಿಕ ಅರ್ಹತೆ ಹಾಗೂ ಸೇವಾ ಹಿರಿತನ ಹೊರತುಪಡಿಸಿ ಇಂತಹ ಮೀಸಲಾತಿಯ ಪ್ರಶ್ನೆಯೇ ಬರುವುದಿಲ್ಲ. ಆದರೆ ಯಾವ ಆಧಾರದಲ್ಲಿ ಈಗ ಕಲ್ಯಾಣ ಕರ್ನಾಟಕ ಮೀಸಲಾತಿಯನ್ನು ಮಾತ್ರ ವಿಶೇಷವಾಗಿ ಒದಗಿಸಿಕೊಡಲಾಗುತ್ತಿದೆ. ಇದನ್ನು ನೊಂದ ಇತರ ವರ್ಗದ ಅಭ್ಯರ್ಥಿಗಳಿಗೆ ಕಾಲೇಜು ಶಿಕ್ಷಣ ಇಲಾಖೆಯೇ ಸ್ಪಷ್ಟಪಡಿಸಬೇಕಿದೆ.

ಸಂಪತ್ ಬೆಟ್ಟಗೆರೆ, ಮೂಡಿಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನೀರಿನ ಬವಣೆ ನೀಗಲು ಬೇಕು ದೂರಗಾಮಿ ಯೋಜನೆ

ಪ್ರಜಾವಾಣಿ ವಾರ್ತೆ

ದೇಶದಲ್ಲಿ ಅತಿ ಕಡಿಮೆ ಮಳೆಯಾಗುವ ರಾಜ್ಯವೆಂದರೆ ರಾಜಸ್ಥಾನ. ರಾಜ್ಯದ ಪೂರ್ವ ಭಾಗದಲ್ಲಿ ವಾರ್ಷಿಕ ಸರಾಸರಿ 660 ಮಿಲಿಮೀಟರ್‌ನಷ್ಟು ಮಳೆಯಾದರೆ, ಪಶ್ಚಿಮ ಭಾಗದಲ್ಲಿ 315 ಮಿಲಿಮೀಟರ್‌ನಷ್ಟು ಮಳೆಯಾಗುತ್ತದೆ. ಆದರೆ, ರಾಜ್ಯದಲ್ಲಾಗುವ ಅಲ್ಪ ಮಳೆಯ ನೀರನ್ನೇ ಸಂಗ್ರಹಿಸಿಕೊಳ್ಳಲು ಮಾಡಿಕೊಂಡಿರುವ ವ್ಯವಸ್ಥೆ ಹೆಚ್ಚು ಪರಿಣಾಮಕಾರಿಯಾಗಿದೆ ಎಂದು ತಜ್ಞರು ಬಣ್ಣಿಸುತ್ತಾರೆ. ಎರಡು ಮುಖ್ಯ ನದಿಗಳು ಮತ್ತು 19 ಉಪನದಿಗಳಿಗೆ/ತೊರೆಗಳಿಗೆ ನಿರ್ಮಿಸಲಾಗಿರುವ ಕಿರು ಜಲಾಶಯಗಳು ಮತ್ತು ಚೆಕ್‌ಡ್ಯಾಂಗಳಲ್ಲಿ ರಾಜಸ್ಥಾನವು 445 ಟಿಎಂಸಿ ಅಡಿಗಿಂತಲೂ ಹೆಚ್ಚು ನೀರನ್ನು ಸಂಗ್ರಹಿಸುತ್ತದೆ. ಇದು ದಕ್ಷಿಣ ಭಾರತದ, ಅತಿಹೆಚ್ಚು ಮಳೆಯಾಗುವ ಕೆಲ ರಾಜ್ಯಗಳಲ್ಲಿನ ನೀರು ಸಂಗ್ರಹ ಸಾಮರ್ಥ್ಯಕ್ಕಿಂತಲೂ ಹೆಚ್ಚು.


ರಾಜಸ್ಥಾನದ ಅತಿಮುಖ್ಯ ನದಿ ಚಂಬಲ್. ಮಧ್ಯಪ್ರದೇಶದ ವಿಂಧ್ಯಪರ್ವತದಲ್ಲಿ ಹುಟ್ಟಿ ಉತ್ತರಕ್ಕೆ ಹರಿಯುವ ಚಂಬಲ್ ನಂತರ ರಾಜಸ್ಥಾನ ಪ್ರವೇಶಿಸುತ್ತದೆ. ರಾಜಸ್ಥಾನದಲ್ಲಿ 261 ಕಿ.ಮೀ. ಹರಿಯುವ ಈ ನದಿಗೆ ಪಾರ್ವತಿ, ಕಾಲಿಸಿಂಧಿ ಮತ್ತು ಬನಾಸ್ ಉಪನದಿಗಳು ಜತೆಯಾಗುತ್ತವೆ. ಚಂಬಲ್ ಜಲಾನಯನ ಪ್ರದೇಶ ಮತ್ತು ಅಚ್ಚುಕಟ್ಟು ಪ್ರದೇಶಕ್ಕೆ ಅವಶ್ಯಕತೆ ಇರುವುದಕ್ಕಿಂತ ಹಲವು ಪಟ್ಟು ಹೆಚ್ಚು ನೀರು ಈ ನದಿಗಳಲ್ಲಿ ಹರಿಯುತ್ತದೆ. ರಾಜ್ಯದ ಪೂರ್ವ ಭಾಗದಲ್ಲಿ ಈ ಸ್ಥಿತಿಯಿದ್ದರೆ, ಪಶ್ಚಿಮ ಭಾಗದಲ್ಲಿ ನೀರೇ ಇಲ್ಲ ಎನ್ನುವಂತಹ ಸ್ಥಿತಿ ಇತ್ತು. ಪೂರ್ವದ ಚಂಬಲ್ ಪ್ರದೇಶದಲ್ಲಿನ ಹೆಚ್ಚುವರಿ ನೀರನ್ನು ಸಂಗ್ರಹಿಸಿ ಕೆರೆಗಳಿಗೆ, ರಾಜ್ಯದ ಬೇರೆ ಭಾಗಗಳಿಗೆ ಹರಿಸುವ ಯೋಜನೆ 1970ರ ದಶಕದಲ್ಲಿ ಆರಂಭವಾಯಿತು. ಚಂಬಲ್ ಕಣಿವೆಗೆ ರಾಜಸ್ಥಾನದಲ್ಲಿ ನಾಲ್ಕು ದೊಡ್ಡ ಅಣೆಕಟ್ಟೆಗಳನ್ನು ಕಟ್ಟಲಾಯಿತು. ಆದರೆ ಕೋಟಾ ಬಳಿ ಚಂಬಲ್ ಕೋಟಾ ಅಭಯಾರಣ್ಯ ಸ್ಥಾಪಿಸಿದ ಕಾರಣ ಮತ್ತಷ್ಟು ದೊಡ್ಡ ಜಲಾಶಯಗಳನ್ನು ನಿರ್ಮಿಸಲು ಸಾಧ್ಯವಾಗಲಿಲ್ಲ. ಆಗ ರಾಜಸ್ಥಾನ ಸರ್ಕಾರ ಕಂಡುಕೊಂಡ ಪರಿಹಾರವೇ ಕಿರು ಜಲಾಶಯಗಳು ಮತ್ತು ಚೆಕ್‌ಡ್ಯಾಂನ ನಿರ್ಮಾಣ.

ಚಂಬಲ್ ನದಿಗೆ ಸಾಧ್ಯವಿರುವೆಡೆ ಸಣ್ಣ ಸಣ್ಣ ಜಲಾಶಯಗಳನ್ನು ನಿರ್ಮಿಸಲಾಯಿತು. ಆದರೆ ಅಲ್ಲಿ ಹರಿಯುವ ಅಷ್ಟೂ ನೀರನ್ನು ಸಂಗ್ರಹಿಸಲು ಆ ಕಿರು ಜಲಾಶಯಗಳು ಸಾಲದೇ ಹೋದವು. ಹೀಗಾಗಿ ಉಪನದಿಗಳಿಗೆ ಕಿರುಜಲಾಶಯಗಳನ್ನು ನಿರ್ಮಿಸುವ ಮೂಲಕ ಚಂಬಲ್ ನದಿಗೆ ನೀರಿನ ಹರಿವನ್ನು ಕಡಿಮೆ ಮಾಡಲು ಸರ್ಕಾರ ಮುಂದಾಯಿತು. ಇದಕ್ಕಾಗಿ ಪಾರ್ವತಿ, ಕಾಲಿಸಿಂಧಿ, ಬನಾಸ್ ಮತ್ತು ಲೂನಿ ನದಿಗಳಿಗೆ ನೂರಾರು ಕಿರು ಜಲಾಶಯಗಳನ್ನು ನಿರ್ಮಿಸುವ ಯೋಜನೆ ಹಾಕಿಕೊಳ್ಳಲಾಯಿತು. ಕೇವಲ 20–30 ಅಡಿ ಎತ್ತರದ ಅಣೆಕಟ್ಟೆಗಳನ್ನು ನಿರ್ಮಿಸಿದವು. ಈ ಅಣೆಕಟ್ಟೆಗಳ ಹಿನ್ನೀರು, ನದಿ ಪಾತ್ರದಲ್ಲಿಯೇ ಕಿರು ಜಲಾಶಯಗಳನ್ನು ನಿರ್ಮಿಸಲಾಯಿತು. ಈ ರೀತಿಯ ನಿರ್ಮಾಣದಿಂದ ಮುಳುಗಡೆಯ ಸಮಸ್ಯೆಯೂ ತಲೆದೋರಲಿಲ್ಲ. ಹೀಗೆ ಐದು ದಶಕಗಳಲ್ಲಿ ಒಟ್ಟು 719 ದೊಡ್ಡ ಮತ್ತು ಕಿರು ಜಲಾಶಯಗಳನ್ನು ನಿರ್ಮಿಸಲಾಗಿದೆ. ನದಿ ಪಾತ್ರದುದ್ದಕ್ಕೂ ನಾಲ್ಕೈದು ಕಿ.ಮೀ.ಗೆ ಒಂದರಂತೆ ಇಂತಹ ಕಿರುಜಲಾಶಯಗಳನ್ನು ನಿರ್ಮಿಸಲಾಗಿದೆ. ಈ ಎಲ್ಲಾ ಜಲಾಶಯಗಳಲ್ಲಿ 445 ಟಿಎಂಸಿ ಅಡಿಗಳಷ್ಟು ನೀರು ಸಂಗ್ರಹವಾಗುತ್ತದೆ. ಈ ಎಲ್ಲಾ ಜಲಾಶಯಗಳು ಶೇ 60ರಷ್ಟು ಭರ್ತಿಯಾದರೂ ರಾಜ್ಯದ ಕುಡಿಯುವ ನೀರು, ಕೃಷಿ ಮತ್ತು ಕೈಗಾರಿಕೆಗಳಿಗೆ ಅವಶ್ಯಕತೆ ಇರುವಷ್ಟು ನೀರು ಲಭ್ಯವಾಗುತ್ತದೆ.

ಆದರೆ, ಈ ಎಲ್ಲಾ ಜಲಾಶಯಗಳು ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗುವುದೇ ಇಲ್ಲ. ಏಕೆಂದರೆ ಅವುಗಳಲ್ಲಿ ನಿಗದಿತ ಮಟ್ಟದ ನೀರು ಸಂಗ್ರಹವಾಗುತ್ತಿದ್ದಂತೆಯೇ ಕಾಲುವೆಗಳ ಮೂಲಕ ಸಮೀಪದ ಕೆರೆಗಳಿಗೆ ನೀರು ತುಂಬಿಸಲಾಗುತ್ತದೆ. ಇದಕ್ಕಾಗಿ ವ್ಯವಸ್ಥಿತವಾದ ಕಾಲುವೆ ಜಾಲವನ್ನು ನಿರ್ಮಿಸಲಾಗಿದೆ. ಈ ಕೆರೆಗಳು ಕೃಷಿ, ಕೈಗಾರಿಕೆ ಮತ್ತು ಜಾನುವಾರುಗಳ ನೀರಿನ ಅವಶ್ಯಕತೆಯನ್ನು ಪೂರೈಸುತ್ತವೆ.

ನೀರು ಸಂಗ್ರಹ ಮತ್ತು ಪೂರೈಕೆ ಜಾಲವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ರಾಜಸ್ಥಾನ ಸರ್ಕಾರ ‘ಪೂರ್ವ ರಾಜಸ್ಥಾನ ಕಾಲುವೆ ಯೋಜನೆ–ಇಆರ್‌ಸಿಪಿ’ ಆರಂಭಿಸಿದೆ. 2050ರ ವೇಳೆಗೆ ರಾಜ್ಯದ ನೀರಿನ ಅಗತ್ಯಗಳನ್ನು ಪೂರೈಸುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದೆ. ಇದರ ಅಡಿಯಲ್ಲಿ ಮತ್ತಷ್ಟು ಕಾಲುವೆಗಳನ್ನು ಮತ್ತು ಕೆರೆಗಳನ್ನು ನಿರ್ಮಿಸಲಾಗುತ್ತದೆ. 2041ರ ವೇಳೆಗೆ ಯೋಜನೆ ಪೂರ್ಣಗೊಳಿಸುವ ಗುರಿ ಹಾಕಿಕೊಳ್ಳಲಾಗಿದೆ. ಇದು ಅನುಷ್ಠಾನಕ್ಕೆ ಬಂದರೆ ರಾಜ್ಯದ ಶೇ 23.6ರಷ್ಟು ಕೃಷಿ ಭೂಮಿಗೆ ಮತ್ತು ಶೇ 41ರಷ್ಟು ಜನರಿಗೆ ಅಗತ್ಯವಿರುವ ಕುಡಿಯುವ ನೀರಿನ ಸಂಗ್ರಹ ಮತ್ತು ಪೂರೈಕೆ ಸಾಮರ್ಥ್ಯ ಇಆರ್‌ಸಿಪಿಗೆ ದತ್ತವಾಗಲಿದೆ.

ರಾಜಸ್ಥಾನದ ಕಿರು ಜಲಾಶಯ ವ್ಯವಸ್ಥೆಯ ಮಾದರಿ



ನಕ್ಷೆ ಕೃಪೆ: ಗೂಗಲ್ ಅರ್ಥ್

ಅತಿಹೆಚ್ಚು ಮಳೆಯಾದಾಗ ಪ್ರವಾಹ, ಕಡಿಮೆ ಮಳೆಯಾದಾಗ ಬರ. ಕರ್ನಾಟಕವೂ ಸೇರಿ ದೇಶದ ಬಹುತೇಕ ರಾಜ್ಯಗಳ ಸ್ಥಿತಿ ಇದು. ದೇಶದಲ್ಲಿ ಹೆಚ್ಚು ಮಳೆಯಾಗುವ ರಾಜ್ಯಗಳಲ್ಲಿ ಒಂದಾದ ಮಧ್ಯಪ್ರದೇಶ ಮತ್ತು ಕಡಿಮೆ ಮಳೆಯಾಗುವ ರಾಜ್ಯಗಳಲ್ಲಿ ಒಂದಾದ ರಾಜಸ್ಥಾನ, ಹಿಂದಿನ ಮತ್ತು ಈಗಿನ ಶತಮಾನದ ಉದ್ದಕ್ಕೂ ಅತಿವೃಷ್ಟಿ ಮತ್ತು ಅನಾವೃಷ್ಟಿಗೆ ಸಾಕ್ಷಿಯಾಗಿವೆ. ಅತಿ ಮಳೆಯಾದಾಗ ಪ್ರವಾಹ ನಿಯಂತ್ರಣಕ್ಕೆಂದು ನಿರ್ಮಿಸಿದ ಚೆಕ್‌ಡ್ಯಾಂಗಳು ಮತ್ತು ಕಿರು ಜಲಾಶಯಗಳು ರಾಜ್ಯದ ಕೆರೆಗಳಿಗೂ ನೀರು ತುಂಬಿಸುತ್ತಿವೆ. ಹೀಗೆ ಸಂಗ್ರಹಿಸಲಾದ ನೀರು ಬರಗಾಲದ ವರ್ಷಗಳಲ್ಲಿ ಜನರ ನೀರಿನ ಅವಶ್ಯಕತೆಯನ್ನೂ ಪೂರೈಸುತ್ತವೆ. ಕರ್ನಾಟಕಕ್ಕೂ ಇದು ಮಾದರಿಯಾಗಬಲ್ಲದು

ನೀರು ಸಂರಕ್ಷಣೆಗೆ ಜನಾಂದೋಲನ – ಮಧ್ಯಪ್ರದೇಶ ಮಾದರಿ

‘ಅತ್ಯಂತ ಕೆಟ್ಟ ಸ್ಥಿತಿಯೂ ಒಮ್ಮೊಮ್ಮೆ ವರವಾಗಿ ಪರಿಣಮಿಸುತ್ತದೆ ಎನ್ನುವಂತೆ ಬರವು ನಮ್ಮ ಪಾಲಿಗೆ ವರವಾಗಿ ಪರಿಣಮಿಸಿತು. ಜನರಿಗೆ ನೀರಿನ ಅವಶ್ಯಕತೆಯ ಅರಿವಾಯಿತು. ಸರ್ಕಾರದ ಯೋಜನೆಗಳನ್ನು ಜನರು ಬಹುಬೇಗ ಒಪ್ಪಿಕೊಂಡರು ಮತ್ತು ಆ ಯೋಜನೆಗಾಗಿ ಸರ್ಕಾರದೊಂದಿಗೆ ತಾವೂ ಶ್ರಮಿಸಿದರು’

ಮಧ್ಯಪ್ರದೇಶದ ಶಾದೂಲ್ ಜಿಲ್ಲಾ ಪಂಚಾಯಿತಿಯ ಸದಸ್ಯ ನಾಗೇಂದ್ರ ಯಾದವ್ ಅವರು 2000ರ ಬರದ ಸಂದರ್ಭದಲ್ಲಿ ನೀಡಿದ ಈ ಹೇಳಿಕೆಯು ಮಧ್ಯಪ್ರದೇಶದ ನೀರಿನ ಸಂರಕ್ಷಣೆಯ ಕಥನವನ್ನು ವಿವರಿಸುತ್ತದೆ. 2000ರಲ್ಲಿ ಮಧ್ಯಪ್ರದೇಶದ ಬುಂದೇಲ್‌ಖಂಡ ಪ್ರದೇಶವು ಸೇರಿದಂತೆ ಕೆಲವು ಜಿಲ್ಲೆಗಳು ತೀವ್ರ ಬರದ ಸಂಕಷ್ಟ ಎದುರಿಸಿದ್ದವು. ಅದಕ್ಕಿಂತ ಹಿಂದೆಯೂ ಈ ಪ್ರದೇಶಗಳು ತೀವ್ರ ಬರವನ್ನು ಅನುಭವಿಸಿದ್ದವು. ರಾಜ್ಯದ ಇತರೆ ಭಾಗವು ಅತಿವೃಷ್ಟಿ, ಪ್ರವಾಹದಿಂದ ತತ್ತರಿಸಿದರೂ ಬುಂದೇಲ್‌ಖಂಡ ಪ್ರದೇಶದಲ್ಲಿ ಮಾತ್ರ ಬರವು ತನ್ನ ಬಾಹುಗಳನ್ನು ಚಾಚಿಕೊಂಡಿತ್ತು.

ಆದರೆ, ಈ ಪ್ರದೇಶಕ್ಕೆ 2000ರಲ್ಲಿ ಬಡಿದ ಬರವು ನೀರಿನ ಸಂರಕ್ಷಣೆಯಲ್ಲಿ ಜನರ ಒಗ್ಗೂಡುವಿಕೆಗೆ ಸಾಕ್ಷಿಯಾಯಿತು ಎನ್ನಬಹುದು. ಇನ್ನೊಂದು ಮುಖ್ಯ ಅಂಶ ಎಂದರೆ, ಸರ್ಕಾರದ ಯೋಜನೆಯು ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ನೀಡಿದ್ದು. ಖುದ್ದು ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಪಂಚಾಯಿತಿಗಳಿಗೆ ನೀಡಲಾಯಿತು. ಅಧಿಕಾರದ ವಿಕೇಂದ್ರೀಕರಣವೂ ಬರ ನಿರ್ವಹಣೆಯಲ್ಲಿ ಮುಖ್ಯ ಪಾತ್ರ ವಹಿಸಿತ್ತು.

ಅಲ್ಲಿಂದ ಇಲ್ಲಿಯವರೆಗೆ ಸರ್ಕಾರ ಹಾಗೂ ಜನರು ಸೇರಿ ರೂಪಿಸಿದ ಈ ಮಾದರಿಯು ಇಂದು ಮಧ್ಯಪ್ರದೇಶವನ್ನು ನೀರಿನ ಸಂರಕ್ಷಣೆಯಲ್ಲಿ ಮಾದರಿ ರಾಜ್ಯವನ್ನಾಗಿಸಿದೆ. ‘ರಾಷ್ಟ್ರೀಯ ಜಲ ಪ್ರಶಸ್ತಿ –2022’ ಅನ್ನು ಮಧ್ಯ ಪ್ರದೇಶವು ತನ್ನದಾಗಿಸಿಕೊಂಡಿದೆ. ಜೊತೆಗೆ, ನಗರ ಪ್ರದೇಶದಲ್ಲಿ ನೀರಿನ ಪೂರೈಕೆ ಹಾಗೂ ಹಂಚಿಕೆ ವಿಭಾಗದಲ್ಲಿ ಇಂದೋರ್ ನಗರಸಭೆಯು ಇದೇ ವರ್ಷದಲ್ಲಿ ಪ್ರಶಸ್ತಿ ಪಡೆದುಕೊಂಡಿದೆ.

ಮಧ್ಯಪ್ರದೇಶವು ನೈಸರ್ಗಿಕವಾಗಿ ಸಂಪತ್ತು ಭರಿತ ರಾಜ್ಯವಾಗಿದೆ. ಇಲ್ಲಿ ಒಟ್ಟು 14 ಪ್ರಮುಖ ನದಿ ಜಾಲಗಳು ಇವೆ. ಹಾಗಿದ್ದರೂ ರಾಜ್ಯವು ಮಳೆಗಾಲದಲ್ಲಿ ಸುರಿಯುವ ಮಳೆಯ ಮೇಲೆಯೇ ಅವಲಂಬಿತವಾಗಿದೆ. ಜನವರಿಯಿಂದ ಜೂನ್‌ವರೆಗೂ ರಾಜ್ಯವು ಪೂರ್ತಿ ಬೆಂಗಾಡಾಗಿ ಇರುತ್ತದೆ. ಈ ತಿಂಗಳುಗಳಲ್ಲಿ ಬಾವಿಗಳಂಥ ನೀರಿನ ಮೂಲಗಳ ಮೇಲೆ ಮಾತ್ರವೇ ಜನರು ಅವಲಂಬಿತರಾಗುತ್ತಾರೆ.



1994ರಲ್ಲಿ ‘ರಾಜೀವ್ ಗಾಂಧಿ ಜಲಾನಯನ ನಿರ್ವಹಣಾ ಮಿಷನ್’ ಅನ್ನು ಅಂದಿನ ಮುಖ್ಯಮಂತ್ರಿ ದಿಗ್ವಿಜಯ ಸಿಂಗ್ ನೇತೃತ್ವದಲ್ಲಿ ಮಧ್ಯಪ್ರದೇಶದಲ್ಲಿ ಜಾರಿ ಮಾಡಲಾಗಿತ್ತು. 1985ರಲ್ಲಿ ಝಬುವಾ ಜಿಲ್ಲೆಯ ಕಲೆಕ್ಟರ್ ಆಗಿದ್ದ ಆರ್. ಗೋಪಾಲಕೃಷ್ಣನ್ ಅವರ ವರದಿಯನ್ನು ಆಧರಿಸಿ ಈ ಮಿಷನ್ ಅನ್ನು ಜಾರಿ ಮಾಡಲಾಗಿತ್ತು. ಪರಿಸರ ನಾಶದಿಂದ ತೀವ್ರವಾಗಿ ಹಾನಿಯೊಳಗಾಗಿರುವ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು, ಅಲ್ಲಿನ ಜಲಮೂಲಗಳ ಸಂರಕ್ಷಣೆ ಮಾಡುವುದು ಈ ಮಿಷನ್‌ನ ಮುಖ್ಯ ಉದ್ದೇಶವಾಗಿತ್ತು. ಸರ್ಕಾರ, ಸ್ಥಳೀಯ ಸಂಸ್ಥೆಗಳು, ಎನ್‌ಜಿಒ ಹಾಗೂ ಜನರ ಪಾಲುದಾರಿಕೆಯಲ್ಲಿ ಈ ಮಿಷನ್‌ನ ಕೆಲಸ ಕಾರ್ಯಗಳು ಜರುಗಿದವು.

ಇದರ ಮುಂದುವರಿದ ಭಾಗ ಎಂಬಂತೆ 1999ರಲ್ಲಿ, ಸಿಂಗ್ ಅವರೇ ಮುಂದಾಳತ್ವ ವಹಿಸಿ, ‘ಏಕ್ ಪಂಚ್ ಏಕ್ ತಲಾಬ್’ (ಒಬ್ಬ ಪಂಚಾಯಿತಿ ಸದಸ್ಯ, ಒಂದು ಕೆರೆ) ಯೋಜನೆಗೆ ಕರೆ ನೀಡಿದರು. ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿಯ ಸದಸ್ಯನು ಒಂದು ಕೆರೆಯನ್ನು ನಿರ್ಮಾಣ ಮಾಡಬೇಕು ಮತ್ತು ಒಂದು ಕೆರೆಯ ಪುನಶ್ಚೇತನವನ್ನು ಕಡ್ಡಾಯವಾಗಿ ಮಾಡಬೇಕು ಎಂದು ಸಿಂಗ್ ಕರೆ ನೀಡಿದ್ದರು. ಈ ಯೋಜನೆಯು ಎಷ್ಟು ಜನಪ್ರಿಯವಾಯಿತೆಂದರೆ, ಕೆರೆ ನಿರ್ಮಾಣದಲ್ಲಿ ಜನರೂ ಭಾಗೀದಾರರಾದರು. ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಕೆರೆಗಳ ನಿರ್ಮಾಣಕ್ಕೆ ಅಣಿಯಾದರು. ಕೆಲವರಂತೂ ತಮ್ಮ ಸ್ವಂತ ಜಮೀನನ್ನೇ ಕೆರೆಯ ನಿರ್ಮಾಣಕ್ಕೆ ದೇಣಿಗೆ ನೀಡಿದರು.

1997–2007ರ ಮಧ್ಯೆದಲ್ಲಿ ಕಿರು ಡ್ಯಾಂಗಳ ನಿರ್ಮಾಣ ಪ್ರಾರಂಭ ಮಾಡಲಾಯಿತು. ನರ್ಮದಾ ನದಿಯೊಂದಕ್ಕೇ ಸುಮಾರು 30 ದೊಡ್ಡ ಜಲಾಶಯಗಳು, 135 ಮಧ್ಯಮ ಗಾತ್ರದ ಜಲಾಶಯಗಳು ಮತ್ತು 3,000 ಚೆಕ್ ಡ್ಯಾಂಗಳನ್ನು ನಿರ್ಮಿಸಲಾಗಿದೆ. ಜೊತೆಗೆ, ಕಾಲುವೆಗಳಿಗೆ, ಸಣ್ಣ ಸಣ್ಣ ತೊರೆಗಳಿಗೆ ಚೆಕ್ ಡ್ಯಾಂಗಳನ್ನು ನಿರ್ಮಿಸಲಾಗಿದೆ. ಇವು ರಾಜ್ಯದ ಆರ್ಥಿಕತೆಗೂ ಬಹುದೊಡ್ಡ ಕೊಡುಗೆ ನೀಡಿವೆ ಎಂದು ಸಾಬೀತು ಮಾಡುವ ಹಲವು ಸಂಶೋಧನೆಗಳೂ ನಡೆದಿವೆ. ನೀರಿಲ್ಲದ ದಿನಗಳಲ್ಲಿ, ಈ ಡ್ಯಾಂಗಳಲ್ಲಿ ಮೋಟಾರುಗಳನ್ನು ಅಳವಡಿಸಿಕೊಳ್ಳುವ ಮೂಲಕ ರೈತರು ತಮ್ಮ ಕೃಷಿ ಭೂಮಿಗೆ ನೀರುಣಿಸುತ್ತಿದ್ದಾರೆ. ಜಾನುವಾರುಗಳಿಗೆ ನೀರು, ಮನೆ ಬಳಕೆಗೆ ನೀರು ಹೀಗೆ ಈ ಡ್ಯಾಂಗಳು ನಾನಾ ರೀತಿಯಲ್ಲಿ ಉಪಯೋಗವಾಗುತ್ತಿವೆ. ಚೆಕ್ ಡ್ಯಾಂಗಳ ಕಾರಣದಿಂದಲೇ ರಾಜ್ಯದಲ್ಲಿ ನೀರಾವರಿ ಪ್ರದೇಶದ ವಿಸ್ತೀರ್ಣ ಏರಿಕೆಯಾಗಿದೆ.

ಆಧಾರ: ರಾಷ್ಟ್ರೀಯ ಜಲ ಆಯೋಗ, ಪಿಐಬಿ, ರಾಜಸ್ಥಾನ ಜಲಸಂಪನ್ಮೂಲ ಇಲಾಖೆ ವರದಿಗಳು, ಮಧ್ಯಪ್ರದೇಶ ಜಲಸಂಪನ್ಮೂಲ ಇಲಾಖೆ ವರದಿಗಳು, ‘ಡೌನ್ ಟು ಅರ್ಥ್’ ಪತ್ರಿಕೆಯ ವರದಿಗಳು, ‘ಸ್ಟಡಿ ಆನ್ ವರ್ಕಿಂಗ್ಸ್ ಆಫ್ ಚೆಕ್ ಡ್ಯಾಮ್ಸ್ ಇನ್ ಮಧ್ಯಪ್ರದೇಶ್’ ಅಧ್ಯಯನ ವರದಿ

ಶೀಘ್ರದಲ್ಲೇ ತೆರೆಗೆ ‘ಮರೀಚಿ’

ನಟ ವಿಜಯ ರಾಘವೇಂದ್ರ ಹಾಗೂ ಸೋನು ಗೌಡ ನಟನೆಯ ‘ಮರೀಚಿ’ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಇತ್ತೀಚೆಗೆ ಸಿನಿಮಾದ ಟೀಸರ್ ಬಿಡುಗಡೆಯಾಗಿದೆ.

ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರದ ಈ ಸಿನಿಮಾದಲ್ಲಿ ಪೊಲೀಸ್ ಅಧಿಕಾರಿಯಾಗಿ ವಿಜಯ ರಾಘವೇಂದ್ರ ಕಾಣಿಸಿಕೊಂಡಿದ್ದಾರೆ. ‘ಹ್ಯಾಪಿ ನ್ಯೂ ಇಯರ್’ ಸಿನಿಮಾ ಬಳಿಕ ಸೋನು ಗೌಡ ಮತ್ತೊಮ್ಮೆ ವಿಜಯ ರಾಘವೇಂದ್ರ ಅವರಿಗೆ ಜೋಡಿಯಾಗಿದ್ದಾರೆ. ಸಿದ್ರುವ್(ಸಿದ್ದು) ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದು, ಸಂತೋಷ್ ಮಾಯಪ್ಪ ಅವರ ಜೊತೆಗೂಡಿ ನಿರ್ಮಾಣ ಮಾಡಿದ್ದಾರೆ. ಸಿದ್ರುವ್‌ಗೆ ಇದು ಚೊಚ್ಚಲ ಸಿನಿಮಾ. ‘ಋಷಿಯೊಬ್ಬರ ಹೆಸರು ಶೀರ್ಷಿಕೆಯಾಗಿ ಆಯ್ಕೆ ಮಾಡಬೇಕಿತ್ತು. ಅದಕ್ಕೆ ‘ಮರೀಚಿ’ ಆಯ್ಕೆ ಮಾಡಿದ್ದೇನೆ. ಮರೀಚಿ ಎಂದರೆ ಬ್ರಹ್ಮನ ಮಗ. ಒಂದೊಳ್ಳೆ ಪ್ರಯತ್ನ ಮಾಡಿದ್ದೇವೆ’ ಎನ್ನುತ್ತಾರೆ ಸಿದ್ರುವ್.

‘ಚಿತ್ರದ ಟ್ಯಾಗ್‌ಲೈನ್ ‘God father of good and bad’ ಎಂದಿದೆ. ಇದುವೇ ಕಥೆಯ ಸಾರಾಂಶ. ‘ಮರೀಚಿ’ ಒಂದು ಕ್ರೈಮ್ ಥ್ರಿಲ್ಲರ್ ಸಿನಿಮಾ. ಈ ಚಿತ್ರದಲ್ಲಿ ಪೊಲೀಸ್ ಪಾತ್ರ ನನ್ನದು. ನಿರ್ದೇಶಕರು, ತಾಂತ್ರಿಕ ವರ್ಗದವರನ್ನು ಎಷ್ಟು ಜವಾಬ್ದಾರಿಯಿಂದ ಆಯ್ಕೆ ಮಾಡಿದ್ದರೋ ಅದೇ ರೀತಿ ಕಲಾವಿದರನ್ನು ಅಷ್ಟೇ ಜವಾಬ್ದಾರಿಯಿಂದ ಆಯ್ಕೆ ಮಾಡಿದ್ದಾರೆ’ ಎಂದರು ವಿಜಯ ರಾಘವೇಂದ್ರ. ಅಭಿ ದಾಸ್, ಸ್ಪಂದನ ಸೋಮಣ್ಣ, ಆರ್ಯನ್, ಶೃತಿ ಪಾಟೀಲ್, ಗೋಪಾಲ್ ಕೃಷ್ಣ ದೇಶಪಾಂಡೆ, ಅರುಣ ಬಾಲರಾಜ್ ಚಿತ್ರದ ತಾರಾಬಳಗದಲ್ಲಿದ್ದಾರೆ.



ಸೋನು ಗೌಡ

ನವೆಂಬರ್‌ನಲ್ಲಿ ಬರ್ತಾಳೆ ‘ಅಲೆಕ್ಸಾ’

ಪವನ್ ತೇಜ್ ಹಾಗೂ ಅದಿತಿ ಪ್ರಭುದೇವ ಮುಖ್ಯಪಾತ್ರಗಳಲ್ಲಿ ನಟಿಸಿರುವ ‘ಅಲೆಕ್ಸಾ’ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ಜೀವ ನಿರ್ದೇಶಿಸಿರುವ ಈ ಚಿತ್ರದ ಟೀಸರ್ ರಿದಂ ಮ್ಯೂಸಿಕ್ ಯೂಟ್ಯೂಬ್ ಚಾನಲ್ ಮೂಲಕ ಬಿಡುಗಡೆಯಾಗಿದೆ.

ವಿ.ಚಂದ್ರು ನಿರ್ಮಾಣದ ಈ ಚಿತ್ರ ನವೆಂಬರ್‌ನಲ್ಲಿ ತೆರೆಗೆ ಬರುತ್ತಿದೆ. ಚಿತ್ರದ ಕುರಿತು ಮಾಹಿತಿ ನೀಡಿದ ಜೀವ, ‘ಇದೊಂದು ಮರ್ಡರ್ ಮಿಸ್ಟರಿ ಚಿತ್ರ. ತನಿಖಾಧಿಕಾರಿ ಪಾತ್ರದಲ್ಲಿ ಅದಿತಿ ಪ್ರಭುದೇವ ನಟಿಸಿದ್ದಾರೆ. ಪವನ್ ತೇಜ್ ಅವರು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಫಾರ್ಮಾಸುಟಿಕಲ್ ಮಾಫಿಯಾ ಬಗ್ಗೆ ಕಥಾಹಂದರವಿದೆ. ಈ ಚಿತ್ರದ ಎರಡನೇ ಭಾಗವನ್ನು ತೆರೆಗೆ ತರುವ ಆಲೋಚನೆ ಇದೆ. ಮೈಸೂರು, ಮಡಿಕೇರಿ ಮುಂತಾದ ಕಡೆ ಚಿತ್ರೀಕರಣ ಮಾಡಿದ್ದೇವೆ’ ಎಂದರು.

‘ನನಗೆ ನಿಜಜೀವನದಲ್ಲಿ ಪೊಲೀಸ್ ಅಧಿಕಾರಿಯಾಗಬೇಕೆಂಬ ಕನಸಿತ್ತು. ಅದು ಆಗಲಿಲ್ಲ. ನಿರ್ದೇಶಕರು ಈ ಚಿತ್ರದಲ್ಲಿ ತನಿಖಾಧಿಕಾರಿ ಪಾತ್ರ ನೀಡಿದ್ದಾರೆ. ಸಾಹಸ ದೃಶ್ಯಗಳನ್ನೂ ಈ ಸಿನಿಮಾದಲ್ಲಿ ಮಾಡಿದ್ದೇನೆ. ರವಿವರ್ಮ ಹಾಗೂ ಮಾಸ್ ಮಾದ ಅವರು ಸಾಹಸ ಸಂಯೋಜನೆಯಲ್ಲಿ ಸಾಹಸ ಸನ್ನಿವೇಶಗಳು ಚೆನ್ನಾಗಿ ಬಂದಿದೆ’ ಎನ್ನುತ್ತಾರೆ ಅದಿತಿ. ವಿ.ಚಂದ್ರು ಈ ಸಿನಿಮಾ ನಿರ್ಮಾಣ ಮಾಡಿದ್ದು, ನಾಗಾರ್ಜುನ್, ಮೇಘಶ್ರೀ, ಮಿಮಿಕ್ರಿ ಗೋಪಿ, ಚಂದ್ರಕಲಾ ಮೋಹನ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.



ಅದಿತಿ ಹಾಗೂ ಪವನ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

‘ಮಹಿಳೆಯರಿಗೆ ಕರ್ನಾಟಕ ಸರ್ಕಾರವು ಉಚಿತ ಬಸ್ ಪ್ರಯಾಣ ಸೌಲಭ್ಯ ನೀಡಿದೆ. ಮುಸ್ಲಿಂ ಮಹಿಳೆಯೊಬ್ಬರು ಬಸ್‌ವೊಂದನ್ನು ನಿಲ್ಲಿಸಲು ಕೇಳಿಕೊಂಡರು. ಬಸ್ ಚಾಲಕ ಬಸ್ ನಿಲ್ಲಿಸದಿದ್ದ ಪರಿಣಾಮವಿದು’ ಎಂಬ ಬರಹ ಇರುವ, ಬಸ್‌ವೊಂದಕ್ಕೆ ಮುಸ್ಲಿಮರು ಕಲ್ಲು ತೂರಾಟ ನಡೆಸುತ್ತಿರುವ ವಿಡಿಯೊವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಕರ್ನಾಟಕ ಸರ್ಕಾರ ಶಕ್ತಿ ಯೋಜನೆಯ ಹಿನ್ನೆಲೆಯಲ್ಲಿ ಈ ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಇದೇ ವಿಡಿಯೊವು 2019ರಲ್ಲಿಯೂ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗಿತ್ತು. ಅಂದು ಕೂಡ ಹಲವು ಸುದ್ದಿ ಸಂಸ್ಥೆಗಳು ಈ ವಿಡಿಯೊದ ಫ್ಯಾಕ್ಟ್‌ಚೆಕ್ ಪ್ರಕಟಿಸಿದ್ದವು. ಆಗ ಈ ವಿಡಿಯೊವು ಮುಂಬೈನಲ್ಲಿ ನಡೆದಿದೆ ಎಂದು ಹಂಚಿಕೆಯಾಗಿತ್ತು. ಬಾಂದ್ರದಿಂದ ಬಿಕೆಎಸ್‌ವರೆಗೆ ಬಸ್ ಸಂಚಾರ ಆರಂಭಿಸಲಾಗಿದೆ. ಈ ಮಾರ್ಗದಲ್ಲಿ ಆಟೊ ಓಡಿಸುತ್ತಿದ್ದ ಮುಸ್ಲಿಂ ಆಟೊ ಚಾಲಕರು ಬಸ್‌ಗೆ ಕಲ್ಲು ಹೊಡೆಯುತ್ತಿದ್ದಾರೆ ಎಂದು ಹೇಳಲಾಗಿತ್ತು. ಆದರೆ, ಈ ವಿಡಿಯೊದಲ್ಲಿರುವ ದೃಶ್ಯಗಳು ನಡೆದಿದ್ದು ಗುಜರಾತ್‌ನ ಸೂರತ್‌ನಲ್ಲಿ. ಗುಂಪು ಹಲ್ಲೆ ಹತ್ಯೆಯನ್ನು ಖಂಡಿಸಿ, 2019ರ ಜುಲೈನಲ್ಲಿ ದೊಡ್ಡ ಮಟ್ಟದ ಶಾಂತಿಯುತ ಪ್ರತಿಭಟನೆ ಆಯೋಜಿಸಲಾಗಿತ್ತು. ಆದರೆ, ಪ್ರತಿಭಟನೆಗೆ ಅನುಮತಿ ಇಲ್ಲ ಎಂದು ಪೊಲೀಸರು ಜನರನ್ನು ಚದುರಿಸಲು ಮುಂದಾದಾಗ ಈ ಘಟನೆ ನಡೆದಿತ್ತು. ಆದ್ದರಿಂದ, ಈ ಘಟನೆ ನಡೆದಿದ್ದು ಸೂರತ್‌ನಲ್ಲಿ ಹೊರತು ಕರ್ನಾಟಕದಲ್ಲಿ ಅಲ್ಲ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಬಾಧಿಸದಿರಲಿ ಮೇಲರಿಮೆಯ ವೈರಸ್ಸು



ಎಚ್.ಎಸ್.ನವೀನಕುಮಾರ್ ಹೊಸದುರ್ಗ

ದೇಹಕ್ಕೆ ಬಾಧೆ ಕೊಡುವ ವಿಭಿನ್ನ ವೈರಸ್‌ಗಳಂತೆ, ಮನಸ್ಸಿಗೆ ಮುತ್ತಿಕ್ಕಿ, ನಮ್ಮ ವ್ಯಕ್ತಿತ್ವವನ್ನೇ ಬಾಧಿಸುವ ಹಲವಾರು ವೈರಸ್‌ಗಳೂ ಇವೆ. ಅವುಗಳಲ್ಲಿ ನಮಗೆಲ್ಲ ಗೊತ್ತು ಎಂಬ ಅಹಂಕಾರವನ್ನು ಮೂಡಿಸಿ ಅಜ್ಞಾನಕ್ಕೆಡೆ ಮಾಡಿಕೊಡುವ ‘ಮೇಲರಿಮೆ’ ಅಥವಾ ‘ಸುಪೀರಿಯಾರಿಟಿ ಕಾಂಪ್ಲೆಕ್ಸ್’ ಎಂಬುದು ಪ್ರಮುಖವಾದುದು. ಈ ವೈರಸ್ ನಮ್ಮ ತಲೆಯೊಳಗೆ ಹೊಕ್ಕರೆ, ಕಲಿಕೆ ನಿಂತ ನೀರಾಗಿ ಬಿಡುತ್ತದೆ. ಇದನ್ನು ದೂರಾಗಿಸಲು, ಯಾವುದೇ ಹೊಸ ವಿಷಯವನ್ನು ಕಲಿಯುವ ಮುನ್ನ ನಮಗೆ ಏನೂ ಗೊತ್ತಿಲ್ಲ ಎನ್ನುವ ‘unlearnig’ ಬಹಳ ಮುಖ್ಯ ಎನ್ನುವುದು ಬಲ್ಲವರ ಅಭಿಮತ.

ಒಮ್ಮೆ ಒಬ್ಬ ಝೆನ್ ಗುರುವಿನ ಬಳಿ, ಈ ಮೇಲರಿಮೆಯ ವೈರಸ್‌ನಿಂದ ತೀವ್ರವಾಗಿ ಬಾಧಿತರಾಗಿದ್ದ, ಎರಡೆರಡು ಪದವಿಗಳನ್ನು ಪಡೆದಿದ್ದ ಪ್ರೊಫೆಸರ್ ಒಬ್ಬರು ಜ್ಞಾನವನ್ನು ಪಡೆದುಕೊಳ್ಳಬೇಕು ಎಂದು ಬಂದರು. ಈ ವ್ಯಕ್ತಿಯ ಅಹಂಕಾರವನ್ನು ಗಮನಿಸಿದ ಝೆನ್ ಗುರುಗಳು ಸಂಪ್ರದಾಯದಂತೆ ಅವರಿಗೆ ಚಹಾ ನೀಡಿ ಸತ್ಕರಿಸಿದರು. ಪ್ರೊಫೆಸರ್ ಎದುರಿಗೆ ಒಂದು ಕಪ್ ಇರಿಸಿದ ಝೆನ್ ಗುರು, ಆ ಕಪ್ಪಿಗೆ ಪಾತ್ರೆಯಲ್ಲಿದ್ದ ಚಹಾವನ್ನು ಸುರಿಯುತ್ತಾ ಹೋದರು. ಕಪ್ ಭರ್ತಿಯಾಯ್ತು. ಆದರೆ ಝೆನ್ ಗುರು ಮಾತ್ರ ಚಹಾವನ್ನು ಕಪ್‌ಗೆ ಸುರಿಯುವುದನ್ನು ನಿಲ್ಲಿಸಲಿಲ್ಲ. ಆಗ ಚಹಾ, ಕಪ್‌ನಿಂದ ಹೊರಗೆಲ್ಲಾ ಚೆಲ್ಲಲಾರಂಭಿಸಿತು. ಇದನ್ನು ಗಮನಿಸಿದ ಪ್ರೊಫೆಸರ್ ಸಾಹೇಬರು, ತಾಳ್ಮೆ ಕಳೆದುಕೊಂಡು ‘ಇದೇನು ಮಾಡುತ್ತಿದ್ದೀರಿ? ನೀವೇನೋ ದೊಡ್ಡ ಜ್ಞಾನಿಗಳು ಎಂದು ನಿಮ್ಮ ಬಳಿ ಹೆಚ್ಚಿನ ಜ್ಞಾನ ಪಡೆಯಲು ಬಂದೆ. ನೀವು ನೋಡಿದರೆ ತುಂಬಿರುವ ಕಪ್ಪಿಗೆ ಚಹಾ ಸುರಿಯುತ್ತಿದ್ದೀರಿ. ನೀವೆಂಥ ಜ್ಞಾನಿಗಳು’ ಎಂದು ಪ್ರಶ್ನಿಸಿದರು.

ಆಗ ಆ ಝೆನ್ ಗುರುಗಳು ನಗುತ್ತಾ ‘ಈಗ ನಿಮ್ಮ ಮನಃಸ್ಥಿತಿ ಕೂಡ ಈ ಚಹಾ ಕಪ್ಪಿನಂತೆಯೇ ಇದೆ. ಎಲ್ಲವೂ ಗೊತ್ತು ಎಂದು ತಲೆಯಲ್ಲಿ ತುಂಬಿಕೊಂಡ ನಿಮಗೆ ಯಾವ ಜ್ಞಾನವನ್ನು ನೀಡಿದರೂ ಅದು ನಿಮ್ಮ ಮನಸ್ಸಿನೊಳಗೆ ಇಳಿಯಲಾರದು. ಮೊದಲು ನಿಮ್ಮ ಮನಸ್ಸನ್ನು ಖಾಲಿ ಮಾಡಿಕೊಂಡು ನನಗೇನೂ ಗೊತ್ತಿಲ್ಲ ಎಂಬ ಭಾವದೊಂದಿಗೆ ಬನ್ನಿ. ಆಗ ಏನಾದರೂ ಜ್ಞಾನ ನಿಮ್ಮ ತಲೆಯೊಳಗೆ ಹೊಕ್ಕೀತು’ ಎಂದು ನುಡಿದರು.

ನಮ್ಮ ಮನಸ್ಸು ಎಲ್ಲಾ ಗೊತ್ತಿದೆ ಎಂಬ ಭಾವದಿಂದ ಮುಕ್ತವಾದಾಗ ಮಾತ್ರ ಹೊಸ ವಿಷಯವನ್ನು ಕಲಿಯಲು ಸಾಧ್ಯವಾಗುತ್ತದೆ. ಅದಕ್ಕೇ ಹೇಳುವುದು ಅಹಂಕಾರ ಅಜ್ಞಾನಜನ್ಯವಾದುದು ಹಾಗೂ ವಿನಯ ಜ್ಞಾನಜನ್ಯವಾದುದು ಎಂದು. ಇಂತಹ ಜ್ಞಾನ ಆತ್ಮವಿಶ್ವಾಸಕ್ಕೆ ನಾಂದಿ ಹಾಡುತ್ತದೆ.

ಹಿರಿಯ ಕವಿ ಪಂಜೆ ಮಂಗೇಶರಾಯರ ಕವಿತೆಯ ಸಾಲಿನಂತೆ ‘ಏರುವನು ರವಿ ಏರುವನು.. ಬಾನೊಳು ಸಣ್ಣಗೆ ತೋರುವನು.. ಏರಿದವನು ಚಿಕ್ಕವನಿರಬೇಕಲೆ ಎಂಬ ಮಾತನು ಸಾರುವನು’ ಅಷ್ಟು ಅಗಾಧಶಕ್ತಿಯ ಕೇಂದ್ರವಾದ ಸೂರ್ಯ ಎತ್ತರದಿಂದ ಬಲು ಚಿಕ್ಕವನಾಗಿಯೇ ಕಾಣಿಸುತ್ತಾನೆ. ಹಾಗೆಯೇ ನಿಜವಾದ ಜ್ಞಾನಿ ಯಾವುದೇ ಆಡಂಬರಗಳಿಲ್ಲದೇ ಅಹಂಕಾರವಿಲ್ಲದೇ, ಸರಳವಾಗಿರುತ್ತಾನೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಸೆಪ್ಟೆಂಬರ್ 25, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ದಶಮಿ ಗಂ. 07-56 ನಂತರ ಏಕಾದಶಿ ಗಂ. 29-01 ನಕ್ಷತ್ರ: ಉತ್ತರಾಷಾಢ ಗಂ. 11-55 ಯೋಗ: ಅತಿಗಂಡ ಗಂ. 15-23 ಕರಣ: ಗರ ಗಂ. 07-56, ಕನ್ಯಾ ಮಾಸದ 08 ನೇ ದಿನ ಮಳೆನಕ್ಷತ್ರ: ಉತ್ತರ ಫಲ್ಗುಣಿ 4, ರಾಹುಕಾಲ: ಬೆಳಿಗ್ಗೆ 07-30 – 09-00 ಸೂರ್ಯೋದಯ: 06-23 ಸೂರ್ಯಾಸ್ತ: 06-21 ಮುಸ್ಲಿಂ ದಿನಾಂಕ: 09 ರಬಿಉಲ್ಲಾವಲ್, ದಿನ ವಿಶೇಷ: ಡೋಲ್ ಗ್ಯಾರಸ್ (ಮಧ್ಯ ಪ್ರದೇಶ), ಪಾರ್ಶ್ವಪರಿವರ್ತನಿ ಏಕಾದಶಿ (ಸ್ಮಾರ್ಥಾ) ಅದೃಷ್ಟ ಸಂಖ್ಯೆ: 7,3

ಮೇಷ: ಹೂಡಿಕೆ ಅಥವಾ ಆಸ್ತಿ ಕೊಳ್ಳುವ ವಿಚಾರದಲ್ಲಿ ಮಡದಿಯೊಂದಿಗಿನ ಪ್ರಸ್ತಾಪ ಫಲಕಾರಿಯಾಗುತ್ತದೆ. ಧಾರ್ಮಿಕ ವಿಚಾರಗಳತ್ತ ಮನಸ್ಸು ಹರಿಯುವುದು. ಮನೆಯಲ್ಲಿ ಅತಿಥಿ ಸತ್ಕಾರದಂತಹ ಕಾರ್ಯ ಕೈಗೊಳ್ಳಬಹುದು.

ವೃಷಭ: ವಾಹನದ ಅನಿವಾರ್ಯತೆ ಹೆಚ್ಚಿರುವುದರಿಂದ ನೂತನ ವಾಹನ ಖರೀದಿ ಬಗ್ಗೆ ಗಮನಹರಿಸಿ. ಕಾನೂನು ಕಾಯಿದೆ ವಿಚಾರದಲ್ಲಿ ಹೋರಾಟ ನಡೆಸಿದರೆ ಜಯ ನಿಮ್ಮಪಾಲಿಗಿರುವುದು. ಬದುಕಿನಲ್ಲಿ ಸ್ಥಿರತೆ ಭಾವ ಇರುವುದು.

ಮಿಥುನ: ದೇವಿ ಕೃಪಾಕಟಾಕ್ಷಕ್ಕೆ ಪಾತ್ರರಾದ ಕಾರಣದಿಂದ ಬರಬೇಕಿದ್ದ ಹಣದಲ್ಲಿ ಅಸಲು ಮೊತ್ತ ಕೈ ಸೇರುವುದು. ಎಂಜಿನಿಯರಿಂಗ್ ವಿದ್ಯಾರ್ಥಿಗಳು ಉದ್ಯೋಗದ ಸಂದರ್ಶನಕ್ಕಾಗಿ ಬೇಕಾದ ಪೂರ್ವ ತಯಾರಿ ಮಾಡಿಕೊಳ್ಳಿರಿ.

ಕರ್ಕಾಟಕ: ವೃತ್ತಿಯಲ್ಲಿ ಸಮಸ್ಯೆ ಎದುರಾಗುವ ಪ್ರಸಂಗ ಬಂದರೂ ಧೈರ್ಯದಿಂದ ಎದುರಿಸಿ. ಲೇವಾದೇವಿ ವ್ಯವಹಾರದವರಿಗೆ ನಷ್ಟ ಸಂಭವಿಸಬಹುದು. ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಆಯ್ಕೆಗೊಳ್ಳುವಿರಿ.

ಸಿಂಹ: ದೂರ ದೃಷ್ಟಿ ಇಟ್ಟುಕೊಂಡು ಈಗಿನ ಪ್ರಪಂಚದ ಓಟಕ್ಕೆ ಸರಿಯಾಗಿ ಕಾರ್ಯ ಪ್ರವೃತ್ತರಾಗುವುದು ಉತ್ತಮ. ಮಹಿಳಾ ಉದ್ಯಮಿಗಳಿಗೆ ರಫ್ತು ಕ್ಷೇತ್ರದಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆಯುವುದು. ದೇವರಲ್ಲಿ ಶ್ರದ್ಧೆ ಹೆಚ್ಚುವುದು.

ಕನ್ಯಾ: ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿರುವವರಿಗೆ ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆಗೂ ಮೀರಿದ ಆದಾಯ. ಸೇವಕ ವರ್ಗದವರಿಗೆ ಆದಾಯ ಹೆಚ್ಚಿದಂತೆ ಕೆಲಸದ ಪ್ರಮಾಣ ಹೆಚ್ಚುವುದು. ಸ್ವಂತ ವಿಷಯಗಳಿಗೆ ಮೊದಲ ಆದ್ಯತೆ ನೀಡಿ.

ತುಲಾ: ರಾಜಕಾರಣದಲ್ಲಿ ಹೆಚ್ಚಿನ ಸಮಯ ಕಳೆಯಬೇಕಾದ ಅನಿವಾರ್ಯತೆ ಉಂಟಾಗುವುದು. ವಿದ್ಯುತ್ ಇಲಾಖೆ ಸಿಬ್ಬಂದಿಗೆ ತುರ್ತು ಕೆಲಸಗಳ ನಿರ್ವಹಣೆ ಹೆಚ್ಚಾಗಲಿದೆ. ಅತಿಥಿಗಳ ಆಗಮನ ಸಂತಸವನ್ನು ತಂದೀತು.

ವೃಶ್ಚಿಕ: ಹೋಟೆಲ್ ಉದ್ಯಮದವರಿಗೆ ಮತ್ತು ಟ್ರಾವೆಲಿಂಗ್ ಏಜೆಂಟ್‌ಗಳಿಗೆ ನಿರೀಕ್ಷೆಗೂ ಮೀರಿದ ಆದಾಯ. ವಿವಾಹ ಸಂಬಂಧ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸುವುದು ಸರಿಯಲ್ಲ. ದಳ್ಳಾಳಿಗಳಿಗೆ ಉತ್ತಮ ಆದಾಯವಿರುತ್ತದೆ.

ಧನು: ಉನ್ನತ ವ್ಯಾಸಾಂಗ ಮಾಡುತ್ತಿರುವವರಿಗೆ ಉದ್ಯೋಗದ ಬಗ್ಗೆ ಆಸಕ್ತಿ ಹೆಚ್ಚುವುದು, ಆದರೆ ವಿದ್ಯಾಭ್ಯಾಸ ನಿಲ್ಲಿಸುವುದು ಸರಿಯಲ್ಲ. ನಿಮಗಿರುವ ದೈವಾನುಗ್ರಹದಿಂದ ಕೆಲಸಗಳೆಲ್ಲ ನಿರಾತಂಕವಾಗಿ ನೆರವೇರುವುದು.

ಮಕರ: ಕೈಗಾರಿಕೆ ಹಾಗೂ ವಾಣಿಜ್ಯ ಉದ್ಯಮದ ಸುಧಾರಣೆಗೆ ಸಾಕಷ್ಟು ಅವಕಾಶ ಒದಗಿ ಬರುವುವು. ಸಂಸ್ಥೆಯ ಬೆಳವಣಿಗೆಯ ಜೊತೆಯಲ್ಲಿ ವೈಯುಕ್ತಿಕ ಬೆಳವಣಿಗೆಗೂ ಗಮನ ಕೊಡಿ. ಮುಂದಿನ ವ್ಯಾಸಂಗದ ಬಗ್ಗೆ ತೀರ್ಮಾನಿಸಿ.

ಕುಂಭ: ಬದುಕಿನ ಕವಲುದಾರಿಯಲ್ಲಿರುವ ನಿಮಗೆ ಸರಿಯಾದ ಮಾರ್ಗದರ್ಶನದ ಕೊರತೆ ಇದೆ. ಅದರಲ್ಲಿ ನಿಮಗೆ ಯಶಸ್ಸು ಖಚಿತವೆನಿಸಿದ್ದರೂ ಜಾಗ್ರತೆ ವಹಿಸುವುದು ಮೇಲು. ಉದರ ವ್ಯಾಧಿಯಂತಹ ಸಮಸ್ಯೆ ಎದುರಾಗಬಹುದು.

ಮೀನ: ಮಾತುಗಾರರಿಗೆ, ವಾಗ್ಮಿಗಳಿಗೆ, ಬೋಧಕ ವರ್ಗದವರಿಗೆ, ಸಾಂಸ್ಕೃತಿಕ ಕಲಾವಿದರಿಗೆ ವೃತ್ತಿಯಲ್ಲಿ ಮುಂಬಡ್ತಿ ಅಥವಾ ಸನ್ಮಾನ ದೊರಕಲಿದೆ. ಶ್ರಮಕ್ಕೆ ತಕ್ಕಂತಹ ಪ್ರತಿಫಲ ಸಿಗದಿರುವ ಕಾರಣವಾಗಿ ದುಃಖವಾಗಬಹುದು.

ಪದಬಂಧ 5451

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಲ್ವತ್ತೆಂಟನೆಯ ಸಂವತ್ಸರ ಸಂತೋಷವನ್ನೂ ತಂದಿದೆ (3)
5.ನೂರು ವರ್ಷಗಳ ಅವಧಿ (4)
6.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
8.ಕೌರವರ ಸೋದರಮಾವ (3)
11.ಕದಕ್ಕೆ ಒರಗಿಸಿರುವ ಕೆನ್ನೆ! (3)
13.ಕಾಡಿನ ಹೂವಿದು (4)
17.ದನಗಳನ್ನು ಕಾಯುವವನು (4)
18.ಅಲೆ ಇಲ್ಲಿ ಕಾಣುತ್ತಿದೆ (3)

ಮೇಲಿಂದ ಕೆಳಕ್ಕೆ
1.ದೇವೋಭವ ಎನಿಸಿಕೊಳ್ಳುವ ಗುರು (3)
2.ಹತ್ತನೆಯ ಒಂದು ಭಾಗ (4)
3.ವಾರದೊಳಗೆ ಮಂಗ ಬಂದಿದೆಯಲ್ಲಾ (3)
4.ಕಾವ್ಯದ ನವರಸಗಳಲ್ಲಿ ಅಸಹ್ಯಕರವಾದುದು! (3)
7.ವರ್ಣದಿಂದಲೇ ವಿಸ್ತಾರವಾದ ನಿರೂಪಣೆ (3)
9.ಚಿಮುಕಿಸುವಿಕೆಯನ್ನು ಹೀಗೂ ಹೇಳಬಹುದು (3)
10.ಈತ ದುಡ್ಡಿಲ್ಲದವನು (3)
12.ವೇದೋಕ್ತ ವಿಧಿಗಳನ್ನು ಮಾಡಿಸುವವನು (4)
14.ಹಿತವಾದ ಮಾತು (3)
15.ಮನದೊಳಗಿರುವ ಕಾಮ (3)
16.ಉದಾಹರಣೆಗಳನ್ನು ನೀಡುವಾಗ ಕಾಣಿಸಿದ ಸರ್ಪ (3)

1		2	■	■	3	■	4	■
	■	5				■		■
	■		■	■	6			7
■	■	8		9	■	■	■	
10	■	■	■		■	■	■	
	■	■	■	11		12	■	■
13	14		15	■	■		■	16
■		■	17				■	
■		■		■	■	18		

5450ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಂತರ 3.ಕೆಸರು
5.ಜರಾ 6.ಜವಾನ
8.ದಾರಿ 9.ಕುಚೇಲ
10.ಗೆಳೆಯ 11.ಸುದಿನ
12.ಟಗರು 14.ಕಾಶಿ
15.ಕಳಂಕ 16.ದ್ರವ
17.ಪಾತಕಿ 18.ಸಮಿತಿ

ಮೇಲಿಂದ ಕೆಳಕ್ಕೆ:
2.ತಪರಾಕು 4.ಸಮುದಾಯ
6.ಜಲಜನಕ 7.ನಗೆನಾಟಕ
11.ಸುಶಿಕ್ಷಿತ 13.ರುದ್ರಭೂಮಿ

ಸುಡೊಕು 5837

	8			7			4	
		4	6		8			9
7		9		1		8		
					4	6	7	
6		1	7		2			4
								1
				6		5		
	3	6	2		5			7
8		5		4			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5836 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

ಮಣಿಪುರ: ಅಕ್ರಮ ವಲಸಿಗರ ಪತ್ತೆಗೆ ಕ್ರಮ: ಬಿರೇನ್

ಪ್ರಜಾವಾಣಿ ವಾರ್ತೆ

ಗುವಾಹಟಿ: ಮ್ಯಾನ್ಮಾರ್ ಗಡಿ ಮೂಲಕ ದೇಶಕ್ಕೆ ನುಸುಳುವ ಅಕ್ರಮ ವಲಸಿಗರನ್ನು ಎನ್‌ಆರ್‌ಸಿ ಮೂಲಕ ಪತ್ತೆಹಚ್ಚಲು, ಮಾದಕ ವಸ್ತುವಿನ ಕಳ್ಳಸಾಗಣೆ ಜಾಲ ನಾಶಪಡಿಸಲು ನೂತನ ಕ್ರಮ ಕೈಗೊಂಡಿರುವ ಹಿನ್ನೆಲೆಯಲ್ಲಿ, ಮಣಿಪುರದ ಸರ್ಕಾರವು ಮೈತೇಯಿಗಳ ಬೇಡಿಕೆ ಈಡೇರಿಸಲು ಹೊಸ ಕ್ರಿಯಾ ಯೋಜನೆ ಸಿದ್ಧಪಡಿಸಿದೆ.

ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಗಡಿ ರಸ್ತೆ ಸಂಸ್ಥೆಯ ಅಧಿಕಾರಿಗಳನ್ನು ಭಾನುವಾರ ಇಂಫಾಲ್‌ನಲ್ಲಿ ಭೇಟಿಯಾಗಿ, ಮ್ಯಾನ್ಮಾರ್‌ನ ಗಡಿಯಲ್ಲಿ 70 ಕಿ.ಮೀ. ಬೇಲಿ ನಿರ್ಮಿಸ ಬೇಕಾದ ಕುರಿತು ಚರ್ಚಿಸಿದರು. 'ಮ್ಯಾನ್ಮಾರ್‌ನೊಂದಿಗೆ ಮಣಿ ಪುರವು 390 ಕಿ.ಮೀ.ನಷ್ಟು ಗಡಿ ಹಂಚಿಕೊಂಡಿದೆ. ಈ ಪ್ರದೇಶದ ಹಲವಡೆ ಬೇಲಿಯನ್ನೇ ನಿರ್ಮಾಣ ಮಾಡಿಲ್ಲ. ಇದು ಉಗ್ರರಿಗೆ ಹಾಗೂ ಗಡಿ ಯಾಚೆಗಿನ ಅಪರಾಧಿಗಳು ಕಾನೂನು ಬಾಹಿರ ಕೃತ್ಯ ಎಸಗಲು ಅವಕಾಶ ಮಾಡಿಕೊಟ್ಟಿದೆ' ಎಂದು ಭದ್ರತಾ ಸಂಸ್ಥೆಗಳು ಹೇಳಿವೆ. 'ನೆರೆಯ ದೇಶದಿಂದ ಅಕ್ರಮ ವಲಸೆ, ಮಾದಕವಸ್ತು ಕಳ್ಳಸಾಗಣೆಯನ್ನು ತಡೆಯಲು ಬೇಲಿ ನಿರ್ಮಾಣ ಕಾರ್ಯವು ತುರ್ತಾಗಿ ಆಗಬೇಕಿದೆ' ಎಂದುಬಿರೇನ್‌ಹೇಳಿದರು.

ಕೇಂದ್ರೀಕೃತ ಹೂಡಿಕೆಗೆ ಫೋಕಸ್ಡ್ ಎಂ.ಎಫ್



ಬಂಡವಾಳ ಮಾರುಕಟ್ಟೆ
ಕಾವ್ಯ ಡಿ.

ಮ್ಯೂಚುಯಲ್ ಫಂಡ್‌ಗಳಲ್ಲಿ ಅತಿಯಾದ ಹೂಡಿಕೆ ವೈವಿಧ್ಯತೆ ಇದೆ ಎಂಬ ತಕರಾರಿದೆ. ಒಂದೊಂದು ಫಂಡ್‌ಗಳು 50 ರಿಂದ 100 ಕಂಪನಿಗಳ ಮೇಲೆ ಹಣ ಹಾಕುವಾಗ ಯಾವ ಕಂಪನಿ ಮೇಲಿನ ಹೂಡಿಕೆ ಸರಿ, ಯಾವುದು ತಪ್ಪು ಎಂದೇ ತಿಳಿಯುವುದಿಲ್ಲ ಎನ್ನುವುದು ಹೂಡಿಕೆದಾರರ ಅಳಲು. ಇಂತಹ ಹೂಡಿಕೆದಾರರಿಗೆ ಒಂದು ಒಳ್ಳೆಯ ಆಯ್ಕೆ ಫೋಕಸ್ಡ್ ಮ್ಯೂಚುಯಲ್ ಫಂಡ್. ಹೆಚ್ಚು ರಿಸ್ಕ್ ಜೊತೆ ಲಾಭವನ್ನು ತಂದುಕೊಡಬಲ್ಲ ಫೋಕಸ್ಡ್ ಫಂಡ್‌ಗಳಲ್ಲಿ ಹೂಡಿಕೆ ಹೇಗೆ? ಯಾರಿಗೆ ಈ ಫಂಡ್ ಗಳು ಸೂಕ್ತ ? ಫೋಕಸ್ಡ್ ಫಂಡ್‌ಗಳು ಹೇಗೆ ಕೆಲಸ ಮಾಡುತ್ತವೆ, ಲಾಭ ಎಷ್ಟು ? ಎಲ್ಲವನ್ನು ತಿಳಿಯೋಣ ಬನ್ನಿ.

ಏನಿದು ಫೋಕಸ್ಡ್ ಮ್ಯೂಚುಯಲ್ ಫಂಡ್?: ಕೆಲವು ಷೇರುಗಳನ್ನು ಕೇಂದ್ರೀಕರಿಸಿಕೊಂಡು ಮಾಡುವ ಮ್ಯೂಚುಯಲ್ ಫಂಡ್ ಹೂಡಿಕೆಯನ್ನು ಫೋಕಸ್ಡ್ ಮ್ಯೂಚುಯಲ್ ಫಂಡ್ ಎಂದು ಕರೆಯಲಾಗುತ್ತದೆ. ಮ್ಯೂಚುಯಲ್ ಫಂಡ್ ಕಂಪನಿಗಳಿಗೆ ನಿರ್ದಿಷ್ಟ ಫಂಡ್‌ನಲ್ಲಿ ಎಷ್ಟು ಸ್ಟಾಕ್‌ಗಳ ಮೇಲೆ ಹೂಡಿಕೆ ಮಾಡಬೇಕು ಎಂಬ ಆಯ್ಕೆ ಸ್ವಾತಂತ್ರ್ಯವಿರುತ್ತದೆ. ಅದರಂತೆ ಸಾಮಾನ್ಯವಾಗಿ ಈಕ್ವಿಟಿ ಮ್ಯೂಚುಯಲ್ ಫಂಡ್ ಕಂಪನಿಗಳು ಸುಮಾರು 50 ರಿಂದ 100 ಕಂಪನಿಗಳ ಷೇರುಗಳನ್ನು ಆಯ್ಕೆ ಮಾಡಿಕೊಂಡು ಅವುಗಳ ಮೇಲೆ ಹೂಡಿಕೆ ಮಾಡುತ್ತವೆ. ಆದರೆ ಫೋಕಸ್ಡ್ ಫಂಡ್‌ಗಳಲ್ಲಿ 20 ರಿಂದ ಗರಿಷ್ಠ 30 ಷೇರುಗಳ ಮೇಲೆ ಮಾತ್ರ ಮ್ಯೂಚುಯಲ್ ಫಂಡ್ ಕಂಪನಿಗಳು ಹೂಡಿಕೆ ಮಾಡಬಹುದು. ಫೋಕಸ್ಡ್ ಫಂಡ್ ಗಳು ಶೇ 65 ರಷ್ಟು ಹೂಡಿಕೆದಾರರ ಹಣವನ್ನು ಷೇರುಗಳ ಮೇಲೆ ಹೂಡಿಕೆ ಮಾಡಲೇಬೇಕು. ಆದರೆ ಇಂತದ್ದೇ ವಲಯದ ಷೇರುಗಳಲ್ಲಿ ಹೂಡಿಕೆ ಮಾಡಬೇಕು ಎಂಬ ಯಾವುದೇ ನಿಯಮ ಫೋಕಸ್ಡ್ ಮ್ಯೂಚುಯಲ್ ಫಂಡ್‌ಗಳಲ್ಲಿ ಇಲ್ಲ.

ಮಾಹಿತಿ ತಂತ್ರಜ್ಞಾನ, ಬ್ಯಾಂಕಿಂಗ್, ಎಂಫ್ ಎಂಸಿಜಿ ಹೀಗೆ ಯಾವುದೇ ವಲಯದ ಯಾವುದೇ ಗಾತ್ರದ ಕಂಪನಿಗಳಲ್ಲಿ ಹೂಡಿಕೆ ಮಾಡಲು ಇಲ್ಲಿ ಫಂಡ್ ಮ್ಯಾನೇಜರ್ ಗಳು ಸ್ವತಂತ್ರರು. ಅಂದರೆ ತಮಗೆ ಸರಿ ಎನಿಸುವ ಆಯ್ದ ಲಾರ್ಜ್, ಮಿಡ್ ಮತ್ತು ಸ್ಮಾಲ್ ಕ್ಯಾಪ್ ಕಂಪನಿಗಳಲ್ಲಿ ಫಂಡ್ ಮ್ಯಾನೇಜರ್‌ಗಳು ತಮ್ಮ ವಿವೇಚನೆ ಮತ್ತು ಮಾರುಕಟ್ಟೆ ಸ್ಥಿತಿಗತಿ ಆಧರಿಸಿ ಹೂಡಿಕೆ ಮಾಡಬಹುದು. ಫೋಕಸ್ಡ್ ಮ್ಯೂಚುಯಲ್ ಫಂಡ್ ಒಂದು ರೀತಿಯಲ್ಲಿ ಫ್ಲೆಕ್ಸಿಕ್ಯಾಪ್ ಮ್ಯೂಚುಯಲ್ ಫಂಡ್ ಮಾದರಿ ಹೋಲುತ್ತದೆ. ಆದರೆ ಇಲ್ಲಿ ಸೀಮಿತ ಕಂಪನಿ ಮೇಲೆ ಮಾತ್ರ ಹೂಡಿಕೆದಾರರ ಹಣ ತೊಡಗಿಸಲಾಗುತ್ತದೆ.

ಯಾರು ಹೂಡಿಕೆ ಮಾಡಬೇಕು?: ಫೋಕಸ್ಡ್ ಮ್ಯೂಚುಯಲ್ ಫಂಡ್‌ಗಳಲ್ಲಿ ಕೆಲ ಕಂಪನಿಗಳನ್ನು ಕೇಂದ್ರೀಕರಿಸಿ ಹೂಡಿಕೆ ಮಾಡುವುದರಿಂದ ರಿಸ್ಕ್ ಜಾಸ್ತಿಯಿರುತ್ತದೆ. ಫಂಡ್ ಮ್ಯಾನೇಜರ್‌ಗಳು ಅವರಿಗೆ ಉತ್ತಮ ಎನಿಸುವ ಆಯ್ದ ಕಂಪನಿಗಳ ಷೇರುಗಳ ಮೇಲೆ ಇಲ್ಲಿ ಹೂಡಿಕೆ ಮಾಡುತ್ತಾರೆ. ಆದರೆ ಫಂಡ್ ಮ್ಯಾನೇಜರ್‌ಗಳು ಆಯ್ಕೆ ಮಾಡುವ ಷೇರುಗಳ ಪೈಕಿ ಒಂದೇ ಒಂದು ಷೇರು ನಕಾರಾತ್ಮಕ ಬೆಳವಣಿಗೆ ತೋರಿಸಿದರೂ ನಷ್ಟ ಉಂಟಾಗುತ್ತದೆ. ಹಾಗಾಗಿ ಯಾರು ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಬಯಸುವರೋ ಅವರು ಈ ಫಂಡ್ ಪರಿಗಣಿಸಬಹುದು.

ಹೊಸದಾಗಿ ಮ್ಯೂಚುಯಲ್ ಫಂಡ್ ಹೂಡಿಕೆಗೆ ಬರುವವರು ಫೋಕಸ್ಡ್ ಫಂಡ್ ಆಯ್ಕೆ ಮಾಡಿಕೊಳ್ಳದಿರುವುದು ಒಳ್ಳೆಯದು. ಅಲ್ಪಾವಧಿ ಮತ್ತು ಮಧ್ಯಮಾವಧಿಯಲ್ಲಿ ಫೋಕಸ್ಡ್ ಮ್ಯೂಚುಯಲ್ ಫಂಡ್‌ಗಳು ಫ್ಲೆಕ್ಸಿ ಕ್ಯಾಪ್ ಮ್ಯೂಚುಯಲ್ ಫಂಡ್ ಗಳಿಗಿಂತ ಹೆಚ್ಚು ಅನಿಶ್ಚಿತತೆಯಿಂದ ಕೂಡಿರುತ್ತವೆ. ಹಾಗಾಗಿ ಒಂದಷ್ಟು ಹೂಡಿಕೆ ಅನುಭವವಿರುವವರು ಮಾತ್ರ ಫೋಕಸ್ಡ್ ಫಂಡ್‌ಗಳತ್ತ ಚಿತ್ತ ಹರಿಸಬಹುದು. ಫೋಕಸ್ಡ್ ಫಂಡ್‌ಗಳು ಕೇಂದ್ರೀಕೃತ ಕಂಪನಿಗಳ ಮೇಲೆ ಹೂಡಿಕೆ ಮಾಡುವುದರಿಂದ ಲಾಭಾಂಶ ತಂದುಕೊಡಲು ಸಮಯ ಹಿಡಿಯುತ್ತದೆ. ಹಾಗಾಗಿ ಇಲ್ಲಿ ಕನಿಷ್ಠ 5 ವರ್ಷಗಳ ಕಾಲ ಹೂಡಿಕೆ ಲೆಕ್ಕಾಚಾರವಿರಬೇಕು.

ಫೋಕಸ್ಡ್ ಫಂಡ್‌ಗಳ ಲಾಭಾಂಶ ಮತ್ತು ಉತ್ತಮ ಫೋಕಸ್ಡ್ ಫಂಡ್‌ಗಳು: ಫೋಕಸ್ಡ್ ಫಂಡ್‌ಗಳು ಕಳೆದ 5 ವರ್ಷಗಳ ಅವಧಿಯಲ್ಲಿ ವಾರ್ಷಿಕ ಶೇ 14.94 ರಷ್ಟು ಲಾಭಾಂಶ ಕೊಟ್ಟಿವೆ. ಕಳೆದ 10 ವರ್ಷಗಳ ಅವಧಿಯಲ್ಲಿ ವಾರ್ಷಿಕ ಶೇ 17.45 ರಷ್ಟು ಲಾಭ ಒದಗಿಸಿವೆ. ಹೂಡಿಕೆಗೆ ಯಾವುದೇ ಫಂಡ್ ಆಯ್ಕೆ ಮಾಡುವ ಮುನ್ನ ಸಾಕಷ್ಟು ಅಧ್ಯಯನ ಮಾಡಿ. ಅಗತ್ಯವೆನಿಸಿದರೆ ಪರಿಣಿತ ಹಣಕಾಸು ತಜ್ಞರ ಸಲಹೆ ಪಡೆಯಿರಿ.

ಫೋಕಸ್ಡ್ ಫಂಡ್ ಹೂಡಿಕೆ ಮೇಲಿನ ಗಳಿಕೆಗೆ ತೆರಿಗೆ ಎಷ್ಟು?: ಫೋಕಸ್ಡ್ ಮ್ಯೂಚುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ ಒಂದು ವರ್ಷದ ಒಳಗಾಗಿ ನಗದೀಕರಣಕ್ಕೆ ಮುಂದಾದರೆ ಗಳಿಕೆಯ ಮೇಲೆ ಶೇ 15ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ. ಇದನ್ನು ಅಲ್ಪಾವಧಿ ಬಂಡವಾಳ ತೆರಿಗೆ ಎನ್ನುತ್ತಾರೆ. ಫೋಕಸ್ಡ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ ಒಂದು ವರ್ಷದ ಬಳಿಕ ನಗದೀಕರಣಕ್ಕೆ ಮುಂದಾಗಿ ಲಾಭಾಂಶ ₹ 1 ಲಕ್ಷದ ಒಳಗಿದ್ದರೆ ಯಾವುದೇ ತೆರಿಗೆ ಕಟ್ಟಬೇಕಿಲ್ಲ. ₹1 ಲಕ್ಷ ಮೀರಿದ ಲಾಭಾಂಶಕ್ಕೆ ಶೇ 10 ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ. ಇದನ್ನು ದೀರ್ಘಾವಧಿ ಬಂಡವಾಳ ತೆರಿಗೆ ಎಂದು ಕರೆಯಲಾಗುತ್ತದೆ.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಮಾರಾಟದ ಒತ್ತಡಕ್ಕೆ ಕುಸಿದ ಷೇರುಪೇಟೆ ಸೂಚ್ಯಂಕಗಳು



ದಾಖಲೆ ಮಟ್ಟಕ್ಕೆ ಏರಿಕೆ ಕಂಡಿದ್ದ ಷೇರುಪೇಟೆ ಸೂಚ್ಯಂಕಗಳು ಸೆಪ್ಟೆಂಬರ್ 22 ಕ್ಕೆ ಕೊನೆಗೊಂಡ ವಾರದಲ್ಲಿ ಭಾರೀ ಕುಸಿತ ದಾಖಲಿಸಿವೆ. ವಾರದ ವಹಿವಾಟಿನ ಲೆಕ್ಕಾಚಾರದಲ್ಲಿ ಕಳೆದ 7 ತಿಂಗಳಲ್ಲೇ ಕಂಡಿರುವ ಗರಿಷ್ಠ ಕುಸಿತ ಇದಾಗಿದೆ. 66,009 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ್ದ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 2.69 ರಷ್ಟು ಕುಸಿದಿದೆ. 19,674 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 2.56 ರಷ್ಟು ತಗ್ಗಿದೆ.

ಕಚ್ಚಾ ತೈಲ ಬೆಲೆ ಏರಿಕೆ, ಅಮೆರಿಕ ಫೆಡರಲ್ ಬ್ಯಾಂಕ್ ನಿಂದ ಭವಿಷ್ಯದಲ್ಲಿ ಬಡ್ಡಿ ದರ ಹೆಚ್ಚಳ ಅಗಬಹುದು ಎಂಬ ಮುನ್ಸೂಚನೆ, ವಿದೇಶಿ ಹೂಡಿಕೆದಾರರಿಂದ ಮಾರಾಟದ ಒತ್ತಡ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 4.3, ಲೋಹ ಸೂಚ್ಯಂಕ ಶೇ 3.9, ಬ್ಯಾಂಕ್ ಸೂಚ್ಯಂಕ ಶೇ 3.5 , ಫಾರ್ಮಾ ಸೂಚ್ಯಂಕ ಶೇ 3.3 ರಷ್ಟು ಕುಸಿದಿವೆ. ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 3.3 ರಷ್ಟು ಗಳಿಸಿಕೊಂಡಿದೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್, ನೈಕಾ, ಅಲ್ಟ್ರಾ ಟೆಕ್ ಸಿಮೆಂಟ್, ಅಂಬುಜಾ ಸಿಮೆಂಟ್ಸ್, ಡಾ. ರೆಡ್ಡೀಸ್ ಲ್ಯಾಬೊರೇಟರಿಸ್, ವಿಪ್ರೊ ಕುಸಿತ ಕಂಡಿವೆ. ಬರ್ಜರ್ ಪೇಂಟ್ಸ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಬಜಾಜ್ ಹೋಲ್ಡಿಂಗ್ಸ್ ಮತ್ತು ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಜಿಗಿದಿವೆ.

ಮುನ್ನೋಟ: ಅಕ್ಟೋಬರ್‌ನಿಂದ ತ್ರೈಮಾಸಿಕ ಫಲಿತಾಂಶಗಳು ಆರಂಭಗೊಳ್ಳಲಿವೆ. ಹೂಡಿಕೆದಾರರು ಕಂಪನಿಗಳ ತ್ರೈಮಾಸಿಕ ಸಾಧನೆ ವರದಿಯತ್ತ ಚಿತ್ತಹರಿಸಿದ್ದಾರೆ. ಉಳಿದಂತೆ ಕಚ್ಚಾ ತೈಲ ಬೆಲೆ, ವಿದೇಶಿ ಹೂಡಿಕೆದಾರರ ಪಾಲ್ಗೊಳ್ಳುವಿಕೆ, ಜಾಗತಿಕ ಮಾರುಕಟ್ಟೆಗಳ ಏರಿಳಿತ ಸೇರಿದಂತೆ ಹಲವು ಅಂಶಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಜಿಆರ್‌ಟಿ ಜ್ಯುವೆಲರ್ಸ್‌ನಿಂದ ಬಳೆ ಮೇಳ

ಬೆಂಗಳೂರು: ಜಿಆರ್‌ಟಿ ಜ್ಯುವೆಲರ್ಸ್‌ನ ಬಳೆ ಮೇಳದಲ್ಲಿ ವಿವಿಧ ವಿನ್ಯಾಸದ ಚಿನ್ನ, ವಜ್ರ ಮತ್ತು ರತ್ನಗಳುಳ್ಳ ಬಳೆಗಳನ್ನು ಪ್ರದರ್ಶಿಸಲಾಗಿದೆ ಎಂದು ಜಿಆರ್‌ಟಿ ಜ್ಯುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್.ಆನಂದ್ ಅನಂತ ಪದ್ಮನಾಭನ್ ತಿಳಿಸಿದರು.

ಜಿಆರ್‌ಟಿ ಜ್ಯುವೆಲರ್ಸ್‌ನ ಬಳೆ ಮೇಳ ಉದ್ಘಾಟಿಸಿ ಮಾತನಾಡಿದ ಅವರು, 'ಚಿನ್ನದ ಆಭರಣಗಳಿಗೆ ವೇಸ್ಟೇಜ್ ಮೇಲೆ ಶೇ 20ರಷ್ಟು ರಿಯಾಯಿತಿ ಹಾಗೂ ವಜ್ರಗಳಿಗೆ ಮತ್ತು ಅನ್ ಕಟ್ ವಜ್ರಗಳ ಮೌಲ್ಯದ ಮೇಲೆ ಶೇ 10ರಷ್ಟು ರಿಯಾಯಿತಿ ನೀಡಲಾಗುತ್ತದೆ' ಎಂದು ತಿಳಿಸಿದ್ದಾರೆ.

ಜಿಆರ್‌ಟಿ ಜ್ಯುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ರಾಧಾಕೃಷ್ಣನ್ ಮಾತನಾಡಿ, 'ಗ್ರಾಹಕರಿಗೆ ಒಪ್ಪಿಗೆಯಾಗುವಂತಹ ಆಭರಣಗಳನ್ನು ತಯಾರಿಸುತ್ತಿದ್ದು, ಮೇಳದ ಅಂಗವಾಗಿ ಅತ್ಯಾಕರ್ಷಕ ಕೊಡುಗೆಗಳನ್ನು ನೀಡುತ್ತಿದ್ದೇವೆ' ಎಂದರು.

ಶುದ್ಧ ಇಂಧನ ಯೋಜನೆಯಲ್ಲಿ ಫ್ರಾನ್ಸ್‌ನ ಟೋಟಲ್ ಎನರ್ಜೀಸ್ ಭಾಗಿ

ಅದಾನಿ ಗ್ರೀನ್ ಎನರ್ಜಿ ವಿದೇಶಿ ಹೂಡಿಕೆ ₹14 ಸಾವಿರ ಕೋಟಿಗೆ ಹೆಚ್ಚಳ

ನವದೆಹಲಿ (ಪಿಟಿಐ): ಫ್ರಾನ್ಸ್‌ನ ಬೃಹತ್ ಕಂಪನಿ ಟೋಟಲ್ ಎನರ್ಜೀಸ್, ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್‌ನ (ಎಜಿಇಎಲ್) ಶುದ್ಧ ಇಂಧನ ಯೋಜನೆಗಳಲ್ಲಿ ₹2,500 ಕೋಟಿ ಹೂಡಿಕೆ ಮಾಡಲು ತೀರ್ಮಾನಿಸಿದೆ. ಇದರ ಪರಿಣಾಮವಾಗಿ, ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಭಾರತದ ಅತಿದೊಡ್ಡ ಕಂಪನಿಯಾಗಿರುವ ಎಜಿಇಎಲ್‌ನಲ್ಲಿ ಆಗಿರುವ ವಿದೇಶಿ ಹೂಡಿಕೆಯ ಮೊತ್ತವು ಸರಿಸುಮಾರು ₹14 ಸಾವಿರ ಕೋಟಿಗೆ ತಲುಪಲಿದೆ ಎಂದು ಮೂಲಗಳು ಹೇಳಿವೆ.

ಎಜಿಇಎಲ್ ಜೊತೆಗಿನ ಜಂಟಿ ಸಹಭಾಗಿತ್ವದ ಕಂಪನಿಯಲ್ಲಿ ಶೇ 50ರಷ್ಟು ಪಾಲುದಾರಿಕೆ ಹೊಂದುವುದಾಗಿ ಟೋಟಲ್ ಕಂಪನಿಯು ಕಳೆದ ವಾರ ಪ್ರಕಟಿಸಿದೆ. ಇನ್ನುಳಿದ ಶೇ 50ರಷ್ಟು ಪಾಲು ಎಜಿಇಎಲ್ ಬಳಿ ಇರಲಿದೆ. ಜಂಟಿ ಸಹಭಾಗಿತ್ವದ ಕಂಪನಿಯು ಒಟ್ಟು 1,050 ಮೆಗಾ ವಾಟ್ ವಿದ್ಯುತ್ ಉತ್ಪಾದಿಸಲಿದೆ. ಈ ಪೈಕಿ ಕೆಲವು ಘಟಕಗಳಲ್ಲಿ ವಿದ್ಯುತ್ ಉತ್ಪಾದನೆಯ ಈಗಾಗಲೇ ಆರಂಭವಾಗಿದೆ.

ಎಜಿಇಎಲ್‌ನಲ್ಲಿ ಟೋಟಲ್ ಕಂಪನಿಯು ಈಗಾಗಲೇ ಶೇ 19.7ರಷ್ಟು ಪಾಲು ಹೊಂದಿದೆ. ಅದಾನಿ ಸಮೂಹವು ಅತಿಯಾದ ಪ್ರಮಾಣದಲ್ಲಿ ಸಾಲದಲ್ಲಿ ಮುಳುಗಿದೆ ಎಂದು ಆರೋಪಿಸಿ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ವರದಿ ಪ್ರಕಟಿಸಿದ ನಂತರದಲ್ಲಿ ಟೋಟಲ್ ಕಂಪನಿಯು ಅದಾನಿ ಜೊತೆಗಿನ ಜಂಟಿ ಸಹಭಾಗಿತ್ವದಲ್ಲಿ ₹2,500 ಕೋಟಿ ಹೂಡಿಕೆ ಮಾಡುತ್ತಿರುವುದು ಇದೇ ಮೊದಲು. ಹಿಂಡನ್‌ಬರ್ಗ್ ರಿಸರ್ಚ್‌ನ ಆರೋಪ ಗಳನ್ನು ಅದಾನಿ ಸಮೂಹ ಅಲ್ಲಗಳೆದಿದೆ.

ಅದಾನಿ ಸಮೂಹಕ್ಕೆ ಸೇರಿರುವ ಎಜಿಇಎಲ್ ಕಂಪನಿಯು ಈಚಿನ ತಿಂಗಳುಗಳಲ್ಲಿ ಹಲವು ಮೂಲಗಳಿಂದ ಹೂಡಿಕೆ ಆಕರ್ಷಿಸಿದೆ. ಟೋಟಲ್ ಅಲ್ಲದೆ, ಜಿಕ್ಯೂಜಿ ಕ್ಯಾಪಿಟಲ್ ಪಾರ್ಟ್‌ನರ್ಸ್, ಕತಾರ್ ಇನ್ವೆಸ್ಟ್‌ಮೆಂಟ್ ಅಥಾರಿಟಿ ಕೂಡ ಈ ಕಂಪನಿಯಲ್ಲಿ ಹೂಡಿಕೆ ಮಾಡಿವೆ. ಈ ಮೂರು ಹೂಡಿಕೆದಾರರು ಎಜಿಇಎಲ್‌ನಲ್ಲಿ ಒಟ್ಟು ಸರಿಸುಮಾರು ₹14 ಸಾವಿರ ಕೋಟಿ ತೊಡಗಿಸಿದ್ದಾರೆ.

ಹಿಂಡನ್‌ಬರ್ಗ್ ವರದಿ ಪ್ರಕಟವಾದ ನಂತರದಲ್ಲಿ ಎಜಿಇಎಲ್ ಷೇರು ಮೌಲ್ಯವು ಕುಸಿದಿದೆ. ಅದರ ಈಗಿನ ಮೌಲ್ಯವು ಹೂಡಿಕೆದಾರರ ಪಾಲಿಗೆ ಆಕರ್ಷವಾಗಿರುವುದು ಈ ಹೂಡಿಕೆಗಳಿಗೆ ಕಾರಣ ಎಂದು ಮೂಲಗಳು ಹೇಳಿವೆ.

ಹೂಡಿಕೆಗೆ ಏನು ಕಾರಣ?

- ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಭಾರತವು ಈಗ ಮುಂಚೂಣಿ ಸ್ಥಾನದಲ್ಲಿದೆ
- ಸೌರಶಕ್ತಿ ಮತ್ತು ಪವನಶಕ್ತಿಯ ಹತ್ತಾರು ಯೋಜನೆಗಳು ಜಾರಿ ಆಗಲಿವೆ
- ಅದಾನಿ ಸಮೂಹವು ಭಾರತದಲ್ಲಿ ಈ ಕ್ಷೇತ್ರದಲ್ಲಿ ಅತಿ ದೊಡ್ಡ ಕಂಪನಿಯಾಗಿದೆ
- ಕಡಿಮೆ ವೆಚ್ಚದಲ್ಲಿ ಯೋಜನೆಗಳ ಅನುಷ್ಠಾನವು ಇಲ್ಲಿರುವ ಇನ್ನೊಂದು ಸಾಧ್ಯತೆಯಾಗಿದೆ

ಬಡ್ಡಿ ದರ ಯಥಾಸ್ಥಿತಿ ಸಾಧ್ಯತೆ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ದ್ವೈವಾರ್ಷಿಕ ಹಣಕಾಸು ನೀತಿ ಪರಾಮರ್ಶೆ ಮುಂದಿನ ತಿಂಗಳು ನಡೆಯಲಿದೆ. ಸತತ ನಾಲ್ಕನೇ ಬಾರಿಯೂ ಬಡ್ಡಿದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳುವ ಸಾಧ್ಯತೆಯೇ ಹೆಚ್ಚಾಗಿದೆ. ಚಿಲ್ಲರೆ ಹಣದುಬ್ಬರವು ಹೆಚ್ಚಾಗಿಯೇ ಇದೆ ಮತ್ತು ಅಮೆರಿಕದ ಕೇಂದ್ರೀಯ ಬ್ಯಾಂಕ್ ತನ್ನ ಆಕ್ರಮಣಶೀಲ ವರ್ತನೆಯನ್ನು ಮುಂದುವರಿಸಲಿರುವ ಕಾರಣ ಆರ್‌ಬಿಐ ಈ ನಿರ್ಧಾರಕ್ಕೆ ಬರಬಹುದು ಎಂದು ಪರಿಣತರು ಹೇಳಿದ್ದಾರೆ.

ರೆಪೊ ದರವನ್ನು ಆರ್‌ಬಿಐ 2023ರ ಫೆಬ್ರವರಿ 8ರಂದು ಶೇ 6.5ಕ್ಕೆ ಏರಿಸಿತ್ತು. ಅದಾದ ಬಳಿಕ ರೆಪೊ ದರವು ಅದೇ ಮಟ್ಟದಲ್ಲಿ ಇದೆ. ಚಿಲ್ಲರೆ ಹಣದುಬ್ಬರ ಹೆಚ್ಚಿನ ಮಟ್ಟದಲ್ಲಿ ಇರುವುದು ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಏರುತ್ತಲೇ ಇರುವುದು ಇದಕ್ಕೆ ಕಾರಣ.

ಆರ್‌ಬಿಐ ಗವರ್ನರ್ ಅವರ ನೇತೃತ್ವದ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯು ಅಕ್ಟೋಬರ್ 4-6ರವರೆಗೆ ನಿಗದಿಯಾಗಿದೆ. ರೆಪೊ ದರ ನಿಗದಿ ಮಾಡುವ ಈ ಹಿಂದಿನ ಸಭೆಯು ಆಗಸ್ಟ್‌ನಲ್ಲಿ ನಡೆದಿತ್ತು.

'ಹಣದುಬ್ಬರ ಈಗಲೂ ಹೆಚ್ಚಾಗಿಯೇ ಇದೆ ಮತ್ತು ನಗದು ಹರಿವು ಕಡಿಮೆ ಇದೆ. ಹಾಗಾಗಿ, ರೆಪೊ ದರಕ್ಕೆ ಸಂಬಂಧಿಸಿ ಯಥಾಸ್ಥಿತಿ ಕಾಯ್ದುಕೊಳ್ಳುವ ನಿರೀಕ್ಷೆ ಇದೆ. ಮೂರನೇ ತ್ರೈಮಾಸಿಕದಲ್ಲಿಯೂ ಹಣದುಬ್ಬರವು ಶೇ 5ಕ್ಕಿಂತ ಮೇಲೆಯೇ ಇರಲಿದೆ ಎಂಬುದು ಆರ್‌ಬಿಐನ ಅಂದಾಜು. ಬಹುಶಃ, ನಾಲ್ಕನೇ ತ್ರೈಮಾಸಿಕದಲ್ಲಿಯೂ ಇದು ಮುಂದುವರಿಯಲಿದೆ. ಹಾಗಾಗಿ ಯಥಾಸ್ಥಿತಿ ಕಾಯ್ದುಕೊಳ್ಳುವುದು ಅನಿವಾರ್ಯ' ಎಂದು ಬ್ಯಾಂಕ್ ಆಫ್ ಬರೋಡದ ಮುಖ್ಯ ಅರ್ಥಶಾಸ್ತ್ರಜ್ಞ ಮದನ್ ಸಬ್ನವಿಸ್ ಹೇಳಿದ್ದಾರೆ.

ಮುಂಗಾರು ಬೆಳೆ ಕುರಿತ ಅನಿಶ್ಚಿತತೆ ಮುಂದುವರಿದಿದೆ. ಧಾನ್ಯಗಳ ಇಳುವರಿ ನಿರೀಕ್ಷಿತ ಮಟ್ಟ ಮುಟ್ಟುವ ಸಾಧ್ಯತೆ ಇಲ್ಲ. ಹಾಗಾಗಿ, ಬೆಳೆ ಏರಿಕೆಯಾಗಬಹುದು ಎಂದು ಮದನ್ ವಿವರಿಸಿದ್ದಾರೆ.

ಶೇ 6ಕ್ಕಿಂತ ಮೇಲೆ ಉಳಿದ ಹಣದುಬ್ಬರ

ಗ್ರಾಹಕ ದರ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಆಗಸ್ಟ್‌ನಲ್ಲಿ ಶೇ 6.83ಕ್ಕೆ ಇಳಿದಿದೆ. ಜುಲೈ ತಿಂಗಳಲ್ಲಿ ಇದು ಶೇ 7.44ರಷ್ಟಿತ್ತು. ಹಾಗಿದ್ದರೂ ಆರ್‌ಬಿಐ ನಿಗದಿ ಮಾಡಿದ ಶೇ 6ರ ದರಕ್ಕಿಂತ ಇದು ಹೆಚ್ಚೇ ಇದೆ. ಹಣದುಬ್ಬರವು ಶೇ 4ರ ಒಳಗೇ ಇರುವಂತೆ ನೋಡಿಕೊಳ್ಳಬೇಕು ಎಂಬುದು ಆರ್‌ಬಿಐಗೆ ಸರ್ಕಾರದಿಂದ ಇರುವ ಸೂಚನೆಯಾಗಿದೆ.

ಬ್ಯುಸಿನೆಸ್ ಮೆಸೇಜಿಂಗ್, ವಾಟ್ಸ್‌ಆ್ಯಪ್‌ಗೆ ಮೆಟಾ ಆದ್ಯತೆ

ನವದೆಹಲಿ (ಪಿಟಿಐ): ಬ್ಯುಸಿನೆಸ್ ಮೆಸೇಜಿಂಗ್ (ವ್ಯಾಪಾರ ಸಂಬಂಧಿ ಸಂವಹನ) ಮತ್ತು ವಾಟ್ಸ್‌ಆ್ಯಪ್ ಭಾರತದಲ್ಲಿ ಮೆಟಾದ ಮುಂದಿನ ಪ್ರಗತಿಯ ಎಂಜಿನ್ ಮತ್ತು ಪ್ರಮುಖ ಆದ್ಯತೆ ಎಂದು ಮೆಟಾ ಇಂಡಿಯಾದ ಉಪಾಧ್ಯಕ್ಷೆ ಸಂಧ್ಯಾ ದೇವನಾಥನ್ ಹೇಳಿದ್ದಾರೆ.

ಹೆಚ್ಚು ಹೆಚ್ಚು ಉದ್ಯಮ ಸಂಸ್ಥೆಗಳು ಡಿಜಿಟಲೀಕರಣಗೊಳ್ಳುತ್ತಿವೆ ಮತ್ತು ಪರಿವರ್ತನೆ ಹೊಂದುತ್ತಿವೆ. ಹಾಗಾಗಿ, ಇಲ್ಲಿ ಅವಕಾಶಗಳು ಹೆಚ್ಚಾಗಿವೆ. ಬ್ಯಾಂಕಿಂಗ್, ಇ–ಕಾಮರ್ಸ್, ಗೇಮಿಂಗ್ ಮತ್ತು ಸಣ್ಣ ವ್ಯಾಪಾರ ಕ್ಷೇತ್ರಗಳು ಹೊಸ ಗ್ರಾಹಕರನ್ನು ತಲುಪಲು ವಾಟ್ಸ್‌ಆ್ಯಪ್ ಅನ್ನು ಬಳಸುತ್ತಿವೆ ಮತ್ತು ನೂತನ ದಾರಿಗಳನ್ನು ಕಂಡುಕೊಳ್ಳುತ್ತಿವೆ.

ಬಿಲ್ ಪಾವತಿಯಿಂದ ಹಿಡಿದು ಮೆಟ್ರೊ ರೈಲು ಟಿಕೆಟ್‌ವರೆಗೆ ಎಲ್ಲದಕ್ಕೂ ಹೊಸ ಹೊಸ ವಿಧಾನಗಳನ್ನು ಬಳಸಲಾಗುತ್ತಿದೆ. ಬ್ಯಾಂಕುಗಳು ಕೂಡ ಸ್ಟೇಟ್‌ಮೆಂಟ್‌ಗಳನ್ನು ಕಳುಹಿಸಲು ವಾಟ್ಸ್‌ಆ್ಯಪ್ ಬಳಸುತ್ತಿವೆ ಎಂದು ಸಂಧ್ಯಾ ಅವರು ವಿವರಿಸಿದ್ದಾರೆ. ಲಭ್ಯವಿರುವ ಅಂಕಿಸಂಖ್ಯೆ ಪ್ರಕಾರ, ಭಾರತದಲ್ಲಿ ಫೇಸ್‌ಬುಕ್‌ನ 44 ಕೋಟಿ ಬಳಕೆದಾರರಿದ್ದಾರೆ.

ಜಾಗತಿಕ ಮಟ್ಟದಲ್ಲಿ 20 ಕೋಟಿ ವ್ಯಾಪಾರ ಸಂಸ್ಥೆಗಳು ತಮ್ಮ ವಹಿವಾಟಿಗಾಗಿ ವಾಟ್ಸ್‌ಆ್ಯಪ್ ಅನ್ನು ಬಳಸುತ್ತಿವೆ. ಭಾರತದಲ್ಲಿ ಅಂಕಿ ಅಂಶಗಳು ಲಭ್ಯವಿಲ್ಲ. ಆದರೆ, ಭಾರಿ ದೊಡ್ಡ ಸಂಖ್ಯೆಯಲ್ಲಿಯೇ ಬಳಕೆದಾರರು ಇದ್ದಾರೆ ಎಂದು ಅವರು ತಿಳಿಸಿದ್ದಾರೆ.

ಆಕ್ಷೇಪಾರ್ಹ ಪೋಸ್ಟ್: ವಿದ್ಯಾರ್ಥಿ ಪೊಲೀಸರ ವಶಕ್ಕೆ

ಬರೇಲಿ (ಪಿಟಿಐ): ಉತ್ತರ ಪ್ರದೇಶದ ಬರೇಲಿ ಜಿಲ್ಲೆಯಲ್ಲಿ ಹಿಂದು ದೇವತೆಗಳ ಬಗ್ಗೆ ಆಕ್ಷೇಪಾರ್ಹ ಪೋಸ್ಟ್ ಹಂಚಿಕೊಂಡಿದ್ದ ಹತ್ತನೇ ತರಗತಿ ವಿದ್ಯಾರ್ಥಿಯೊಬ್ಬನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಸಾಮಾಜಿಕ ಮಾಧ್ಯಮದಲ್ಲಿ ವಿದ್ಯಾರ್ಥಿ ಪ್ರಕಟಿಸಿರುವ ಅಭಿಪ್ರಾಯಗಳು ಹಿಂದೂ ಸಮಾಜದ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಬಿಜೆಪಿ ನಾಯಕ ಮಿಂಟೂ ಸಿಂಗ್ ಹೇಳಿದ್ದಾರೆ.

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹311-471
ದ್ವಿತಳಿ (ಬಿ.ವಿ) ₹392-633

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100 ಮೊಟ್ಟೆಗೆ ₹535
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹537


ಆ್ಯಪಲ್ ಉತ್ಪಾದನಾ ಸಾಮರ್ಥ್ಯ 5 ಪಟ್ಟು ಹೆಚ್ಚಳದ ಗುರಿ

ನವದೆಹಲಿ (ಪಿಟಿಐ): ಮುಂದಿನ 4–5 ವರ್ಷದೊಳಗೆ ಭಾರತದಲ್ಲಿನ ತನ್ನ ಉತ್ಪಾದನಾ ಸಾಮರ್ಥ್ಯವನ್ನು ಐದು ಪಟ್ಟು ಹೆಚ್ಚಿಸುವ ಗುರಿಯನ್ನು ಐಫೋನ್ ತಯಾರಕ ಕಂಪನಿ ಆ್ಯಪಲ್ ಹೊಂದಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಮುಂದಿನ 5 ವರ್ಷದೊಳಗೆ, ₹3.32 ಲಕ್ಷ ಕೋಟಿ ವಹಿವಾಟು ಗುರಿ ಹೊಂದಿದೆ. ಆದರೆ ಈ ಕುರಿತು ಕಳಿಸಿದ ಇ–ಮೇಲ್‌ಗೆ ಆ್ಯಪಲ್ ಕಂಪನಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಮುಂದಿನ ವರ್ಷದಿಂದ ಭಾರತದಲ್ಲಿ ಏರ್‌ಪಾಡ್ಸ್ ಉತ್ಪಾದಿಸುವ ಯೋಜನೆ ಇದೆ. ಆದರೆ ಲ್ಯಾಪ್‌ಟಾಪ್, ಐಪ್ಯಾಡ್‌ಗಳನ್ನು ಶೀಘ್ರವೇ ತಯಾರಿಸುವ ಯಾವುದೇ ಯೋಜನೆ ಹಾಕಿಕೊಂಡಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರ್ಥಿಕತೆ ನಿರ್ವಹಣೆಯಲ್ಲಿ ಕೇಂದ್ರ ವಿಫಲ



ಜೈರಾಮ್ ರಮೇಶ್

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಎಲ್ಲಾ ಕ್ಷೇತ್ರಗಳಲ್ಲಿ ಆರ್ಥಿಕತೆಯನ್ನು ಸರಿಯಾಗಿ ನಿರ್ವಹಿಸಿಲ್ಲ. ನಿರುದ್ಯೋಗ ಮತ್ತು ಬೆಲೆ ಏರಿಕೆಯಂತಹ ಸಮಸ್ಯೆ ಪರಿಹರಿಸುವಲ್ಲಿ ಅಸಮರ್ಥವಾಗಿದೆ. ಬದಲಿಗೆ ಅಂಕಿ ಅಂಶಗಳನ್ನು ತಿರುಚುತ್ತಿದೆ ಎಂದು ಕಾಂಗ್ರೆಸ್ ಭಾನುವಾರ ಆರೋಪಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಮಾತನಾಡಿ, 'ಸಂಸತ್ತಿನ ವಿಶೇಷ ಅಧಿವೇಶನ ಮುಗಿದಿದೆ. ಅದಾನಿ ಹಗರಣ, ಜಾತಿ ಗಣತಿ, ವಿಶೇಷವಾಗಿ ಹೆಚ್ಚುತ್ತಿರುವ ನಿರುದ್ಯೋಗ, ಅಸಮಾನತೆ ಮತ್ತು ಆರ್ಥಿಕ ಸಂಕಷ್ಟದಂತಹ ಕೆಲವು ನಿರ್ಣಾಯಕ ಸಮಸ್ಯೆಗಳಿಂದ ದೇಶವನ್ನು ಬೇರೆಡೆಗೆ ಸೆಳೆಯಲು ಮೋದಿ ಸರ್ಕಾರ ಪ್ರಯತ್ನಿಸುತ್ತಿದೆ ಎಂಬುದು ಸ್ಪಷ್ಟವಾಗಿದೆ' ಎಂದು ಹೇಳಿದ್ದಾರೆ.

ಕ್ರಿಕೆಟ್: ಶುಭಮನ್ ಗಿಲ್, ಶ್ರೇಯಸ್ ಶತಕ; ಸೂರ್ಯ ವೇಗದ ಅರ್ಧಶತಕ

ಭಾರತ ಜಯಭೇರಿ: ಸರಣಿ ಕೈವಶ

ಇಂದೋರ್ (ಪಿಟಿಐ): ಹೋಳ್ಕರ್ ಮೈದಾನದಲ್ಲಿ ಭಾನುವಾರ ಸಂಜೆ ಮಳೆಯೂ ಸುರಿಯಿತು. ರನ್‌ಗಳ ಹೊಳೆಯೂ ಹರಿಯಿತು. ಅದರಲ್ಲಿ ಆಸ್ಟ್ರೇಲಿಯಾ ತಂಡದ ಜಯದ ಆಸೆಯೂ ಕೊಚ್ಚಿಹೋಯಿತು.

ಆತಿಥೇಯ ಭಾರತ ತಂಡವು 99 ರನ್‌ಗಳಿಂದ ಜಯಿಸಿತು. ಮೂರು ಏಕದಿನ ಪಂದ್ಯಗಳ ಸರಣಿಯನ್ನು 2–0 ಯಿಂದ ಕೈವಶ ಮಾಡಿಕೊಂಡಿತು. ಇದಕ್ಕೆ ಕಾರಣವಾಗಿದ್ದು ಶುಭಮನ್ ಗಿಲ್ (104; 97ಎ) ಹಾಗೂ ಶ್ರೇಯಸ್ ಅಯ್ಯರ್ (105; 90ಎ) ಅವರ ಅಬ್ಬರದ ಶತಕಗಳು. ಜೊತೆಗೆ 24 ಎಸೆತಗಳಲ್ಲಿ ಅರ್ಧಶತಕ ದಾಖಲಿಸಿದ ಸೂರ್ಯಕುಮಾರ್ ಯಾದವ್ ಕೂಡ ಭಾರತ ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 399 ರನ್ ಗಳಿಸಲು ಕಾರಣರಾದರು. ಹಂಗಾಮಿ ನಾಯಕ ಕೆ.ಎಲ್. ರಾಹುಲ್ (52; 38 ಎ) ಅರ್ಧಶತಕದ ಕಾಣಿಕೆ ನೀಡಿದರು.

ಕನ್ನಡಿಗ ಪ್ರಸಿದ್ಧ ಕೃಷ್ಣ ಆಸ್ಟ್ರೇಲಿಯಾಕ್ಕೆ ಆರಂಭದಲ್ಲಿಯೇ ಆಘಾತ ನೀಡಿದರು. 2ನೇ ಓವರ್‌ನಲ್ಲಿ 2ವಿಕೆಟ್ ಗಳಿಸಿದರು. ಆಗ ಆಸ್ಟ್ರೇಲಿಯಾ ಕೇವಲ 9 ರನ್ ಗಳಿಸಿತ್ತು. ತಂಡವು 9 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 52 ರನ್ ಗಳಿಸಿದ ಸಂದರ್ಭದಲ್ಲಿ ಮಳೆ ಸುರಿಯಿತು. ಹೀಗಾಗಿ, ಕೆಲ ಹೊತ್ತು ಆಟ ಸ್ಥಗಿತವಾಯಿತು. ಡಕ್ವರ್ಥ್ ಲೂಯಿಸ್ ನಿಯಮ ದನ್ವಯ ಗುರಿಯನ್ನು ಪರಿಷ್ಕರಿಸಲಾಯಿತು. 33 ಓವರ್‌ಗಳಲ್ಲಿ 317 ರನ್‌ಗಳ ಗುರಿ ನಿಗದಿ ಮಾಡಲಾಯಿತು. ಆದರೆ ಭಾರತದ ಬೌಲರ್‌ಗಳ ದಾಳಿಯ ಮುಂದೆ ಆಸ್ಟ್ರೇಲಿಯಾ 28.2 ಓವರ್‌ಗಳಲ್ಲಿ 217 ರನ್ ಗಳಿಸಿ ಆಲೌಟ್ ಆಯಿತು. ಸೀನ್ ಅಬಾಟ್ (54; 36ಎ) ಹೋರಾಟಕ್ಕೆ ಜಯದ ಕಾಣಿಕೆ ಸಿಗಲಿಲ್ಲ.

ದ್ವಿಶತಕದ ಜೊತೆಯಾಟ: ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸಪಾಟಾದ ಪಿಚ್ ಮರ್ಮ ಅರಿಯುವಲ್ಲಿ ಪ್ರವಾಸಿ ಬಳಗವು ವಿಫಲವಾಗಿದ್ದು ಕೆಲಹೊತ್ತಿನಲ್ಲಿಯೇ ಎದ್ದುಕೊಂಡಿತು.

ಇನಿಂಗ್ಸ್‌ನ 4ನೇ ಓವರ್‌ನಲ್ಲಿ ಋತುರಾಜ್ ವಿಕೆಟ್ ಗಳಿಸಿದ ಹ್ಯಾಜಲ್‌ವುಡ್ ಸಂಭ್ರಮಿಸಿದರು. ಆದರೆ ಆ ಹಂತದಲ್ಲಿ ಕ್ರೀಸ್‌ನಲ್ಲಿದ್ದ ಶುಭಮನ್ ಅವರ ಜತೆಗೂಡಿದ ಶ್ರೇಯಸ್ ಅಯ್ಯರ್ ಆಸ್ಟ್ರೇಲಿಯಾ ಬೌಲರ್‌ಗಳನ್ನು ದಂಡಿಸಿದರು. ಇಬ್ಬರೂ ಆಟಗಾರರು 2ನೇ ವಿಕೆಟ್ ಜೊತೆಯಾಟದಲ್ಲಿ 200 ರನ್‌ಗಳನ್ನು ಸೇರಿಸಿದರು. ಗಾಯದಿಂದಾಗಿ ದೀರ್ಘ ಸಮಯ ಆಟದಿಂದ ದೂರವಿದ್ದ ಶ್ರೇಯಸ್ ಕೆಲದಿನಗಳ ಹಿಂದಷ್ಟೇ ಮರಳಿ ದ್ದರು. ಆದರೆ ಕೆಲವು ಪಂದ್ಯಗಳಲ್ಲಿ ಲಯ ಕಂಡುಕೊಳ್ಳಲು ಪರದಾಡಿದ್ದರು.

ಆದರೆ ಈ ಪಂದ್ಯದಲ್ಲಿ ಅವರ ಆಟ ರಂಗೇರಿತು. ಗಿಲ್ ಅವರಿಗಿಂತಲೂ ವೇಗವಾಗಿ ರನ್ ಗಳಿಸಿದರು. ಚೆಂದದ ಡ್ರೈವ್, ಸ್ವೀಪ್ ಮತ್ತು ಫ್ಲಿಕ್‌ಗಳ ಮೂಲಕ ಮನರಂಜಿಸಿದರು. 41 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಗಿಲ್ 37 ಎಸೆತಗಳಲ್ಲಿ 50ರ ಗಡಿ ದಾಟಿದರು. ತಾವೆದುರಿಸಿದ 86ನೇ ಎಸೆತದಲ್ಲಿ ಶತಕ ಪೂರೈಸಿದರು. ಶ್ರೇಯಸ್‌ಗೆ ಇದು ಏಕದಿನ ಕ್ರಿಕೆಟ್‌ನಲ್ಲಿ ಮೂರನೇ ಶತಕ. 31ನೇ ಓವರ್‌ನಲ್ಲಿ ಶ್ರೇಯಸ್ ಅವರು ಸೀನ್ ಅಬಾಟ್ ಬೌಲಿಂಗ್‌ನಲ್ಲಿ ಔಟಾದರು. ಗಿಲ್ ತಮ್ಮ ಆರನೇ ಶತಕ ಪೂರೈಸಲು ಒಟ್ಟು 91 ಎಸೆತಗಳನ್ನು ಆಡಿದರು. 35ನೇ ಓವರ್‌ನಲ್ಲಿ ಅವರು ಗ್ರೀನ್ ಎಸೆತದಲ್ಲಿ ವಿಕೆಟ್ ಒಪ್ಪಿಸಿದರು.

ಸೂರ್ಯ ಶರವೇಗ: 6ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಸೂರ್ಯಕುಮಾರ್ ಎಲ್ಲ ಬೌಲರ್‌ಗಳನ್ನೂ ದಂಡಿಸಿದರು. ಕೇವಲ 24 ಎಸೆತಗಳಲ್ಲಿ ಅರ್ಧಶತಕ ದಾಖಲಿಸಿದರು. ಅಜೇಯ 72 ಗಳಿಸಿದರು. ಆರು ಸಿಕ್ಸರ್ ಹಾಗೂ ಆರು ಬೌಂಡರಿಗಳನ್ನು ಸಿಡಿಸಿದರು. ರಾಹುಲ್ ಕೂಡ ಮೂರು ಬೌಂಡರಿ ಮತ್ತು ಮೂರು ಸಿಕ್ಸರ್ ಹೊಡೆದರು.


ಶತಕ ಗಳಿಸಿದ ಸಂಭ್ರಮದಲ್ಲಿ ಶ್ರೇಯಸ್ ಅಯ್ಯರ್ –ಪಿಟಿಐ ಚಿತ್ರ

3,000 ದಾಟಿದ ಭಾರತದ ಸಿಕ್ಸರ್

ಭಾರತ ತಂಡವು ಏಕದಿನ ಪಂದ್ಯಗಳಲ್ಲಿ 3,000 ಸಿಕ್ಸರ್ ಬಾರಿಸಿದ ದಾಖಲೆ ಬರೆದಿದೆ. ಭಾರತದ ಬ್ಯಾಟರ್‌ಗಳು ಭಾನುವಾರದ ಇನ್ನಿಂಗ್ಸ್‌ನಲ್ಲಿ 18 ಸಿಕ್ಸರ್ ಬಾರಿಸಿದರು. ಒಟ್ಟು ಸಿಕ್ಸರ್ ಗಳಿಕೆಯಲ್ಲಿ ಭಾರತ (3007) ಮೊದಲ ಸ್ಥಾನದಲ್ಲಿದ್ದರೆ, ವೆಸ್ಟ್‌ಇಂಡೀಸ್ (2953), ಪಾಕಿಸ್ತಾನ (2566) ನಂತರದ ಸ್ಥಾನದಲ್ಲಿವೆ.

ಸ್ಕೋರ್ ಕಾರ್ಡ್

ಭಾರತ 5ಕ್ಕೆ399 (50 ಓವರ್‌ಗಳಲ್ಲಿ)
ಋತುರಾಜ್ ಸಿ ಅಲೆಕ್ಸ್ ಬಿ ಜೋಶ್ 8 (12ಎ, 4X2)
ಗಿಲ್ ಸಿ ಅಲೆಕ್ಸ್ ಬಿ ಗ್ರೀನ್ 104 (97ಎ, 4X6, 6X4)
ಶ್ರೇಯಸ್ ಸಿ ಮ್ಯಾಥ್ಯೂ ಬಿ ಅಬಾಟ್ 105 (90ಎ, 4X11, 6X3)
ರಾಹುಲ್ ಬಿ ಗ್ರೀನ್ 52 (38ಎ, 4X3, 6X3)
ಇಶಾನ್ ಸಿ ಅಲೆಕ್ಸ್ ಬಿ ಜಂಪಾ 31 (18ಎ, 4X2, 6X2)
ಸೂರ್ಯಕುಮಾರ್ ಔಟಾಗದೆ 72 (37ಎ, 4X6, 6X6)
ಜಡೇಜ ಔಟಾಗದೆ 13 (9ಎ, 4X1)
ಇತರೆ: 14 (ವೈಡ್ 13, ನೋಬಾಲ್ 1)
ವಿಕೆಟ್ ಪತನ: 1–16 (ಋತುರಾಜ್ ಗಾಯಕವಾಡ; 3.4), 2–216 (ಶ್ರೇಯಸ್ ಅಯ್ಯರ್; 30.5), 3–243 (ಶುಭಮನ್ ಗಿಲ್; 34.5), 4–302 (ಇಶಾನ್ ಕಿಶನ್; 40.2), 5–355 (ರಾಹುಲ್; 45.6)
ಬೌಲಿಂಗ್: ಸ್ಪೆನ್ಸರ್ ಜಾನ್ಸನ್ 8–0–61–0, ಜೋಶ್ ಹ್ಯಾಜಲ್‌ವುಡ್ 10–0–62–1, ಸೀನ್ ಅಬಾಟ್ 10–0–91–1, ಕ್ಯಾಮರಾನ್ ಗ್ರೀನ್ 10–0–103–2, ಆ್ಯಡಂ ಜಂಪಾ 10–0–67–1, ಮ್ಯಾಥ್ಯೂ ಶಾರ್ಟ್ 2–0–15–0

ಆಸ್ಟ್ರೇಲಿಯಾ 217 (28.2 ಓವರ್‌ಗಳಲ್ಲಿ) (ಡಕ್ವರ್ಥ್ ಲೂಯಿಸ್ ಪದ್ಧತಿಯನ್ವಯ ಪರಿಷ್ಕೃತ ಗುರಿ: 33 ಓವರ್‌ಗಳಲ್ಲಿ 317)
ಮ್ಯಾಥ್ಯೂ ಸಿ ಅಶ್ವಿನ್ ಬಿ ಪ್ರಸಿದ್ಧ 9 (8ಎ, 4X2)
ವಾರ್ನರ್ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 53 (39ಎ, 4X7, 6X1)
ಸ್ಮಿತ್ ಸಿ ಗಿಲ್ ಬಿ ಪ್ರಸಿದ್ಧ 0 (1ಎ)
ಮಾರ್ನಸ್ ಬಿ ಅಶ್ವಿನ್ 27 (31ಎ, 4X4)
ಇಂಗ್ಲಿಸ್ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 6 (9ಎ, 4X1)
ಅಲೆಕ್ಸ್ ಬಿ ಜಡೇಜ 14 (12ಎ, 4X2)
ಗ್ರೀನ್ ರನ್‌ಔಟ್(ಇಶಾನ್) 19 (13ಎ, 4X1, 6X1)
ಅಬಾಟ್ ಬಿ ಜಡೇಜ 54 (36ಎ, 4X4, 6X5)
ಜಂಪಾ ಬಿ ಜಡೇಜ 5 (5ಎ, 4X1)
ಹ್ಯಾಜಲ್‌ವುಡ್ ಬಿ ಶಮಿ 23 (16ಎ, 4X2, 6X2)
ಸ್ಪೆನ್ಸರ್ ಔಟಾಗದೆ 0
ಇತರೆ: 7 (ಬೈ1, ಲೆಗ್‌ಬೈ 3, ವೈಡ್ 3)
ವಿಕೆಟ್ ಪತನ: 1–9 (ಮ್ಯಾಥ್ಯೂ ಶಾರ್ಟ್; 1.2), 2–9 (ಸ್ಟೀವನ್ ಸ್ಮಿತ್; 1.3), 3–89 (ಮಾರ್ನಸ್ ಲಾಬುಷೇನ್;12.5), 4–100 (ಡೇವಿಡ್ ವಾರ್ನರ್;14.1), 5–101 (ಜೋಶ್ ಇಂಗ್ಲಿಸ್; 14.5), 6–128 (ಅಲೆಕ್ಸ್ ಕ್ಯಾರಿ; 18.2), 7–135 (ಕ್ಯಾಮರಾನ್ ಗ್ರೀನ್; 19.5), 8–140 (ಆ್ಯಡಂ ಜಂಪಾ; 20.4), 9–217 (ಜೋಶ್ ಹ್ಯಾಜಲ್‌ವುಡ್; 27.6), 10–217 (ಸೀನ್ ಅಬಾಟ್; 28.2).
ಬೌಲಿಂಗ್: ಮೊಹಮ್ಮದ್ ಶಮಿ 6–0–39–1, ಪ್ರಸಿದ್ಧ ಕೃಷ್ಣ 6–0–56–2, ಆರ್. ಅಶ್ವಿನ್ 7–0–41–3, ಶಾರ್ದೂಲ್ ಠಾಕೂರ್ 4–0–35–0, ರವೀಂದ್ರ ಜಡೇಜ 5.2–0–42–3

ಫಲಿತಾಂಶ: ಭಾರತ ತಂಡಕ್ಕೆ 99 ರನ್‌ಗಳ ಜಯ

ಫುಟ್‌ಬಾಲ್: 16ರ ಘಟ್ಟಕ್ಕೆ ಭಾರತ

ಹಾಂಗ್‌ಝೌ (ಪಿಟಿಐ): ನಾಯಕ ಸುನಿಲ್ ಚೆಟ್ರಿ ಅವರ ಗೋಲಿನ ನೆರವಿನಿಂದ ಮ್ಯಾನ್ಮಾರ್ ಜತೆ 1–1 ಗೋಲುಗಳ ಡ್ರಾ ಸಾಧಿಸಿದ ಭಾರತ ಪುರುಷರ ತಂಡ ಏಷ್ಯನ್ ಗೇಮ್ಸ್ ಫುಟ್‌ಬಾಲ್ ಟೂರ್ನಿಯ 16ರ ಘಟ್ಟಕ್ಕೆ ಪ್ರವೇಶಿಸಿತು. ಆದರೆ ಮಹಿಳಾ ತಂಡ ನಾಕೌಟ್ ಹಂತ ಪ್ರವೇಶಿಸಲು ವಿಫಲವಾಯಿತು.

ಭಾನುವಾರ ನಡೆದ ಪಂದ್ಯದ 23ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಿಕ್ ಅವಕಾಶದಲ್ಲಿ ಗೋಲು ಗಳಿಸಿದ ಚೆಟ್ರಿ, ಮುನ್ನಡೆ ದೊರಕಿಸಿಕೊಟ್ಟರು. ರಹೀಂ ಅಲಿ ಅವರನ್ನು ಎದುರಾಳಿ ಆಟಗಾರ ಗೋಲು ಆವರಣದಲ್ಲಿ ಬೀಳಿಸಿದ್ದಕ್ಕೆ ಭಾರತಕ್ಕೆ ಪೆನಾಲ್ಟಿ ದೊರೆತಿತ್ತು.

74ನೇ ನಿಮಿಷದಲ್ಲಿ ಮ್ಯಾನ್ಮಾರ್ ಸಮಬಲದ ಗೋಲು ಗಳಿಸಿತು. ಕ್ವಾವ್ ಹಟ್ವೆ ಅವರು ಹೆಡ್ ಮಾಡಿದ ಚೆಂಡು, ಭಾರತದ ಗೋಲ್‌ಕೀಪರ್ ಧೀರಜ್ ಸಿಂಗ್ ಅವರನ್ನು ತಪ್ಪಿಸಿಕೊಂಡು ಗುರಿ ಸೇರಿತು.

ಭಾರತ ಮತ್ತು ಮ್ಯಾನ್ಮಾರ್ ‘ಎ’ ಗುಂಪಿನಲ್ಲಿ ಸಮನಾದ ಪಾಯಿಂಟ್ಸ್ ಕಲೆಹಾಕಿದರೂ, ಮ್ಯಾನ್ಮಾರ್‌ಗಿಂತ ಹೆಚ್ಚು ಗೋಲುಗಳನ್ನು ಗಳಿಸಿದ್ದರಿಂದ ಚೆಟ್ರಿ ಬಳಗ ‘ರನ್ನರ್ ಅಪ್’ ಆಗಿ ಮುಂದಿನ ಸುತ್ತು ಪ್ರವೇಶಿಸಿತು.

ಭಾರತ ತಂಡ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಬಲಿಷ್ಠ ಸೌದಿ ಅರೇಬಿಯಾ ತಂಡದ ಸವಾಲು ಎದುರಿಸಲಿದೆ.

ಮಹಿಳೆಯರಿಗೆ ನಿರಾಸೆ: ವೆಂಗ್‌ಝೌನಲ್ಲಿ ನಡೆದ ಮಹಿಳೆಯರ ವಿಭಾಗದ ಪಂದ್ಯದಲ್ಲಿ ಭಾರತ 0–1 ಗೋಲಿನಿಂದ ಥಾಯ್ಲೆಂಡ್‌ಗೆ ತಲೆಬಾಗಿತು.

52ನೇ ನಿಮಿಷದಲ್ಲಿ ಗೋಲು ಗಳಿಸಿದ ಥಾಂಗ್‌ರೊಂಗ್ ಪರಿಚತ್ ಅವರು ಥಾಯ್ಲೆಂಡ್ ಗೆಲುವಿಗೆ ಕಾರಣರಾದರು. ‘ಬಿ’ ಗುಂಪಿನ ಮೊದಲ ಪಂದ್ಯದಲ್ಲಿ ಭಾರತ 1–2 ರಿಂದ ಚೀನಾ ತೈಪೆ ಕೈಯಲ್ಲಿ ಸೋತಿತ್ತು.

ಎರಡನೇ ಸೋಲು ಅನುಭವಿಸಿದ ಭಾರತ, ಕ್ವಾರ್ಟರ್ ಫೈನಲ್ ಪ್ರವೇಶಿಸುವ ಅವಕಾಶ ಕಳೆದುಕೊಂಡಿತು. ಐದು ಗುಂಪುಗಳಲ್ಲಿ ಅಗ್ರಸ್ಥಾನ ಪಡೆಯುವ ಐದು ತಂಡಗಳು ಮತ್ತು ಎರಡನೇ ಸ್ಥಾನ ಪಡೆದ ಅತ್ಯುತ್ತಮ ಮೂರು ತಂಡಗಳು ನಾಕೌಟ್ ಹಂತ ಪ್ರವೇಶಿಸಲಿವೆ.

ಈಜು: ಫೈನಲ್‌ಗೆ ಶ್ರೀಹರಿ ನಟರಾಜ್

ಹಾಂಗ್‌ಝೌ (ಪಿಟಿಐ): ಒಲಿಂಪಿಯನ್ ಈಜುಪಟು, ಕರ್ನಾಟಕದ ಶ್ರೀಹರಿ ನಟರಾಜ್ ಏಷ್ಯನ್ ಕ್ರೀಡಾಕೂಟದಲ್ಲಿ ಪುರುಷರ 100 ಮೀಟರ್ಸ್ ಬ್ಯಾಕ್ ಸ್ಟ್ರೋಕ್ ಫೈನಲ್‌ಗೆ ಅರ್ಹತೆ ಗಿಟ್ಟಿಸಿದರು.

ಭಾರತದ ಮಹಿಳಾ ತಂಡವು 4X100 ಮೀ. ಫ್ರೀಸ್ಟೈಲ್ ರಿಲೆಯಲ್ಲಿ ಫೈನಲ್ ಪ್ರವೇಶಿಸಿತು.

ಬೆಂಗಳೂರಿನ ಶ್ರೀಹರಿ 100 ಮೀ. ಬ್ಯಾಕ್‌ಸ್ಟ್ರೋಕ್ ಹೀಟ್ಸ್‌ನಲ್ಲಿ 54.71 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಎರಡನೇ ಸ್ಥಾನ ಪಡೆದರು. ಒಟ್ಟಾರೆ ಅರ್ಹತಾ ಸುತ್ತುಗಳಲ್ಲಿ 5ನೇಯವರಾದರು. ಇದರೊಂದಿಗೆ ಅಂತಿಮ ಸುತ್ತಿಗೆ ಸಾಗಿದರು.

ಮಹಿಳೆಯರ ವಿಭಾಗದಲ್ಲಿ ಮಾನಾ ಪಾಟೀಲ, ದಿನಿಧಿ ದೇಸಿಂಗು, ಜಾನ್ವಿ ಚೌಧರಿ ಮತ್ತು ಶಿವಾಂಗಿ ಶರ್ಮಾ ಫ್ರೀಸ್ಟೈಲ್ ರಿಲೆಯಲ್ಲಿ 3ನಿ,53.80ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಆರನೇ ಸ್ಥಾನದೊಂದಿಗೆ ಫೈನಲ್‌ಗೆ ಸಾಗಿದರು.

ಟಿಟಿ: ಭಾರತ ತಂಡಗಳಿಗೆ ನಿರಾಸೆ

ಹಾಂಗ್‌ಝೌ: ಭಾರತ ಪುರುಷ ಮತ್ತು ಮಹಿಳಾ ತಂಡಗಳು ಟೇಬಲ್ ಟೆನಿಸ್ ಟೂರ್ನಿಯಲ್ಲಿ ನಿರಾಶೆ ಅನುಭವಿಸಿದವು.

ಪುರುಷರ ತಂಡ ಕ್ವಾರ್ಟರ್ ಫೈನಲ್‌ನಲ್ಲಿ 0–3 ರಿಂದ ಉತ್ತರ ಕೊರಿಯಾ ಎದುರು ಪರಾಭವಗೊಂಡರೆ, ಮಹಿಳೆಯರು 16ರ ಘಟ್ಟದ ಹಣಾಹಣಿಯಲ್ಲಿ 2–3 ರಿಂದ ಥಾಯ್ಲೆಂಡ್ ಎದುರು ಸೋತರು.

ಕೊರಿಯಾ ತಂಡದ ಆಟಗಾರರ ತಂತ್ರಗಾರಿಕೆ ಮತ್ತು ಕೌಶಲದ ಮುಂದೆ ಭಾರತ ಎಡವಿತು. ಮೊದಲ ಪಂದ್ಯದಲ್ಲಿ ಹರ್ಮೀತ್ ದೇಸಾಯಿ ನೇರ ಗೇಮ್‌ಗಳಿಂದ (0–3) ಆನ್ ಜಾಯೆಹ್ಯೂನ್ ಎದುರು ಸೋತರು. ಜಿ.ಸತ್ಯನ್ ಅವರು ಪಾರ್ಕ್ ಗಾಂಗ್‌ಹ್ಯುಯೆನ್ ಕೈಯಲ್ಲಿ ಪರಾಭವಗೊಂಡರು.

0–2 ರಿಂದ ಹಿನ್ನಡೆ ಅನುಭವಿಸಿದ್ದರಿಂದ ಭಾರತಕ್ಕೆ ಮೂರನೇ ಪಂದ್ಯದಲ್ಲಿ ಗೆಲುವು ಅನಿವಾರ್ಯವಾಗಿತ್ತು. ಆದರೆ ಅಚಂತಾ ಶರತ್ ಕಮಲ್ 2–3 ರಿಂದ ಓ ಜುನ್‌ಸುಂಗ್ ಅವರಿಗೆ ಮಣಿದರು. ಇದಕ್ಕೂ ಮುನ್ನ ನಡೆದಿದ್ದ 16ರ ಘಟ್ಟದ ಹಣಾಹಣಿಯಲ್ಲಿ ಪುರುಷರ ತಂಡ 3–2 ರಿಂದ ಕಜಕಸ್ತಾನ ವಿರುದ್ಧ ಗೆದ್ದಿತ್ತು.

ಮಹಿಳೆಯರು 2–3 ರಿಂದ ಥಾಯ್ಲೆಂಡ್ ಎದುರು ಪರಾಭವಗೊಂಡರು. ಮಣಿಕಾ ಮೊದಲ ಪಂದ್ಯದಲ್ಲಿ ಒರವನ್ ಪರನಾಂಗ್ ಎದುರು ಸೋತರು. ಐಹಿಕಾ ಮುಖರ್ಜಿ ಮತ್ತು ಸುತೀರ್ಥಾ ಮುಖರ್ಜಿ ತಮ್ಮ ಪಂದ್ಯಗಳನ್ನು ಗೆದ್ದು ಭಾರತಕ್ಕೆ 2–1 ಮುನ್ನಡೆ ತಂದುಕೊಟ್ಟರು.

ಆದರೆ ರಿವರ್ಸ್ ಸಿಂಗಲ್ಸ್‌ನಲ್ಲಿ ಐಹಿಕಾ ಸೋತದ್ದರಿಂದ ಪಂದ್ಯ 2–2 ರಿಂದ ಸಮಸ್ಥಿತಿಗೆ ಬಂತು. ನಿರ್ಣಾಯಕ ಪಂದ್ಯದಲ್ಲಿ ಮಣಿಕಾ 10-12, 11-8, 11-7, 11-6 ರಿಂದ ಸುತಾಸಿನಿ ಸವೆಟ್ಟಾಬಟ್ ಎದುರು ಪರಾಭವಗೊಳ್ಳುವುದರೊಂದಿಗೆ ಭಾರತದ ಕ್ವಾರ್ಟರ್ ಫೈನಲ್ ಪ್ರವೇಶದ ಕನಸು ಅಸ್ತಮಿಸಿತು.


ಸಬ್ ಜೂನಿಯರ್ ರಾಷ್ಟ್ರೀಯ ಬಾಲಕಿಯರ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆದ ಕರ್ನಾಟಕ ತಂಡ

ಫುಟ್‌ಬಾಲ್: ಕರ್ನಾಟಕ ಚಾರಿತ್ರಿಕ ಸಾಧನೆ

ಬೆಳಗಾವಿ: ಕರ್ನಾಟಕ ತಂಡವು ಇಲ್ಲಿ ನಡೆದ 13 ವರ್ಷದೊಳಗಿನವರ ಸಬ್ ಜೂನಿಯರ್ ರಾಷ್ಟ್ರೀಯ ಬಾಲಕಿಯರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಪ್ರಶಸ್ತಿ ಜಯಿಸಿತು.

ಫೈನಲ್ ಹಣಾಹಣಿಯಲ್ಲಿ ಕರ್ನಾಟಕವು 7–2 ರಿಂದ ದೆಹಲಿ ತಂಡವನ್ನು ಮಣಿಸಿತು. ಈ ಮೂಲಕ ರಾಜ್ಯ ಬಾಲಕಿಯರು ಈ ಟೂರ್ನಿಯಲ್ಲಿ ಮೊದಲ ಬಾರಿಗೆ ಟ್ರೋಫಿ ಎತ್ತಿ ಹಿಡಿದರು.

ಕರ್ನಾಟಕ ತಂಡವು ಪಂದ್ಯದ ಮೊದಲಾರ್ಧದಲ್ಲಿ ಆರು ಗೋಲುಗಳನ್ನು ಗಳಿಸಿ ಪ್ರಾಬಲ್ಯ ಸಾಧಿಸಿತು. 2ನೇ ನಿಮಿಷದಲ್ಲಿ ಎಚ್.ಯಾಶಿಕಾ ಗೋಲು ಗಳಿಸಿ ಖಾತೆ ತೆರೆದರು. 17ನೇ ನಿಮಿಷದಲ್ಲಿ ದೆಹಲಿ ತಂಡದ ವಂಶಿಕಾ ರಾವತ್ ಅವರು ಕರ್ನಾಟಕಕ್ಕೆ ‘ಉಡುಗೊರೆ’ ಗೋಲು ನೀಡಿದರು. ರಾಜ್ಯ ತಂಡದ ನಾಯಕಿ ಅದ್ವಿಕಾ ಕನೋಜಿಯಾ (22ನೇ ನಿ.), ರಿಯಾನಾ ಲಿಜ್ ಜಾಕೋಬ್ (32ನೇ ನಿ.), ಟಿ. ಕರಿಷ್ಮಾ ಲೋಯಿಸ್ (35ನೇ ನಿ.) ಹಾಗೂ ಆದ್ಯಾ ಬಿಂಜೋಲಾ (43 ಮತ್ತು 53ನೇ ನಿ.) ಉಳಿದ ಗೋಲುಗಳನ್ನು ಗಳಿಸಿದರು.

ದೆಹಲಿ ತಂಡದ ಧ್ವನಿ ಬಿ.(44ನೇ ನಿ.), ನಾಯಕಿ ನೀತಿಕಾ ನೇಗಿ (58ನೇ ನಿ.) ತಲಾ ಒಂದು ಗೋಲು ಗಳಿಸಿದರು. ಟೂರ್ನಿಯಲ್ಲಿ 12 ತಂಡಗಳು ಪಾಲ್ಗೊಂಡಿದ್ದವು.

ಬಿಎಫ್‌ಸಿ ತಂಡಕ್ಕೆ ಗೆಲುವು

ಬೆಂಗಳೂರು: ಬಿಎಫ್‌ಸಿ ತಂಡವು ಭಾನುವಾರ ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–0ಯಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವನ್ನು ಮಣಿಸಿತು.

ಬಿಎಫ್‌ಸಿ ಪರ ಚಿಂಗಂಬ್‌ಗಮ್ ಶಿವಾಲ್ಡೋ ಸಿಂಗ್ (53ನೇ) ಮತ್ತು ಸತ್ಯೇಂದ್ರ ಸಿಂಗ್ ಯಾದವ್ (83ನೇ) ತಲಾ ಒಂದು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವು 2–2 ಗೋಲುಗಳಿಂದ ರೂಟ್ಸ್ ಎಫ್‌ಸಿ ಜತೆ ಡ್ರಾ ಸಾಧಿಸಿತು.

ಮ್ಯಾರಥಾನ್: ಇಥಿಯೋಪಿಯಾ ಓಟಗಾರ್ತಿ ಅಸ್ಸೇಫಾ ವಿಶ್ವದಾಖಲೆ

ಬರ್ಲಿನ್ (ಎಎಫ್‌ಪಿ): ಇಥಿಯೋಪಿಯಾದ ಟಿಗಿಸ್ಟ್ ಅಸ್ಸೇಫಾ ಅವರು ಮಹಿಳೆಯರ ಮ್ಯಾರಥಾನ್ ವಿಶ್ವದಾಖಲೆಯನ್ನು ಭಾನುವಾರ ಎರಡು ನಿಮಿಷಗಳಿಗಿಂತ ಹೆಚ್ಚು ಅಂತರದಿಂದ ಮುರಿದರು. ಬರ್ಲಿನ್ ಮ್ಯಾರಥಾನ್ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಕೆನ್ಯಾದ ಇಲ್ಯುಡ್ ಕಿಪ್ಚೋಗೆ ಅವರು ದಾಖಲೆ ಐದನೇ ಬಾರಿಗೆ ಅಗ್ರಸ್ಥಾನ ಪಡೆದ ಹಿರಿಮೆಗೆ ಪಾತ್ರರಾದರು.

ಅಸ್ಸೇಫಾ ಅವರು 2 ಗಂಟೆ 11 ನಿಮಿಷ 53 ಸೆಕೆಂಡಗಳಲ್ಲಿ ಗುರಿತಲುಪಿ, ಷಿಕಾಗೊದಲ್ಲಿ ಕೆನ್ಯಾದ ಬ್ರಿಜಿಡ್ ಕೊಸೆಗಿ 2019ರಲ್ಲಿ ಸ್ಥಾಪಿಸಿದ್ದ 2:14:04ರ ದಾಖಲೆಯನ್ನು ಮುರಿದರು. ‘ನಾನು ವಿಶ್ವದಾಖಲೆ ಮುರಿಯಬೇಕೆಂಬ ಆಸೆ ಹೊಂದಿದ್ದೆ. ಆದರೆ 2ನಿಮಿಷಗಳಿಗಿಂತ ಹೆಚ್ಚು ಅಂತರದಲ್ಲಿ ಆಗಬಹುದೆಂಬ ನಿರೀಕ್ಷೆಯಿರಲಿಲ್ಲ’ ಎಂದು 29 ವರ್ಷದ ಅಸ್ಸೇಫಾ ಪ್ರತಿಕ್ರಿಯಿಸಿದರು.

ಕೆನ್ಯಾದ ಶೀಲಾ ಚೆಪ್ಕಿರುಯಿ ಆರು ನಿಮಿಷಗಳಿಂದ ಹಿಂದೆ ಬಿದ್ದು ಎರಡನೇ ಸ್ಥಾನ ಪಡೆದರೆ, ತಾಂಜೇನಿಯಾದ ಮಗ್ದಲಿನಾ ಶವುರಿ ಸುಮಾರು ಏಳು ನಿಮಿಷ ಹಿಂದೆಬಿದ್ದು ಮೂರನೇ ಸ್ಥಾನ ಪಡೆದರು.


ಇಥಿಯೋಪಿಯಾದ ಟಿಗಿಸ್ಟ್ ಅಸ್ಸೇಫಾ ಎಎಫ್‌ಪಿ ಚಿತ್ರ

ಪುರುಷರ ವಿಭಾಗದಲ್ಲಿ ವಿಶ್ವದಾಖಲೆ ವೀರ ಕಿಪ್ಚೊಗೆ 2ಗಂಟೆ 02 ನಿಮಿಷ 42 ಸೆಕೆಂಡುಗಳಲ್ಲಿ ಗುರಿತಲುಪಿದರು. ಅವರು ಸ್ವದೇಶದ ವಿನ್ಸೆಂಟ್ ಕಿಪ್ಕೆಮೊಯಿ ಅವರನ್ನು 31 ಸೆಕೆಂಡುಗಳಿಂದ ಹಿಂದೆಹಾಕಿದರು. ಆದರೆ ಕಿಪ್ಚೊಗೆ ಅವರಿಗೆ ಕಳೆದ ವರ್ಷ ಸ್ಥಾಪಿಸಿದ್ದ ತಮ್ಮದೇ ದಾಖಲೆ (2:01:09) ಸುಧಾರಿಸಲು ಆಗಲಿಲ್ಲ.

ಈ ಹಿಂದೆ ಇಥಿಯೋಪಿಯದ ಹೇಲೆ ಗೆಬ್ರೆಸೆಲಾಸಿ ಅವರು ನಾಲ್ಕು ಬಾರಿ ಪ್ರಶಸ್ತಿ ಗೆದ್ದಿದ್ದು ದಾಖಲೆಯಾಗಿತ್ತು.

ಡಿಎಚ್ ಕಪ್: ವಿಸೆನ್, ಬಾಷ್ ತಂಡ ಸೆಮಿಗೆ

ಬೆಂಗಳೂರು: ವಿಸೆನ್ ಇನ್ಫೋಟೆಕ್ ಮತ್ತು ಬಾಷ್ ತಂಡಗಳು ಇಲ್ಲಿ ನಡೆಯುತ್ತಿರುವ ಟ್ರೂಆಲ್ಟ್ ಬಯೊಎನರ್ಜಿ ಡಿಎಚ್ ಕಪ್–2023 ‘ಫೈವ್ ಎ ಸೈಡ್’ ಕಾರ್ಪೊರೇಟ್ ಫುಟ್‌ಬಾಲ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದವು.

ಭಾನುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ವಿಸೆನ್ ಇನ್ಫೋಟೆಕ್ ತಂಡವು 11–3ರಿಂದ ಜಾನ್ ಡಿಸ್ಟಿಲರೀಸ್ ತಂಡವನ್ನು ಮಣಿಸಿತು. ಬಾಷ್ ತಂಡವು 9–1ರಿಂದ ಬಿಗ್ ಬ್ರೂಸ್ಕಿ ತಂಡವನ್ನು ಸೋಲಿಸಿತು.

ಇತರ ಪಂದ್ಯಗಳಲ್ಲಿ ಸ್ವಿಸ್ ರೇ ತಂಡವು 4–2ರಿಂದ ಟಿಮ್‌ಕೆನ್ ಇಂಡಿಯಾ ಲಿಮಿಟೆಡ್ ತಂಡವನ್ನು, ಐಕ್ವಿಯಾ ತಂಡವು 2–1ರಿಂದ ಎಂಯು ಸಿಗ್ಮಾ ತಂಡವನ್ನು ಮಣಿಸಿ ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿತು.

ಮೋಟೊಜಿಪಿ: ಬೆಝೆಕಿಗೆ ಪ್ರಶಸ್ತಿ


ನವದೆಹಲಿ (ಪಿಟಿಐ): ಇಟಲಿಯ ಮಾರ್ಕೊ ಬೆಝೆಕಿ ಅವರು ಭಾನುವಾರ ನಡೆದ ಚೊಚ್ಚಲ ಇಂಡಿಯನ್ ಗ್ರ್ಯಾನ್‌ಪ್ರಿ ಮೋಟೊಜಿಪಿ ರೇಸ್ ಗೆದ್ದುಕೊಂಡರು.

ಬುದ್ಧ ಇಂಟರ್‌ನ್ಯಾಷನಲ್ ಸರ್ಕಿಟ್‌ನಲ್ಲಿ ನಡೆದ ರೇಸ್‌ನಲ್ಲಿ ‘ಪೋಲ್ ಪೊಸಿಷನ್’ನಿಂದ ಸ್ಪರ್ಧೆ ಆರಂಭಿಸಿದ್ದ ‘ವಿಆರ್‌46’ ರೇಸಿಂಗ್ ತಂಡದ ಬೆಝೆಕಿ ಆರಂಭದಲ್ಲಿ ಹಿನ್ನಡೆ ಅನುಭವಿಸಿದರೂ, ಬಳಿಕ ಲಯ ಕಂಡುಕೊಂಡು ಮೊದಲಿಗರಾಗಿ ಗುರಿ ತಲುಪಿದರು.

ಡುಕಾಟಿ ಪ್ರಮ್ಯಾಕ್ ತಂಡದ ರೈಡರ್ ಸ್ಪೇನ್‌ನ ಜಾರ್ಜ್ ಮಾರ್ಟಿನ್ ಎರಡನೇ ಸ್ಥಾನ ಪಡೆದರೆ, ಯಮಾಹ ತಂಡದ ರೈಡರ್ ಫ್ರಾನ್ಸ್‌ನ ಫ್ಯಾಬಿಯೊ ಕ್ವಾರ್ಟಾರಾರೊ ಮೂರನೆಯವರಾದರು.

ಮಾರ್ಟಿನ್ ಮತ್ತು ವಿಶ್ವ ಚಾಂಪಿಯನ್ ಆಗಿರುವ ಇಟಲಿಯ ರೈಡರ್ ಫ್ರಾನ್ಸೆಸ್ಕೊ ಬನ್ಯಾಯಾ ಅವರು ಮೊದಲ ತಿರುವಿನಲ್ಲಿ ಬೆಝೆಕಿ ಅವರನ್ನು ಹಿಂದಿಕ್ಕುವಲ್ಲಿ ಯಶಸ್ವಿಯಾದರು.

ಆದರೆ ಅಲ್ಪ ಸಮಯದಲ್ಲೇ ಬೆಝೆಕಿ ಮತ್ತೆ ಮುನ್ನಡೆ ತಮ್ಮದಾಗಿಸಿಕೊಂಡರು. ಮೊದಲು ಬನ್ಯಾಯಾ ಅವರನ್ನು ಹಿಂದಿಕ್ಕಿದರೆ, ನಾಲ್ಕನೇ ತಿರುವಿನಲ್ಲಿ ಮಾರ್ಟಿನ್ ಅವರನ್ನೂ ಹಿಂದಕ್ಕೆ ತಳ್ಳಿದರು. ನಾಲ್ಕನೇ ತಿರುವಿನಲ್ಲಿ ಬೈಕ್, ಟ್ರ್ಯಾಕ್‌ನಿಂದ ಹೊರಕ್ಕೆ ಜಾರಿದ್ದು ಮಾರ್ಟಿನ್‌ಗೆ ಹಿನ್ನಡೆ ಉಂಟುಮಾಡಿತು.


ಇಟಲಿಯ ಬೆಝೆಕಿ ಅವರ ಸಂಭ್ರಮ–ಪಿಟಿಐ ಚಿತ್ರ

ಒಮ್ಮೆ ಮುನ್ನಡೆ ಪಡೆದುಕೊಂಡ ಬಳಿಕ ಬೆಝೆಕಿ, ಕೊನೆಯವರೆಗೂ ಕಾಪಾಡಿಕೊಂಡರು. ಇತರ ಸ್ಪರ್ಧಿಗಳು ಗುರಿ ಮುಟ್ಟುವ ಎಂಟು ಸೆಕೆಂಡುಗಳಿಗೆ ಮುಂಚಿತವಾಗಿ ಸ್ಪರ್ಧೆ ಕೊನೆಗೊಳಿಸಿದರು. ಅವರು 36 ನಿ.59.157 ಸೆ.ಗಳಲ್ಲಿ ರೇಸ್ ಪೂರ್ಣಗೊಳಿಸಿದರು. ಈ ಋತುವಿನಲ್ಲಿ ಬೆಝೆಕಿ ಗೆದ್ದ ಮೂರನೇ ರೇಸ್ ಇದು.

ಭಾರತ–ಚೀನಾ ಗಡಿ: ಮೂಲ ಸೌಕರ್ಯಕ್ಕೆ ವೇಗ

ಚಂಡೀಗಢ (ಪಿಟಿಐ): ‘ಭಾರತೀಯ ಸೇನೆಯ ಸುಗಮ ಕಾರ್ಯಾಚರಣೆಗೆ ಅನುಕೂಲ ಕಲ್ಪಿಸಲು ಭಾರತ ಮತ್ತು ಚೀನಾ ಗಡಿ ಪ್ರದೇಶದ ಉದ್ದಕ್ಕೂ ಕಳೆದ ಮೂರು ವರ್ಷಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ’ ಎಂದು ಗಡಿ ರಸ್ತೆ ಸಂಸ್ಥೆಯ (ಬಿಆರ್‌ಒ) ಮಹಾನಿರ್ದೇಶಕ ಲೆಫ್ಟಿನೆಂಟ್ ಜನರಲ್ ರಾಜೀವ್ ಚೌಧರಿ ಹೇಳಿದ್ದಾರೆ.

ಇಲ್ಲಿನ ಗಡಿ ಪ್ರದೇಶದಲ್ಲಿ ಬಿಆರ್‌ಒದಿಂದ ನಡೆಯುತ್ತಿರುವ ರಕ್ಷಣಾ ವಿಭಾಗಕ್ಕೆ ಸೇರಿದ ವಾಯು ಸರಕು ರವಾನೆ ಘಟಕದ ಕಾಮಗಾರಿಯನ್ನು ಭಾನುವಾರ ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು.

‘ಚೀನಾಕ್ಕೆ ಹೊಂದಿಕೊಂಡ ಗಡಿ ಪ್ರದೇಶದಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಸಂಸ್ಥೆ ಆದ್ಯತೆ ನೀಡಿದೆ. ಇದಕ್ಕೆ ಕೇಂದ್ರ ಸರ್ಕಾರ ಬೆಂಬಲ ನೀಡಿದೆ. ಹೊಸ ತಂತ್ರಜ್ಞಾನ ಹಾಗೂ ಆರ್ಥಿಕ ನೆರವು ನೀಡುತ್ತಿದೆ. ಕಳೆದ 2 ವರ್ಷಗಳಲ್ಲಿ ಸಂಸ್ಥೆಗೆ ಅನುದಾನ ಹೆಚ್ಚಿಸಿರುವುದೇ ಇದಕ್ಕೆ ನಿದರ್ಶನ’ ಎಂದರು.

‘ಬಿಆರ್‌ಒ ಸೇರಿದಂತೆ ಇತರೇ ಏಜೆನ್ಸಿಗಳು ಚೀನಾ ಗಡಿಯದಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಂಡಿವೆ. ಈಗಾಗಲೇ, ₹ 8 ಸಾವಿರ ಕೋಟಿ ವೆಚ್ಚದಡಿ 300 ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. 295 ರಸ್ತೆಗಳು, ಸೇತುವೆ, ಸುರಂಗ ಸೇರಿದಂತೆ ಆಯಕಟ್ಟಿನ ಸ್ಥಳದಲ್ಲಿ ವಾಯುನೆಲೆಗಳನ್ನು ನಿರ್ಮಿಸಲಾಗಿದೆ. ರಸ್ತೆ ನಿರ್ಮಾಣದಲ್ಲಿ ಉಕ್ಕು, ಪ್ಲಾಸ್ಟಿಕ್ ತ್ಯಾಜ್ಯವನ್ನು ಬಳಸಲಾಗಿದೆ. ಇನ್ನು ನಾಲ್ಕು ತಿಂಗಳಿನಲ್ಲಿ 60ಕ್ಕೂ ಹೆಚ್ಚು ಯೋಜನೆಗಳು ಪೂರ್ಣಗೊಳ್ಳಲಿದ್ದು, ಸಂಸ್ಥೆಯ ಕೆಲಸದ ವೇಗವೂ ಹೆಚ್ಚಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸರಕು ರವಾನೆ ಘಟಕ ನಿರ್ಮಾಣ

ಚಂಡೀಗಢದಲ್ಲಿ ಬಿಆರ್‌ಒದಿಂದ 3ಡಿ ತಂತ್ರಜ್ಞಾನ ಆಧಾರಿತ ಅತಿದೊಡ್ಡ ಹಿಮಾಂಕ್ ವಾಯು ಸರಕು ರವಾನೆ ಘಟಕ ನಿರ್ಮಿಸಲಾಗುತ್ತಿದೆ. ಬಿಆರ್‌ಒ ಜೊತೆಗೆ ಎಲ್ ಆ್ಯಂಡ್ ಟಿ ಕಂಪನಿ ನಿರ್ಮಾಣಕ್ಕೆ ಕೈಜೋಡಿಸಿದೆ.

‘ಈಗಾಗಲೇ, ಘಟಕದ ಶೇ 60ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಈ ಘಟಕದ ಕ್ಯಾಂಪಸ್ 1.98 ಎಕರೆ ವಿಸ್ತೀರ್ಣ ಹೊಂದಿದೆ. ಹಿರಿಯ, ಕಿರಿಯ ಹಾಗೂ ಇತರೇ ಅಧಿಕಾರಿಗಳಿಗೆ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಆಡಳಿತಾತ್ಮಕ ಕಟ್ಟಡ ಹಾಗೂ ರಕ್ಷಣಾ ಸಾಮಗ್ರಿಗಳ ಸಂಗ್ರಹಕ್ಕೂ ಅವಕಾಶ ಕಲ್ಪಿಸಲಾಗಿದೆ’ ಎಂದು ವಿವರಿಸಿದರು.

ಸೈಬರ್ ಅಪರಾಧ: 10 ಜಿಲ್ಲೆಗಳೇ ನೆಲೆ

ನೊಯ್ಡಾ (ಪಿಟಿಐ): ರಾಜಸ್ಥಾನದ ಭರತ್‌ಪುರ್ ಮತ್ತು ಉತ್ತರ ಪ್ರದೇಶದ ಮಥುರಾ ಸೇರಿದಂತೆ ದೇಶದ 10 ಜಿಲ್ಲೆಗಳು ಗರಿಷ್ಠ ಪ್ರಮಾಣದ ಸೈಬರ್ ಅಪರಾಧಗಳಿಗೆ ನೆಲೆಯಾಗಿವೆ. ಶೇ 80ರಷ್ಟು ಸೈಬರ್ ಅಪರಾಧ ಈ 10 ಜಿಲ್ಲೆಗಳಿಂದಲೇ ವರದಿಯಾಗಿವೆ.

ಐಐಟಿ ಕಾನ್ಪುರ ಆರಂಭಿಸಿರುವ ಫ್ಯೂಚರ್ ಕ್ರೈಮ್ ರಿಸರ್ಚ್ ಫೌಂಡೇಷನ್ (ಎಫ್‌ಸಿಆರ್‌ಎಫ್) ಹೆಸರಿನ ನವೋದ್ಯಮ ಸಂಸ್ಥೆ ನಡೆಸಿರುವ ಅಧ್ಯಯನದಿಂದ ಈ ಅಂಶ ಗೊತ್ತಾಗಿದೆ.

ಇದುವರೆಗೆ ಜಾರ್ಖಂಡ್‌ನ ಜಮ್ತಾರ ಮತ್ತು ಹರಿಯಾಣದ ನೂಹ್ ಸೈಬರ್ ಅಪರಾಧಗಳಿಗೆ ಕುಖ್ಯಾತಿ ಪಡೆದಿದ್ದವು. ಅಧ್ಯಯನದ ಪ್ರಕಾರ, ಭರತ್‌ಪುರ್‌ದಲ್ಲಿ ಗರಿಷ್ಠ ಅಂದರೆ ಶೇ 18ರಷ್ಟು ಸೈಬರ್ ಪ್ರಕರಣಗಳು ವರದಿಯಾಗಿವೆ. ಉಳಿದಂತೆ ಮಥುರಾದಲ್ಲಿ ಶೇ 12, ನೂಹ್ (ಹರಿಯಾಣ) –ಶೇ 11, ದೇವಗಢ (ಜಾರ್ಖಂಡ್) –ಶೇ 10, ಜಮ್ತಾರ (ಜಾರ್ಖಂಡ್) –ಶೇ 9.6, ಗುರುಗ್ರಾಮ (ಹರಿಯಾಣ) –ಶೇ 8.1, ಅಲ್ವರ್ (ರಾಜಸ್ಥಾನ) –ಶೇ 5.1, ಬೊಕಾರೊ (ಜಾರ್ಖಂಡ್) –ಶೇ 2.4, ಕರ್ಮತಾಂಡ–ಶೇ 2.4, ಗಿರಿದಿಹ್ (ಜಾರ್ಖಂಡ್)–ಶೇ 2.3 –ಗರಿಷ್ಠ ಸೈಬರ್ ಅಪರಾಧ ದಾಖಲಾಗಿರುವ ತಾಣಗಳಾಗಿವೆ ಎಂದು ಎಫ್‌ಸಿಆರ್‌ಎಫ್ ತಿಳಿಸಿದೆ.

ಸೈಬರ್ ಅಪರಾಧ ಗರಿಷ್ಠ ಪ್ರಮಾಣದಲ್ಲಿರುವ ಈ ಪ್ರದೇಶಗಳ ನಡುವೆ ಹಲವು ಸಮಾನ ಅಂಶಗಳೂ ಇವೆ. ಪ್ರಮುಖ ನಗರ ಕೇಂದ್ರಗಳಿಗೆ ಉತ್ತಮ ಸಂಪರ್ಕ ಸೌಲಭ್ಯವಿರುವುದು, ಸೈಬರ್ ಭದ್ರತೆಗೆ ಸಂಬಂಧಿಸಿ ಸೀಮಿತ ಪ್ರಮಾಣದಲ್ಲಿ ಮೂಲಸೌಲಭ್ಯವಿರುವುದು, ಆರ್ಥಿಕತೆಯ ಸವಾಲುಗಳು ಹಾಗೂ ಕಡಿಮೆ ಡಿಜಿಟಲ್ ಸಾಕ್ಷರತೆಯು ಈ ಅಂಶಗಳಾಗಿವೆ ಎಂದು ಅಧ್ಯಯನ ವರದಿ ಉಲ್ಲೇಖಿಸಿದೆ.

ಸೈಬರ್ ಅಪರಾಧ ಕೇಂದ್ರಗಳು ಎಂದು ಕುಖ್ಯಾತಿ ಗಳಿಸಿರುವ ನಗರಗಳು ಈಗಾಗಲೇ ಗಮನಾರ್ಹವಾದ ಸವಾಲುವೊಡ್ಡಿವೆ. ಈಗ ಗುರುತಿಸಿದ ಹೊಸ ತಾಣಗಳು ಸೈಬರ್ ಅಪರಾಧ ತಡೆಯಲು ಜನರು ಮತ್ತು ಸ್ಥಳೀಯ ಆಡಳಿತವು ಎಚ್ಚರಿಕೆ ವಹಿಸಬೇಕು ಎಂಬುದರತ್ತ ಗಮನಸೆಳೆದಿದೆ.

ಇಂಥ ಅಪರಾಧಗಳು ಗಣನೀಯವಾಗಿ ಹೆಚ್ಚಲು, ಸೀಮಿತ ಜ್ಞಾನವುಳ್ಳ ವ್ಯಕ್ತಿಯು ಲಭ್ಯವಿರುವ ಹ್ಯಾಕಿಂಗ್ ಪರಿಕರಗಳು ಮತ್ತು ಮಾಲ್‌ವೇರ್ ಅನ್ನು ಬಳಸಿಕೊಂಡು ಕೃತ್ಯ ಎಸಗಬಹುದು. ತಾಂತ್ರಿಕ ತೊಡಕು ಕಡಿಮೆ ಪ್ರಮಾಣದಲ್ಲಿದೆ ಎಂಬುದು ಕಾರಣ ಎಂದು ವರದಿ ತಿಳಿಸಿದೆ.

ನ್ಯೂಜೆರ್ಸಿಯಲ್ಲಿ 12,500 ಸ್ವಯಂಸೇವಕರ ನೆರವಿನಿಂದ ನಿರ್ಮಾಣ

ಅ.8ಕ್ಕೆ ಅತಿ ದೊಡ್ಡ ಹಿಂದೂ ದೇಗುಲ ಉದ್ಘಾಟನೆ

ರಾಬಿನ್ಸ್‌ವಿಲ್ಲೆ (ನ್ಯೂಜೆರ್ಸಿ) (ಪಿಟಿಐ): ನ್ಯೂಜೆರ್ಸಿಯಲ್ಲಿ ನಿರ್ಮಿಸಲಾದ ಅತಿ ದೊಡ್ಡ ಹಿಂದೂ ದೇಗುಲ ಬಿಎಪಿಎಸ್ (ಬೋಚಸನ್ವಾಸಿ ಶ್ರೀ ಅಕ್ಷರ ಪುರುಷೋತ್ತಮ ಸ್ವಾಮಿ ನಾರಾಯಣ ಸಂಸ್ಥೆ) ಸ್ವಾಮಿನಾರಾಯಣ ಅಕ್ಷರಧಾಮ ಅಕ್ಟೋಬರ್ 8ರಂದು ಉದ್ಘಾಟನೆಯಾಗಲಿದೆ.

ವಿದೇಶದಲ್ಲಿ ನಿರ್ಮಾಣವಾಗಿರುವ ಅತಿ ದೊಡ್ಡ ದೇವಾಲಯ ಇದಾಗಿದೆ. ನ್ಯೂಜೆರ್ಸಿಯ ಲಿಟಲ್ ರಾಬಿನ್ಸ್‌ವಿಲ್ಲೆಯಲ್ಲಿರುವ ಈ ದೇಗುಲವನ್ನು ಅಮೆರಿಕದ 12,500 ಸ್ವಯಂಸೇವಕರ ನೆರವಿನಿಂದ 183 ಎಕರೆಗೂ ಹೆಚ್ಚು ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಅಲ್ಲದೇ 12 ವರ್ಷಗಳ ಅವಧಿಯಲ್ಲಿ (2011–2023) ದೇಗುಲದ ರಚನೆಯನ್ನು ಪೂರ್ಣಗೊಳಿಸಲಾಗಿದೆ.

ಅಕ್ಷರಧಾಮ ಎಂದೇ ಕರೆಯಲಾಗುವ ಈ ದೇಗುಲದ ವಿಧ್ಯುಕ್ತ ಉದ್ಘಾಟನೆಗೂ ಮುನ್ನವೇ ಪ್ರತಿದಿನವೂ ಸಾವಿರಾರು ಹಿಂದೂ ಭಕ್ತರು ಹಾಗೂ ಇತರೆ ಧರ್ಮಗಳ ಜನರು ಇಲ್ಲಿಗೆ ಭೇಟಿ ನೀಡುತ್ತಿದ್ದಾರೆ.


ದೇಗುಲವನ್ನು ಪ್ರಾಚೀನ ಹಿಂದೂ ಧರ್ಮಗ್ರಂಥಗಳ ಆಧಾರದ ಮೇಲೆ ನಿರ್ಮಿಸಲಾಗಿದ್ದು, ಪ್ರಾಚೀನ ಭಾರತ ಸಂಸ್ಕೃತಿಯ 10 ಸಾವಿರ ವಿಗ್ರಹಗಳ ರಚನೆಗಳನ್ನು ಇದರಲ್ಲಿ ಕೆತ್ತಲಾಗಿದೆ. ಅಲ್ಲದೇ, ಭಾರತೀಯ ಸಂಗೀತವಾದ್ಯಗಳು ಹಾಗೂ ನೃತ್ಯ ಪ್ರಕಾರಗಳನ್ನೂ ಕೆತ್ತಲಾಗಿದೆ.

‘ಕೇವಲ ಹಿಂದೂಗಳು, ಭಾರತೀಯರು ಹಾಗೂ ಕೆಲವು ಗುಂಪಿನವರು ಮಾತ್ರವಲ್ಲದೆ, ವಿಶ್ವದ ಎಲ್ಲರೂ ಕೆಲವು ಮೌಲ್ಯಗಳನ್ನು ಅದರಲ್ಲೂ ಹಿಂದೂ ಸಂಪ್ರದಾಯವನ್ನು ಆಧರಿಸಿದ ಸಾರ್ವತ್ರಿಕ ಮೌಲ್ಯಗಳನ್ನು ಕಲಿಯುವ ಒಂದು ತಾಣವನ್ನು ಪಾಶ್ಚಾತ್ಯ ಭಾಗದಲ್ಲಿ ನಿರ್ಮಿಸಬೇಕೆಂದು ನಮ್ಮ ಆಧ್ಯಾತ್ಮಿಕ ಗುರುಗಳಾದ ಪ್ರಮುಖ್ ಸ್ವಾಮಿ ಮಹಾರಾಜ್ ಅವರು ಒಂದು ದೂರದೃಷ್ಟಿ ಇಟ್ಟುಕೊಂಡಿದ್ದರು. ಇದು ಅವರ ಸಂಕಲ್ಪವಾಗಿತ್ತು. ಅವರ ಸಂಕಲ್ಪ ಕಾರಣವಾಗಿಯೇ ಸ್ವಾಮಿ ನಾರಾಯಣ ಅಕ್ಷರಧಾಮ ದೇಗುಲ ನಿರ್ಮಾಣವಾಗಿದೆ’ ಎಂದು ಬಿಎಪಿಎಸ್ ಸ್ವಾಮಿನಾರಾಯಣ ಅಕ್ಷರಧಾಮ ಸಂಸ್ಥೆಯ ಧಾರ್ಮಿಕ ಗುರು ಅಕ್ಷರವತ್ಸಲದಾಸ ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

ವಿಪರೀತ ಉಷ್ಣ ಅಥವಾ ಶೀತವನ್ನು ತಡೆದುಕೊಳ್ಳಬೇಕೆನ್ನುವ ಉದ್ದೇಶದಿಂದ ಸುಣ್ಣದ ಕಲ್ಲು, ಗುಲಾಬಿ ಬಣ್ಣದ ಮರಳುಗಲ್ಲು, ಮಾರ್ಬಲ್ ಮತ್ತು ಗ್ರಾನೈಟ್‌ಗಳನ್ನು ದೇಗುಲ ನಿರ್ಮಾಣಕ್ಕೆ ಬಳಸಲಾಗಿದೆ. ಇಲ್ಲಿರುವ ಬ್ರಹ್ಮಕುಂಡಕ್ಕೆ ಭಾರತದ ಪವಿತ್ರ ನದಿಗಳ ಜಲ ಹಾಗೂ ಅಮೆರಿಕದ 50 ರಾಜ್ಯಗಳ ಪವಿತ್ರ ನದಿಗಳ ಜಲ ಸೇರಿದಂತೆ ವಿಶ್ವದಾದ್ಯಂತ 300ಕ್ಕೂ ಭಾಗಗಳಿಂದ ಜಲವನ್ನು ತರಲಾಗಿದೆ.

‘ಅಮೆರಿಕದ ಸ್ವಯಂಸೇವಕರು ದೇಗುಲ ನಿರ್ಮಾಣದಲ್ಲಿ ಭಾಗಿಯಾಗಿದ್ದಾರೆ. ಭಾರತದಿಂದ ಬಂದ ಸ್ವಯಂಸೇವಕ ಕುಶಲಕರ್ಮಿಗಳು ಅವರಿಗೆ ಮಾರ್ಗದರ್ಶನ ನೀಡಿದ್ದಾರೆ. ಈ ದೇಗುಲ ನಿರ್ಮಾಣಕ್ಕೆ ಸ್ವಯಂಸೇವಕರು ತಮ್ಮ ಅತ್ಯಮೂಲ್ಯ ಸಮಯವನ್ನು ನೀಡಿದ್ದಾರೆ. ಸ್ವಯಂಸೇವೆ ಎಂಬುದು ನಮ್ಮ ಸಂಪ್ರದಾಯ. ದೇಗುಲಕ್ಕಾಗಿ ಸೇವೆ ಮಾಡುವುದರ ಕುರಿತು ನಮ್ಮ ಹಿಂದೂ ಪರಂಪರೆಯಲ್ಲಿ, ಧರ್ಮಗ್ರಂಥಗಳಲ್ಲಿ ಉಲ್ಲೇಖ ಮಾಡಲಾಗಿದೆ’ ಎಂದು ಅಕ್ಷರವತ್ಸಲದಾಸ ತಿಳಿಸಿದರು.

‘ಬಿಎಪಿಎಸ್ ಆಧ್ಯಾತ್ಮಿಕ ಮುಖ್ಯಸ್ಥ ಮಹಾಂತಸ್ವಾಮಿ ಮಹಾರಾಜರ ಮಾರ್ಗದರ್ಶನದಲ್ಲಿ ಅ. 8ರಂದು ದೇಗುಲದ ಉದ್ಘಾಟನೆ ಮಾಡಲಾಗುವುದು. ಅಕ್ಟೋಬರ್ 18ರಿಂದ ಭಕ್ತರ ದರ್ಶನಕ್ಕೆ ಅವಕಾಶ ನೀಡಲಾಗುವುದು’ ಎಂದು ವಿವರಿಸಿದರು.


ಬಿಎಪಿಎಸ್ ಸ್ವಾಮಿನಾರಾಯಣ ಅಕ್ಷರಧಾಮ ದೇಗುಲ ಪ್ರಾಂಗಣದಲ್ಲಿರುವ ಮಂದಿರದ ನೋಟ –ಪಿಟಿಐ ಚಿತ್ರ

ಪ್ರಾಂಗಣದಲ್ಲಿ ಏನೇನಿದೆ?

ದೇಗುಲದ ಪ್ರಾಂಗಣದಲ್ಲಿ ಒಂದು ಮುಖ್ಯ ಮಂದಿರ, 12 ಉಪ ಮಂದಿರಗಳು, ಒಂಬತ್ತು ಗೋಪುರಗಳು, ಒಂಬತ್ತು ಪಿರಮಿಡ್ ಶೈಲಿಯ ಗೋಪುರಗಳು ಇವೆ. ಮಾತ್ರವಲ್ಲದೇ ಅಕ್ಷರಧಾಮವು ಸಾಂಪ್ರದಾಯಿಕ ಕಲ್ಲಿನ ವಾಸ್ತುಶಿಲ್ಪದ ಅತಿದೊಡ್ಡ ಗುಮ್ಮಟವನ್ನು ಹೊಂದಿದೆ. ಸಾವಿರಾರು ವರ್ಷ ಬಾಳಿಕೆ ಬರುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ.

ಮಹಿಳಾ ಮೀಸಲು 2034ಕ್ಕೆ: ಸಿಬಲ್

ನವದೆಹಲಿ (ಪಿಟಿಐ): ’ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆ ಮತ್ತು ಲೋಕಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಮಹಿಳಾ ಮೀಸಲು ಮಸೂದೆಯನ್ನು ಬಿಜೆಪಿ ಸರ್ಕಾರ ಮಂಡಿಸಿದೆ. ಆದರೆ, ಇದು ಜಾರಿಗೆ ಬರು ವುದೇ 2034ರ ಲೋಕಸಭಾ ಚುನಾವಣೆಯ ಹೊತ್ತಿಗೆ‘ ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಅಭಿಪ್ರಾಯಪಟ್ಟಿದ್ದಾರೆ.

'ದಿಲ್ ಸೇ' ಎಂಬ ಕಾರ್ಯಕ್ರಮಮಾತನಾಡಿದ ಅವರು, ‘ಮಹಿಳಾ ಮೀಸಲು 2029ಕ್ಕೂ ಜಾರಿಯಾಗುವುದಿಲ್ಲ. ಏಕೆಂದರೆ, ಸಂವಿಧಾನಕ್ಕೆ ತರಲಾದ 84ನೇ ತಿದ್ದುಪಡಿಯಲ್ಲಿ 1974ರ ಜನಗಣತಿ ಆಧರಿಸಿ ಲೋಕಸಭೆ ಸ್ಥಾನಗಳಿಗೆ ಮಿತಿ ವಿಧಿಸಲಾಗಿದೆ. ಇನ್ನು ನಾವು 2026ರಲ್ಲಿ ಜನಗಣತಿಯನ್ನು ಪ್ರಾರಂಭಿಸಿದರೆ ಪ್ರಕ್ರಿಯೆ ಪೂರ್ಣಗೊಳ್ಳಲು ಒಂದರಿಂದ ಒಂದೂವರೆ ವರ್ಷಗಳು ಬೇಕಾಗುತ್ತದೆ. ಅಷ್ಟೇ ಅಲ್ಲ, ನೀವು ಉತ್ತರ ಭಾರತದ ದೊಡ್ಡ ವರ್ಗದ ಬೇಡಿಕೆಯಾಗಿರುವ ಜಾತಿಯನ್ನು ಇದರಲ್ಲಿ ಸೇರಿಸಲು ಹೋದರೆ ಜಾರಿ ಪ್ರಕ್ರಿಯೆ ಮತ್ತಷ್ಟು ವಿಳಂಬವಾಗುತ್ತದೆ. ಅದರ ನಂತರ ಕ್ಷೇತ್ರ ಮರುವಿಂಗಡಣೆ ಮಾಡಬೇಕು. ಅದು ದೀರ್ಘಾವಧಿಯ ದೊಡ್ಡ ಕಸರತ್ತು. ಹೀಗಾಗಿ, ಮಹಿಳೆಯರಿಗೆ ಮೀಸಲಾತಿ ಸಿಗುವುದೇ 2034ಕ್ಕೆ‘ ಎಂದರು.

ಅತಿ ಮಧುರ ಅನುರಾಗ!

ನವದೆಹಲಿ (ಪಿಟಿಐ): ‘ಪ್ರೀತಿ’ ಒಂದು ಸುಂದರ ಅನುಭವ. ಅದು ಕೇವಲ ಹದಿಹರೆಯದವರ ಬಾಹ್ಯ ಆಕರ್ಷಣೆಯ ತೋರ್ಪಡಿಕೆಯಷ್ಟೇ ಅಲ್ಲ. ಅದಕ್ಕೆ ನಾನಾ ರೂಪಗಳಿವೆ ಎಂದು ಫಿನ್ಲೆಂಡ್‌ನ ಆಲ್ಟೊ ವಿಶ್ವವಿದ್ಯಾಲಯದ ಹೊಸ ಅಧ್ಯಯನವೊಂದು ಹೇಳಿದೆ.

ಮಾನವನ ಶರೀರದಲ್ಲಿ ಹುಟ್ಟುವ ಪ್ರೀತಿಯ ವಿಭಿನ್ನ ರೂಪಗಳು ಹಾಗೂ ಅದರ ಭಾವೋತ್ಕಟತೆಯನ್ನು ವಿಶ್ವವಿದ್ಯಾಲಯದ ಸಂಶೋಧಕರು ದಾಖಲಿಸಿದ್ದಾರೆ. ಪ್ರೀತಿ ಅರಳುವ ಬಗೆಯ ಬಗ್ಗೆ ನೂರಾರು ಜನರ ಸಮೀಕ್ಷೆ ನಡೆಸಿ ದತ್ತಾಂಶಗಳನ್ನು ಸಂಗ್ರಹಿಸಿದ್ದಾರೆ. ಪ್ರಣಯ, ಲೈಂಗಿಕ ಪ್ರೀತಿ, ಪೋಷಕರ ಪ್ರೀತಿ, ಸ್ನೇಹಿತರು, ಅಪರಿಚಿತರು, ನಿಸರ್ಗ, ದೇವರ ಮೇಲಿನ ಪ್ರೀತಿ ಸೇರಿದಂತೆ 27 ಬಗೆಯ ಪ್ರೀತಿ ಹುಟ್ಟುವ ಬಗೆಯನ್ನು ಸಂಶೋಧನಾ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಪ್ರೀತಿಗೆ ದುರ್ಬಲ ವ್ಯಕ್ತಿಯನ್ನು ಬಲಶಾಲಿಗೊಳಿಸುವ ಅಧಮ್ಯ ಶಕ್ತಿಯಿದೆ ಎಂದು ಸಂಶೋಧಕರು ಹೇಳಿದ್ದು, ‘ಫಿಲಾಸಫಿಕಲ್ ಸೈಕಾಲಜಿ’ ಜರ್ನಲ್‌ನಲ್ಲಿ ಈ ಸಂಶೋಧನಾ ವರದಿ ಪ್ರಕಟವಾಗಿದೆ.

ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದವರು ಪ್ರೀತಿಯ ವಿಭಿನ್ನ ರೂಪಗಳನ್ನು ಎಲ್ಲಿ ಅನುಭವಿಸಿದ್ದಾರೆ. ಜೊತೆಗೆ, ಆ ಪ್ರೀತಿಯು ದೈಹಿಕ ಮತ್ತು ಮಾನಸಿಕವಾಗಿ ಅವರಿಗೆ ಎಷ್ಟು ಉತ್ಕಟವಾಗಿ ಕಾಡಿದೆ ಎಂಬ ಬಗ್ಗೆ ಅವರಿಂದ ಮಾಹಿತಿ ಸಂಗ್ರಹಿಸಿದ್ದಾರೆ. ಮಾನವ ಶರೀರದಲ್ಲಿ ಉತ್ಕಟ ಪ್ರೀತಿ ಅನುಭವಕ್ಕೆ ಬರುವುದು ಯಾವಾಗ ಎಂಬುದನ್ನೂ ಸಂಶೋಧನೆಯಲ್ಲಿ ದಾಖಲಿಸಿದ್ದಾರೆ.

ಉನ್ನತ ಶಿಕ್ಷಣದ ಹಂತದಲ್ಲಿರುವಾಗ ಯುವತಿಯರಲ್ಲಿ ಪ್ರೀತಿಯ ತೀವ್ರತೆ ಹೆಚ್ಚಿರುತ್ತದೆ ಎಂದು ವರದಿ ಹೇಳಿದೆ. ‘ನಿಕಟ ಸಂಬಂಧಗಳಲ್ಲಿ ಪ್ರೀತಿ ಸದೃಶವಾಗಿರುತ್ತದೆ. ಜೊತೆಗೆ, ಅದು ಗಾಢವಾಗಿ ಅನುಭವಕ್ಕೆ ಬರುವುದು ಗಮನಾರ್ಹ ಸಂಗತಿಯಾಗಿದ್ದು, ಅದಕ್ಕೆ ಅಚ್ಚರಿಪಡಬೇಕಿಲ್ಲ’ ಎಂದು ಈ ಅಧ್ಯಯನಕ್ಕೆ ಸಹಕರಿಸಿದ ದಾರ್ಶನಿಕ ಪಾರ್ಟಿಲಿ ರಿನ್ನೆ ಹೇಳುತ್ತಾರೆ.

‘ವ್ಯಕ್ತಿಗಳ ನಡುವಿನ ಪ್ರೀತಿಯನ್ನು ಲೈಂಗಿಕ, ಲೈಂಗಿಕೇತರ ಎಂದು ವಿಂಗಡಿಸಲಾಗಿದೆ. ಪರಸ್ಪರ ಹತ್ತಿರ ಇರುವ ಪ್ರೀತಿಯ ಪ್ರಕಾರಗಳು ಲೈಂಗಿಕ, ಪ್ರಣಯಆಯಾಮವನ್ನು ಹೊಂದಿರುತ್ತವೆ’ ಎನ್ನುತ್ತಾರೆ ಅವರು.

ಅರ್ಜುನ್– ಅರವಿಂದ್ ಜೋಡಿಗೆ ಬೆಳ್ಳಿ ಪದಕ

ರೋಯಿಂಗ್ ವೀರರ ಮೋಡಿ



ಭಾನುವಾರ ನಡೆದ ರೋಯಿಂಗ್‌ನ ಪುರುಷರ ತಂಡ ವಿಭಾಗದಲ್ಲಿ ಬೆಳ್ಳಿ ಗೆದ್ದ ಭಾರತದ ಸ್ಪರ್ಧಿಗಳು –ಪಿಟಿಐ ಚಿತ್ರ

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಪದಕ ಬೇಟೆಗೆ ರೋಯಿಂಗ್ ಸ್ಪರ್ಧಿಗಳು ಭಾನುವಾರ ಭರ್ಜರಿ ಆರಂಭ ನೀಡಿದ್ದು, ಎರಡು ಬೆಳ್ಳಿ ಹಾಗೂ ಒಂದು ಕಂಚು ಗೆದ್ದುಕೊಂಡರು.

ಫುಯಾಂಗ್ ವಾಟರ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ಮಿಂಚು ಹರಿಸಿದ ಅರ್ಜುನ್ ಲಾಲ್ ಜಾಟ್ ಮತ್ತು ಅರವಿಂದ್ ಸಿಂಗ್ ಅವರು ಪುರುಷರ ಲೈಟ್‌ವೇಟ್ ಡಬಲ್ಸ್ ಸ್ಕಲ್ಸ್ ವಿಭಾಗದಲ್ಲಿ ಬೆಳ್ಳಿ ಜಯಿಸಿ, ಈ ಬಾರಿಯ ಕೂಟದಲ್ಲಿ ದೇಶಕ್ಕೆ ಮೊದಲ ಪದಕ ತಂದುಕೊಟ್ಟರು.

ಭಾರತದ ಜೋಡಿ 6 ನಿ. 28.18 ಸೆ.ಗಳಲ್ಲಿ ಎರಡನೆಯದಾಗಿ ಗುರಿ ತಲುಪಿತು. ಆತಿಥೇಯ ಚೀನಾದ ಜುನ್‌ಜಿ ಫಾನ್ ಮತ್ತು ಮಾನ್ ಸುನ್ ಅವರು 6 ನಿ. 23.16 ಸೆ.ಗಳೊಂದಿಗೆ ಚಿನ್ನ ಜಯಿಸಿತು. ಕಂಚಿನ ಪದಕವನ್ನು ಉಜ್ಬೇಕಿಸ್ತಾನದ ಶಖ್ಜೋದ್ ನುರ್ಮತೊವ್– ಸೊಬಿರ್ಜೊನ್ ಸಫರೊಲಿಯೆವ್ (6 ನಿ. 33.42 ಸೆ.) ಜೋಡಿ ತನ್ನದಾಗಿಸಿಕೊಂಡಿತು.

ಇದರ ಬೆನ್ನಲ್ಲೇ ನಡೆದ ಎಂಟು ಮಂದಿಯನ್ನೊಳಗೊಂಡ ಪುರುಷರ ಕಾಕ್ಸ್‌ಡ್ ತಂಡ ವಿಭಾಗದಲ್ಲಿ ಭಾರತಕ್ಕೆ ಬೆಳ್ಳಿ ಲಭಿಸಿತು. ನೀರಜ್, ನರೇಶ್ ಕಲ್ವಾನಿಯಾ, ನಿತೀಶ್ ಕುಮಾರ್, ಚರಣ್‌ಜೀತ್ ಸಿಂಗ್, ಜಸ್ವಿಂದರ್ ಸಿಂಗ್, ಭೀಮ್ ಸಿಂಗ್, ಪುನೀತ್ ಕುಮಾರ್ ಮತ್ತು ಆಶೀಶ್ ಅವರನ್ನೊಳಗೊಂಡ ಭಾರತ ತಂಡ 5 ನಿ. 43.01 ಸೆ.ಗಳಲ್ಲಿ ನಿಗದಿತ ದೂರ ಕ್ರಮಿಸಿತು.

ಚಿನ್ನ ಗೆದ್ದ ಚೀನಾ ತಂಡಕ್ಕೆ (5 ನಿ. 40.17 ಸೆ.) ಪ್ರಬಲ ಪೈಪೋಟಿ ನೀಡಿದ ಭಾರತ, ಕೇವಲ 2.84 ಸೆ.ಗಳಿಂದ ಹಿಂದೆ ಉಳಿಯಿತು. ಕಂಚಿನ ಪದಕ ಇಂಡೊನೇಷ್ಯಾ (5 ನಿ. 45.51 ಸೆ.) ತಂಡದ ಪಾಲಾಯಿತು.

ರೋಯಿಂಗ್‌ನಲ್ಲಿ ಭಾರತಕ್ಕೆ ದಿನದ ಮೂರನೇ ಪದಕ ಕಾಕ್ಸ್‌ಲೆಸ್ ಪೇರ್ ವಿಭಾಗದಲ್ಲಿ ಲಭಿಸಿತು. ಬಾಬುಲಾಲ್ ಯಾದವ್ ಮತ್ತು ಲೇಖರಾಮ್ ಅವರು 6 ನಿ. 50.41 ಸೆ. ಸಾಧನೆಯೊಂದಿಗೆ ಕಂಚಿನ ಪದಕ ಜಯಿಸಿದರು. ಹಾಂಗ್‌ಕಾಂಗ್ (6 ನಿ. 44.20 ಸೆ.) ಹಾಗೂ ಉಜ್ಬೇಕಿಸ್ತಾನ (6 ನಿ. 48.11 ಸೆ.) ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ತನ್ನದಾಗಿಸಿಕೊಂಡಿತು.

'ಚಿನ್ನ ಗೆಲ್ಲುವ ಗುರಿ ಇಟ್ಟುಕೊಂಡಿದ್ದೆವು. ಆದರೆ ಗಾಯದ ಕಾರಣ ಸರಿಯಾಗಿ ಅಭ್ಯಾಸ ನಡೆಸಲು ಆಗದ್ದರಿಂದ ಹಿನ್ನಡೆ ಉಂಟಾಯಿತು' ಎಂದು ಅರವಿಂದ್ ಪ್ರತಿಕ್ರಿಯಿಸಿದ್ದಾರೆ.

'ಎರಡು ತಿಂಗಳ ಹಿಂದೆ ನನಗೆ ಬೆನ್ನು ನೋವು ಕಾಣಿಸಿಕೊಂಡಿತ್ತು. ಅದರಿಂದಾಗಿ 20–25 ದಿನ ಅಭ್ಯಾಸ ನಡೆಸಲು ಆಗಿರಲಿಲ್ಲ. ಟ್ರಯಲ್ಸ್ ವೇಳೆಯೂ ನನಗೆ ನೋವು ಕಾಡಿತ್ತು' ಎಂದಿದ್ದಾರೆ.

'ಬೆನ್ನುನೋವಿಗೆ ಹೈದರಾಬಾದ್‌ನಲ್ಲಿ ಚಿಕಿತ್ಸೆ ಪಡೆದೆ. ಫಿಸಿಯೊ ಅವರಿಂದಾಗಿ ನನಗೆ ದೈಹಿಕ ಸಾಮರ್ಥ್ಯ ಮರಳಿ ಪಡೆಯಲು ಸಾಧ್ಯವಾಯಿತಲ್ಲದೆ, ಅಭ್ಯಾಸವನ್ನೂ ಆರಂಭಿಸಿದೆ. ಕಠಿಣ ಪರಿಶ್ರಮದ ಕಾರಣ ಬೆಳ್ಳಿ ಗೆದ್ದಿದ್ದೇವೆ' ಎಂದರು.

'ಪ್ಯಾರಿಸ್ ಒಲಿಂಪಿಕ್ಸ್‌ನ್ನು ಗಮನದಲ್ಲಿಟ್ಟುಕೊಂಡು ಪ್ರದರ್ಶನದಲ್ಲಿ ಸುಧಾರಣೆ ಕಂಡುಕೊಳ್ಳಲು ಪ್ರಯತ್ನಿಸುತ್ತೇವೆ. 2026ರ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಗೆಲ್ಲುವುದು ನಮ್ಮ ಗುರಿ' ಎಂದರು.

ಅರ್ಜುನ್ ಮತ್ತು ಅರವಿಂದ್ ಅವರು ಪುಣೆಯ ಆರ್ಮಿ ನೋಡಲ್ ಸೆಂಟರ್‌ನಲ್ಲಿ ಕಳೆದ ನಾಲ್ಕು ವರ್ಷಗಳಿಂದ ಜತೆಯಾಗಿ ಅಭ್ಯಾಸ ನಡೆಸುತ್ತಿದ್ದಾರೆ. ಭಾರತವು ಈ ಬಾರಿ ರೋಯಿಂಗ್‌ನಲ್ಲಿ 33 ಸ್ಪರ್ಧಿಗಳನ್ನು ಕಣಕ್ಕಿಳಿಸಿದೆ.



ಕಂಚು ಗೆದ್ದ ಬಾಬುಲಾಲ್ ಯಾದವ್ ಮತ್ತು ಲೇಖರಾಮ್ –ಪಿಟಿಐ ಚಿತ್ರ

ಭಾರತದ ಮಹಿಳೆಯರಿಗೆ ಬೆಳ್ಳಿ

ಶೂಟಿಂಗ್: 10 ಮೀ ಏರ್ ರೈಫಲ್‌ನಲ್ಲಿ ರಮಿತಾ ಜಿಂದಾಲ್‌ಗೆ ಕಂಚಿನ ಪದಕ

ಹಾಂಗ್‌ಝೌ (ಪಿಟಿಐ): ಶೂಟಿಂಗ್ ಪಟುಗಳು ಏಷ್ಯನ್ ಕ್ರೀಡಾಕೂಟದ ಮೊದಲ ದಿನವೇ ಭಾರತಕ್ಕೆ ಎರಡು ಪದಕಗಳ ಕಾಣಿಕೆ ನೀಡಿದರು.

ಭಾನುವಾರ ನಡೆದ ಮಹಿಳೆಯರ ತಂಡ ವಿಭಾಗದಲ್ಲಿ ಅನುಭವಿ ಶೂಟರ್‌ಗಳಾದ ಮೆಹುಲಿ ಘೋಷ್, ರಮಿತಾ ಜಿಂದಾಲ್ ಮತ್ತು ಆಶಿ ಚೌಕ್ಸಿ ಅವರ ಬಳಗವು ಬೆಳ್ಳಿ ಪದಕ ಜಯಿಸಿತು.

ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ರಮಿತಾ ಜಿಂದಾಲ್ 10 ಮೀಟರ್ಸ್ ರೈಫಲ್ ಸ್ಪರ್ಧೆಯಲ್ಲಿ ಕಂಚು ಪಡೆದರು. ತಂಡ ವಿಭಾಗದಲ್ಲಿ ಭಾರತವು 1886.0 ಅಂಕ ಗಳಿಸಿತು. ಚೀನಾ 1896.6 ಅಂಕಗಳನ್ನು ಗಳಿಸಿ ಚಿನ್ನದ ಪದಕ ಜಯಿಸಿತು.

ಅರ್ಹತಾ ಸುತ್ತಿನಲ್ಲಿ ಭಾರತ ತಂಡದ ರಮಿತಾ 631.9, ಮೆಹುಲಿ 630.8 ಹಾಗೂ ಆಶಿ 623.3 ಅಂಕಗಳನ್ನು ಗಳಿಸಿದರು. ಕ್ರಮವಾಗಿ ಎರಡು, ನಾಲ್ಕು ಮತ್ತು 28ನೇ ಸ್ಥಾನ ಪಡೆದರು. ಆದರೆ ಇವರೆಲ್ಲರ ಅಂಕಗಳನ್ನು ಒಟ್ಟುಗೂಡಿಸಿದಾಗ ಬೆಳ್ಳಿ ಪದಕ ಗಳಿಸಲು ಅರ್ಹರಾದರು.

2018ರಲ್ಲಿ ಜಕಾರ್ತದಲ್ಲಿ ನಡೆದಿದ್ದ ಕೂಟದಲ್ಲಿ ಮಾಡಿದ ಸಾಧನೆಗಿಂತಲೂ ಈ ಬಾರಿ ಹೆಚ್ಚು ಪದಕಗಳನ್ನು ಶೂಟಿಂಗ್ ಪಟುಗಳೂ ಗಳಿಸುವ ನಿರೀಕ್ಷೆ ಗರಿಗೆದರಿದೆ. ಚೀನಾದ ಹಾನ್ ಜಿಯಾವು, ಹಾಂಗ್ ಯೂಟಿಂಗ್ ಮತ್ತು ವಾಂಗ್ ಝಿಲಿನ್ ಅವರಿದ್ದ ತಂಡವು ಚಿನ್ನಕ್ಕೆ ಕೊರಳೊಡ್ಡಿತು. ಮಂಗೋಲಿಯಾ ತಂಡವು 1880 ಅಂಕಗಳನ್ನು ಗಳಿಸಿ ಕಂಚು ಪಡೆಯಿತು.

ರಮಿತಾಗೆ ಕಂಚು: ಜೂನಿಯರ್ ಶೂಟಿಂಗ್ ವಿಶ್ವ ಚಾಂಪಿಯನ್ ಆಗಿರುವ ರಮಿತಾ 10 ಮೀ ಏರ್ ರೈಫಲ್ ಫೈನಲ್‌ನಲ್ಲಿ ಮೂರನೇ ಸ್ಥಾನ ಗಳಿಸಿದರು. ಎಂಟು ಸ್ಪರ್ಧಿಗಳಿದ್ದ ಫೈನಲ್‌ನಲ್ಲಿ 230.1 ಅಂಕಗಳನ್ನು ಗಳಿಸುವಲ್ಲಿ ರಮಿತಾ ಯಶಸ್ವಿಯಾದರು. 19 ವರ್ಷದ ರಮಿತಾ ಅವರಿಗೆ ಫೈನಲ್‌ನಲ್ಲಿ ಕಠಿಣ ಪೈಪೋಟಿ ಎದುರಾಯಿತು.

ಆತಿಥೇಯ ಚೀನಾದ ಶೂಟಿಂಗ್ ಪಟುಗಳೂ ಈ ವಿಭಾಗದಲ್ಲಿ ಚಿನ್ನ ಮತ್ತು ಬೆಳ್ಳಿ ಎರಡನ್ನೂ ತನ್ನದಾಗಿಸಿಕೊಂಡರು. 252.7 ಅಂಕಗಳನ್ನು ಗಳಿಸಿದ ಹುವಾಂಗ್ ಯೂಟಿಂಗ್ ಚಿನ್ನ ಗೆದ್ದರು. ಜೊತೆಗೆ ಏಷ್ಯನ್ ಗೇಮ್ಸ್ ದಾಖಲೆಯನ್ನೂ ಬರೆದರು. ಹ್ಯಾನ್ ಜಿಯಾಯು 251.3 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು. 13ನೇ ಶಾಟ್‌ನಲ್ಲಿ ರಮಿತಾ ಅವರು 9.9 ರ‍್ಯಾಂಕ್ ಪಡೆದರು. ಇದರಿಂದಾಗಿ ಬೆಳ್ಳಿ ಪದಕ ತಪ್ಪಿತು. ಫೈನಲ್‌ನಲ್ಲಿದ್ದ ಭಾರತದ ಮೆಹುಲಿ ಘೋಷ್ 208.43 ಅಂಕಗಳನ್ನು ಗಳಿಸಿದರು.



ಭಾರತದ ರಮಿತಾ ಜಿಂದಾಲ್ 10 ಮೀ ಏರ್ ರೈಫಲ್ ಸ್ಪರ್ಧೆಯಲ್ಲಿ ಪಾಲ್ಗೊಂಡರು –ಎಎಫ್‌ಪಿ ಚಿತ್ರ

ಮಹಿಳಾ ಟಿ20 ಕ್ರಿಕೆಟ್ ಫೈನಲ್ ಇಂದು

ವನಿತೆಯರಿಗೆ ಚಿನ್ನದ ಮೇಲೆ ಕಣ್ಣು

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ಭಾರತಕ್ಕೆ ಚಿನ್ನದ ಕಾಣಿಕೆ ನೀಡುವ ಛಲದಲ್ಲಿ ಭಾರತ ಮಹಿಳಾ ಕ್ರಿಕೆಟ್ ತಂಡವಿದೆ.

ಭಾನುವಾರ ನಡೆದ ಮಹಿಳಾ ಟಿ20 ಕ್ರಿಕೆಟ್ ಸೆಮಿಫೈನಲ್‌ನಲ್ಲಿ ಬಾಂಗ್ಲಾದೇಶ ಎದುರು 8 ವಿಕೆಟ್‌ಗಳಿಂದ ಸುಲಭ ಜಯ ಸಾಧಿಸಿದ ತಂಡವು ಫೈನಲ್‌ಗೆ ಲಗ್ಗೆ ಇಟ್ಟಿತು. ಸೋಮವಾರ ನಡೆಯುವ ಅಂತಿಮ ಹಣಾಹಣಿಯಲ್ಲಿ ಭಾರತ ತಂಡವು ಶ್ರೀಲಂಕಾ ಎದುರು ಕಣಕ್ಕಿಳಿಯಲಿದೆ.

ಟಾಸ್ ಗೆದ್ದ ಬಾಂಗ್ಲಾದೇಶ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಭಾರತದ ಬೌಲರ್ ಪೂಜಾ ವಸ್ತ್ರಕರ್ (17ಕ್ಕೆ4) ಅವರ ದಾಳಿಗೆ ತತ್ತರಿಸಿದ ತಂಡವು 17.5 ಓವರ್‌ಗಳಲ್ಲಿ 51 ರನ್ ಗಳಿಸಿ ಆಲೌಟ್ ಆಯಿತು. ಟಿ20 ಮಾದರಿಯಲ್ಲಿ ಇದು ಬಾಂಗ್ಲಾದ ಅತ್ಯಂತ ಕನಿಷ್ಠ ಮೊತ್ತವಾಗಿದೆ.

ಭಾರತ ತಂಡವು ಚೀನಾಕ್ಕೆ ಹೊರಡುವ ಕೆಲಹೊತ್ತಿನ ಮುಂಚೆಯಷ್ಟೇ ಪೂಜಾ ಆಯ್ಕೆಯಾಗಿದ್ದರು. ಅಂಜಲಿ ಶ್ರಾವಣಿ ಅವರ ಬದಲು ತಂಡದಲ್ಲಿ ಸ್ಥಾನ ಪಡೆದಿದ್ದ ಪೂಜಾ ನಾಲ್ಕರ ಘಟ್ಟದಲ್ಲಿ ಮಿಂಚಿದರು.

ಇನ್ನೊಂದು ಸೆಮಿಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಪಾಕಿಸ್ತಾನ ತಂಡವನ್ನು ಶ್ರೀಲಂಕಾ 6 ವಿಕೆಟ್‌ಗಳಿಂದ ಪರಾಭವಗೊಳಿಸಿತು. ಪಾಕ್ ತಂಡವು 2014ರ ಇಂಚೆನ್ ಏಷ್ಯನ್ ಕೂಟದಲ್ಲಿ ಚಿನ್ನ ಗೆದ್ದಿತ್ತು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 17.5 ಓವರ್‌ಗಳಲ್ಲಿ 51 (ನಿಜರ್ ಸುಲ್ತಾನ 12, ಪೂಜಾ ವಸ್ತ್ರಕರ್ 17ಕ್ಕೆ4) ಭಾರತ: 8.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 52 (ಜಿಮಿಮಾ ರಾಡ್ರಿಗಸ್ ಔಟಾಗದೆ 20, ಶೆಫಾಲಿ ವರ್ಮಾ 17, ಮರೂಫಾ ಅಖ್ತರ್ 13ಕ್ಕೆ1) ಫಲಿತಾಂಶ: ಭಾರತ ಮಹಿಳಾ ತಂಡಕ್ಕೆ 8 ವಿಕೆಟ್‌ಗಳ ಜಯ.

ಪಾಕಿಸ್ತಾನ: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 75 (ಶಾವಲ್ ಜುಲ್ಫಿಕರ್ 16, ಒಮೈಮಾ ಸೊಹೈಲ್ 10, ಮುನೀಬಾ ಅಲಿ 13, ಉದೇಶಿಕಾ ಪ್ರಬೋಧಿನಿ 21ಕ್ಕೆ3, ಕವೀಶ ದಿಲ್ಹರಿ 15ಕ್ಕೆ2) ಶ್ರೀಲಂಕಾ: 16.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 77 (ಚಾಮರಿ ಆಟಪಟ್ಟು 14, ಅನುಷ್ಕಾ ಸಂಜೀವನಿ 15, ಹರ್ಷಿತಾ ಸಮರವಿಕ್ರಂ 23, ನೀಲಾಕ್ಷಿ ಡಿಸಿಲ್ವಾ ಔಟಾಗದೆ 18, ಸಾದಿಯಾ ಇಕ್ಬಾಲ್ 13ಕ್ಕೆ1, ಡಯಾನಾ ಬೇಗ್ 16ಕ್ಕೆ1) **ಫಲಿತಾಂಶ:** ಶ್ರೀಲಂಕಾ ತಂಡಕ್ಕೆ 6 ವಿಕೆಟ್‌ಗಳ ಜಯ.



ಪೂಜಾ ವಸ್ತ್ರಕರ್

ಏಷ್ಯನ್ ಗೇಮ್ಸ್‌ನಲ್ಲಿ ಇಂದು

ಶೂಟಿಂಗ್: ಪುರುಷರ 10 ಮೀ. ಏರ್ ರೈಫಲ್; ಅರ್ಹತೆ ಮತ್ತು ಫೈನಲ್; ಬೆಳಿಗ್ಗೆ 6.30. ಪುರುಷರ 25 ಮೀ ರಾಪಿಡ್ ಫೈರ್ ಪಿಸ್ತೂಲ್; ಅರ್ಹತೆ ಮತ್ತು ಫೈನಲ್; ಬೆಳಿಗ್ಗೆ 7
ರೋಯಿಂಗ್: ಪುರುಷರ ಸಿಂಗಲ್ಸ್ ಸ್ಕಲ್ಸ್; ಫೈನಲ್; ಬೆಳಿಗ್ಗೆ 7.30 (ಬಲರಾಜ್ ಪನ್ವಾರ್). ಪುರುಷರ ತಂಡ ವಿಭಾಗ; ಫೈನಲ್; ಬೆಳಿಗ್ಗೆ 8.06. ಮಹಿಳೆಯರ ವಿಭಾಗ; ಫೈನಲ್; ಬೆಳಿಗ್ಗೆ 8.51 **ಜಿಮ್ನಾಸ್ಟಿಕ್ಸ್:** ಮಹಿಳೆಯರ ವೈಯಕ್ತಿಕ ಸ್ಪರ್ಧೆ; ಅರ್ಹತಾ ಸುತ್ತು; ಬೆಳಿಗ್ಗೆ 7.30ರಿಂದ (ಪ್ರಣತಿ ನಾಯಕ್)
ಜುಡೊ: ಮಹಿಳೆಯರ 63 ಕೆಜಿ ವಿಭಾಗ; ಕ್ವಾರ್ಟರ್ ಫೈನಲ್, ಸೆಮಿಫೈನಲ್; ಬೆಳಿಗ್ಗೆ 7.40 (ಗರಿಮಾ ಚೌಧರಿ)
ಈಜು: ಮಹಿಳೆಯರ 200 ಮೀ. ಫ್ರೀಸ್ಟೈಲ್; ಬೆಳಿಗ್ಗೆ 8.20. ಪುರುಷರ 100 ಮೀ ಬ್ರೆಸ್ಟ್ ಸ್ಟ್ರೋಕ್; ಬೆಳಿಗ್ಗೆ 8.30 (ಲಿಖಿತ್ ಎಸ್.ಪಿ). ಪುರುಷರ 4x200 ಮೀ ಫ್ರೀಸ್ಟೈಲ್ ರಿಲೆ; ಬೆಳಿಗ್ಗೆ 9
ಬ್ಯಾಸ್ಕೆಟ್‌ಬಾಲ್: ಮಹಿಳೆಯರ 3x3; ಭಾರತ– ಉಜ್ಬೇಕಿಸ್ತಾನ; ಬೆಳಿಗ್ಗೆ 11.30
ಮಹಿಳೆಯರ ಹಾಂಡ್‌ಬಾಲ್: ಭಾರತ– ಜಪಾನ್; ಆರಂಭಿಕ ಸುತ್ತು; ಬೆಳಿಗ್ಗೆ 11.30
ಚೆಸ್: ಮಹಿಳೆಯರ ವೈಯಕ್ತಿಕ ಸ್ಪರ್ಧೆ; ಮಧ್ಯಾಹ್ನ 12.30 (ಕೋನೇರು ಹಂಪಿ, ದ್ರೋಣವಲ್ಲಿ ಹಾರಿಕಾ) ಪುರುಷರ ವೈಯಕ್ತಿಕ ಸ್ಪರ್ಧೆ; ಮಧ್ಯಾಹ್ನ 1.30 (ವಿದಿತ್ ಗುಜರಾತಿ, ಅರ್ಜುನ್ ಇರಿಗೇಶಿ)

ಬಾಕ್ಸಿಂಗ್: ಎಂಟರ ಘಟ್ಟಕ್ಕೆ ಮುನ್ನಡೆದ ಪ್ರೀತಿ

ನಿಖತ್ ಝರೀನ್‌ಗೆ ಸುಲಭ ಜಯ

ಹಾಂಗ್‌ಝೌ (ಪಿಟಿಐ): ವಿಶ್ವ ಚಾಂಪಿ ಯನ್‌ಷಿಪ್ ಫೈನಲ್‌ನ ಪುನರಾವರ್ತನೆ ಎನಿಸಿದ ಏಷ್ಯನ್ ಗೇಮ್ಸ್ ಮಹಿಳಾ ಬಾಕ್ಸಿಂಗ್ 50 ಕೆ.ಜಿ. ಸೆಣಸಾಟದಲ್ಲಿ ಭಾರತದ ತಾರೆ ನಿಖತ್ ಝರೀನ್, ವಿಯೆಟ್ನಾಂನ ಥಿ ತಮ್ ಎನ್‌ಗುಯೆನ್ ಅವರನ್ನು ಭಾನುವಾರ 5–0 ಯಿಂದ ಅಧಿಕಾರಯುತವಾಗಿ ಸೋಲಿಸಿ ಪ್ರಿಕ್ವಾರ್ಟರ್‌ಫೈನಲ್ ತಲುಪಿದರು. 54 ಕೆ.ಜಿ. ವಿಭಾಗದಲ್ಲಿ ಪ್ರೀತಿ ಪವಾರ್ ಕ್ವಾರ್ಟರ್‌ಫೈನಲ್ ತಲುಪಿದರು.

ಎರಡು ಬಾರಿಯ ವಿಶ್ವ ಚಾಂಪಿಯನ್ ಷಿಪ್ ನಿಖತ್, ಸರ್ವಾನುಮತದ ತೀರ್ಪಿನಲ್ಲಿ ಎರಡು ಬಾರಿಯ ಏಷ್ಯನ್ ಚಾಂಪಿಯನ್ ಎನ್‌ಗುಯೆನ್ ಅವರನ್ನು ಸೋಲಿಸಿದರು.

ಮೊದಲ ಎರಡು ಸುತ್ತುಗಳಲ್ಲಿ ಭಾರತದ ಸ್ಪರ್ಧಿ ಕರಾರುವಾಕ್ ಪಂಚ್ ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದರು. 2ನೇ ಸುತ್ತಿನಲ್ಲಿ ವಿಯೆ ಟ್ನಾಂನ ಸ್ಪರ್ಧಿ ಆಕ್ರಮಣಕ್ಕೆ ಮುಂದಾ ದರೂ ನಿಖತ್ ಅವಕಾಶ ನೀಡಲಿಲ್ಲ.

ಒಲಿಂಪಿಕ್ ಕೋಟಾಕ್ಕೆ ಇಲ್ಲಿ ಅವಕಾಶವಿದೆ. 'ನನ್ನ ಗಮನ ಪ್ಯಾರಿಸ್ ಗೇಮ್ಸ್‌ಗೆ ಅರ್ಹತೆ ಪಡೆಯುವತ್ತ ಕೇಂದ್ರೀಕರಿಸಿದ್ದೇನೆ' ಎಂದೂ ಅವರು ಹೇಳಿದರು. ಲೈಟ್ ಫ್ಲೈವೇಟ್ ವಿಭಾಗದಲ್ಲಿ ಸೆಮಿಫೈನಲ್ ತಲುಪುವ ನಾಲ್ಕೂ ಮಂದಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲಿದ್ದಾರೆ. ಝರೀನ್ 16ರ ಸುತ್ತಿನಲ್ಲಿ ದಕ್ಷಿಣ ಕೊರಿಯಾದ ಚೊರೊಂಗ್ ಬಾಕ್ ಅವರನ್ನು ಎದುರಿಸುವರು.

ಗೆದ್ದ ಪ್ರೀತಿ: ಪ್ರತಿಭಾನ್ವಿತ ಬಾಕ್ಸರ್ ಪ್ರೀತಿ ಪವಾರ್ ಕೂಡ ಅಮೋಘ ಪ್ರದರ್ಶನ ನೀಡಿ ಜೋರ್ಡಾನ್‌ನ ಸಿಲಿನಾ ಅಲ್ಹಾಸನತ್ ಅವರನ್ನು ಆರ್‌ಎಸ್‌ಸಿ (ರೆಫ್ರಿಯಿಂದ ಸೆಣಸಾಟ ನಿಲುಗಡೆ) ಆಧಾರದಲ್ಲಿ ಸೋಲಿಸಿದರು. ರಕ್ಷಣಾತ್ಮಕವಾಗಿ ಸೆಣಸಾಟ ಆರಂಭಿಸಿದ ಪ್ರೀತಿ ನಂತರ ಆಕ್ರಮಣಕಾರಿ ಆದರು. ಎರಡು ಮತ್ತು ಮೂರನೇ ಸುತ್ತಿನಲ್ಲಿ ಕೌಂಟ್‌ಗಳ ನಂತರ ರೆಫ್ರಿ ಹೋರಾಟ ನಿಲ್ಲಿಸಿದರು. 19 ವರ್ಷದ ಪ್ರೀತಿ ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಕಜಕಸ್ತಾನದ ಪ್ರಬಲ ಸ್ಪರ್ಧಿ ಝೈನಾ ಶೆಕೆರ್‌ಬೆಕೊವಾ ಅವರನ್ನು ದುರಿಸಲಿದ್ದಾರೆ. ಝೈನಾ ಅವರು ಮೂರು ಸಲ ವಿಶ್ವಚಾಂಪಿಯನ್‌ಷಿಪ್‌ನಲ್ಲಿ ಪದಕ ಜಯಿಸಿದ್ದಾರೆ. ಎಂಟರ ಘಟ್ಟದಲ್ಲೂ ಪ್ರೀತಿ ಅವರು ಗೆದ್ದಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲಿದ್ದಾರೆ. ಜೊತೆಗೆ ಪದಕವೂ ಖಚಿತವಾಗಲಿದೆ.



ನಿಖತ್ ಝರೀನ್ (ಎಡ) ಅವರು ವಿಯೆಟ್ನಾಂನ ಥಿ ತಮ್ ಎನ್‌ಗುಯೆನ್ ಅವರಿಗೆ ಪಂಚ್ ನೀಡಿದ ಕ್ಷಣ –ಪಿಟಿಐ ಚಿತ್ರ

ಫೆನ್ಸಿಂಗ್: ತನಿಷ್ಕಾಗೆ ಸೋಲು

ಹಾಂಗ್‌ಝೌ (ಪಿಟಿಐ): ಭಾರತದ ಫೆನ್ಸಿಂಗ್ ಸ್ಪರ್ಧಿ ತನಿಷ್ಕಾ ಖತ್ರಿ ಅವರು ಮಹಿಳೆಯರ ವೈಯಕ್ತಿಕ ಈಪೀ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಅಲ್ಪದರಲ್ಲೇ ಪದಕ ವಂಚಿತರಾದರು.

ಭಾನುವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಅವರು 7–15 ರಿಂದ ವಿಶ್ವದ ಎರಡನೇ ರ‍್ಯಾಂಕ್‌ನ ಫೆನ್ಸರ್ ಹಾಂಗ್‌ಕಾಂಗ್‌ನ ಮಾನ್ ವಾಯ್ ವಿವಿಯನ್ ಕಾಂಗ್ ಎದುರು ಪರಾಭವಗೊಂಡರು.

ತನಿಷ್ಕಾ ಲೀಗ್ ಹಂತದ 3 ಪಂದ್ಯಗಳನ್ನು ಗೆದ್ದು ಕ್ವಾರ್ಟರ್ ಫೈನಲ್‌ನಲ್ಲಿ ಸ್ಥಾನ ಪಡೆದಿದ್ದರು. ಅವರು ಸೆಮಿಫೈನಲ್ ಪ್ರವೇಶಿಸಿದ್ದರೆ ಕನಿಷ್ಠ ಕಂಚಿನ ಪದಕ ಖಚಿತವಾಗುತ್ತಿತ್ತು.

ಪದಕ ಪಟ್ಟಿ (ಅಗ್ರ 10 ದೇಶ)

ರ‍್ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	20	7	3	30
2	ದಕ್ಷಿಣ ಕೊರಿಯಾ	5	4	5	14
3	ಜಪಾನ್	2	7	5	14
4	ಹಾಂಗ್‌ಕಾಂಗ್	2	0	5	7
5	ಉಜ್ಬೇಕಿಸ್ತಾನ	1	3	3	7
6	ಚೀನಾ ತೈಪೆ	1	1	2	4
7	ಭಾರತ	0	3	2	5
8	ಇಂಡೊನೇಷ್ಯಾ	0	1	3	4
9	ಮಂಗೋಲಿಯಾ	0	1	2	3
10	ಇರಾನ್	0	1	1	2

ಮೊದಲ ದಿನ 30 ಪದಕ ಗೆದ್ದ ಚೀನಾ

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾ ಕೂಟದ ಮೊದಲ ದಿನ ಆತಿಥೇಯ ಚೀನಾ ದೇಶವು 20 ಚಿನ್ನ ಸೇರಿದಂತೆ 30 ಪದಕಗಳನ್ನು ಗೆದ್ದು, ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಈಜು ಸ್ಪರ್ಧೆಯಲ್ಲಿ 7, ರೋಯಿಂಗ್‌ನಲ್ಲಿ 6, ವುಶುನಲ್ಲಿ 2, ಶೂಟಿಂಗ್‌ನಲ್ಲಿ 2, ಪೆಂಟಾಥ್ಲಾನ್‌ನಲ್ಲಿ 2, ಜಿಮ್ನಾಸ್ಟಿಕ್ಸ್‌ನಲ್ಲಿ 1 ಹೀಗೆ 20 ಚಿನ್ನ ಜಯಿಸಿದೆ. ಜತೆಗೆ 7 ಬೆಳ್ಳಿ ಮತ್ತು 3 ಕಂಚು ಗೆದ್ದಿದೆ.

ದಕ್ಷಿಣ ಕೊರಿಯಾ 5 ಚಿನ್ನ ಸೇರಿ 14 ಪದಕ, ಜಪಾನ್ 2 ಚಿನ್ನ ಸೇರಿದಂತೆ 14 ಪದಕಗಳನ್ನು ಗೆದ್ದು, ಪದಕ ಪಟ್ಟಿಯಲ್ಲಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.



ಮಹಿಳೆಯರ 200 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಚೀನಾದ ಜಾಂಗ್ ಯುಫೆಯ್ ಚಿನ್ನ ಗೆದ್ದರು

ಟೆನಿಸ್: ಪ್ರಿ ಕ್ವಾರ್ಟರ್‌ಗೆ ನಗಾಲ್

ಹಾಂಗ್‌ಝೌ (ಪಿಟಿಐ): ಸುಮಿತ್ ನಗಾಲ್ ಅವರು ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸುಲಭ ಗೆಲುವಿನೊಂದಿಗೆ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಭಾನುವಾರ ನಡೆದ ಪಂದ್ಯದಲ್ಲಿ ಭಾರತದ ಅಗ್ರಮಾನ್ಯ ಆಟಗಾರ ನಗಾಲ್ 6–0, 6–0 ಯಿಂದ ಮಕಾವ್ ದೇಶದ ಹೊ ತಿನ್ ಮಾರ್ಕೊ ಲೆಯುಂಗ್ ಅವರನ್ನು ಮಣಿಸಿದರು. ಪುರುಷರ ಡಬಲ್ಸ್‌ನಲ್ಲಿ ಸಾಕೇತ್ ಮೈನೇನಿ– ರಾಮಕುಮಾರ್ ರಾಮನಾಥನ್ 6–2, 6–3 ರಿಂದ ನೇಪಾಳದ ಅಭಿಷೇಕ್ ಬಸ್ತೋಲಾ– ಪ್ರದೀಪ್ ಖಾಡ್ಕ ಅವರನ್ನು ಮಣಿಸಿ 16ರ ಘಟ್ಟದಲ್ಲಿ ಸ್ಥಾನ ಪಡೆದರು.

ವಾಲಿಬಾಲ್: ಪದಕ ಕನಸು ಭಗ್ನ

ಹಾಂಗ್‌ಝೌ (ಪಿಟಿಐ): ಭಾರತ ಪುರುಷರ ತಂಡದವರು ವಾಲಿಬಾಲ್ ಟೂರ್ನಿಯ ಪದಕ ಸುತ್ತು ತಲುಪಲು ವಿಫಲರಾದರು. ಭಾನುವಾರ ನಡೆದ 'ಕ್ರಾಸ್ ಗ್ರೂಪ್' ಪಂದ್ಯದಲ್ಲಿ ಜಪಾನ್ 25–16, 25–18, 25–17 ರಿಂದ ಗೆದ್ದು ಸೆಮಿಫೈನಲ್ ತಲುಪಿತು.

ಭಾರತ ತಂಡ 5 ಮತ್ತು 6ನೇ ಸ್ಥಾನವನ್ನು ನಿರ್ಣಯಿಸಲು ಮಂಗಳವಾರ ನಡೆಯುವ ಪಂದ್ಯದಲ್ಲಿ ಪಾಕಿಸ್ತಾನ ಅಥವಾ ಕತಾರ್ ತಂಡವನ್ನು ಎದುರಿಸಲಿದೆ. ಕಾಂಬೋಡಿಯ ಮತ್ತು ದಕ್ಷಿಣ ಕೊರಿಯಾ ತಂಡಗಳನ್ನು ಮಣಿಸಿ 'ಸಿ' ಗುಂಪಿನಲ್ಲಿ ಅಗ್ರಸ್ಥಾನ ಪಡೆದಿದ್ದ ಭಾರತ ತಂಡ, ಜಪಾನ್ ಆಟಗಾರರ ಸವಾಲು ಮೀರಿ ನಿಲ್ಲಲು ವಿಫಲರಾದರು.

ಚೆಸ್: ವಿದಿತ್‌ಗೆ ಅನಿರೀಕ್ಷಿತ ಆಘಾತ

ಹಂಪಿ, ಹಾರಿಕಾ ಮುನ್ನಡೆ

ಹಾಂಗ್‌ಝೌ (ಪಿಟಿಐ): ಭಾರತದ ಜಿಎಂ ವಿದಿತ್ ಎಸ್.ಗುಜರಾತಿ ಅವರು ಏಷ್ಯನ್ ಗೇಮ್ಸ್ ಚೆಸ್ ವೈಯಕ್ತಿಕ ವಿಭಾಗದ ಎರಡನೇ ಸುತ್ತಿನಲ್ಲಿ ಭಾನುವಾರ ಕಜಕಸ್ತಾನ ಐಎಂ ಕಾಯಿಬೆಕ್ ನೊಗೆರ್‌ಬೆಕ್ ಎದುರು ಅನಿರೀಕ್ಷಿತ ಸೋಲನುಭವಿಸಿದರು. ಈ ಟೂರ್ನಿಯಲ್ಲಿ ವಿದಿತ್ ಅವರು ಮೂರನೇ ಅತ್ಯಧಿಕ ರ‍್ಯಾಂಕಿಂಗ್ ಹೊಂದಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಭಾರತದ ಪ್ರಮುಖ ಆಟಗಾರ್ತಿಯರು– ಕೋನೇರು ಹಂಪಿ ಮತ್ತು ದ್ರೋಣವಲ್ಲಿ ಹಾರಿಕಾ ಅವರು ಮೊದಲ ಎರಡೂ ಸುತ್ತುಗಳಲ್ಲಿ ಜಯಗಳಿಸಿದರು. ಇವರ ಜೊತೆ ಇನ್ನೂ ಮೂವರು ಆಟಗಾರ್ತಿಯರು ತಲಾ ಎರಡು ಅಂಕ ಗಳಿಸಿದ್ದಾರೆ.

ಮೊದಲ ಸುತ್ತಿನಲ್ಲಿ ಬಾಂಗ್ಲಾದೇಶದ ಐಎಂ ಮೊಹಮ್ಮದ್ ಫಹದ್ ರಹಮಾನ್ ಎದುರು ಜಯಗಳಿಸಿದ್ದ ಗುಜರಾತಿ ಅವರಿಗೆ ಎರಡನೇ ಸುತ್ತಿನ ಸೋಲು ಹಿನ್ನಡೆ ಉಂಟುಮಾಡಿತು. ಈ ಟೂರ್ನಿ ರ‍್ಯಾಪಿಡ್ ಮಾದರಿಯಲ್ಲಿ ನಡೆಯುತ್ತಿದೆ.

ವೈಯಕ್ತಿಕ ವಿಭಾಗದಲ್ಲಿ ಸ್ಪರ್ಧಿಸಿರುವ ಭಾರತದ ಇನ್ನೊಬ್ಬ ಆಟಗಾರ ಅರ್ಜುನ್ ಇರಿಗೇಶಿ ಅವರು ಅವರು ಎರಡು ಸುತ್ತುಗಳ ನಂತರ ಒಂದೂವರೆ ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಮೊದಲು ಫಿಲಿಪೀನ್ಸ್‌ನ ಪೌಲೊ ಬೆರ್ಸಮಿನ ಅವರನ್ನು ಸೋಲಿಸಿದ 20 ವರ್ಷದ ಅರ್ಜುನ್ ಎರಡನೇ ಸುತ್ತಿನಲ್ಲಿ ವಿಯೆಟ್ನಾಮಿನ ಲಿ ತುವಾನ್ ಮಿನ್ ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು.

ಪ್ರಮುಖ ಆಟಗಾರ ಉಜ್ಬೇಕಿಸ್ತಾನ ನಾಡಿರ್ಬೆಕ್ ಅಬ್ದುಸತ್ತಾರೊವ್ ಎರಡು ಅಂಕ ಸಂಗ್ರಹಿಸಿದ್ದರೆ, ಚೀನಾದ ವೀ ಯಿ ಅವರು ಒಂದೂವರೆ ಪಾಯಿಂಟ್ಸ್ ಹೊಂದಿದ್ದಾರೆ. ವೈಯಕ್ತಿಕ ವಿಭಾಗದ ಸ್ಪರ್ಧೆಗಳ ನಂತರ ಟೀಮ್ ವಿಭಾಗದ ಸ್ಪರ್ಧೆಗಳು ನಡೆಯಲಿವೆ.



ಕೋನೇರು ಹಂಪಿ



ದ್ರೋಣವಲ್ಲಿ ಹಾರಿಕಾ

ಹಾಕಿ: ಭಾರತಕ್ಕೆ ಉಜ್ಬೇಕಿಸ್ತಾನ ಸುಲಭ ತುತ್ತು

ಹಾಂಗ್‌ಝೌ (ಪಿಟಿಐ): ಲಲಿತ್ ಉಪಾಧ್ಯಾಯ, ವರುಣ್ ಕುಮಾರ್ ಮತ್ತು ಮನ್‌ದೀಪ್ ಸಿಂಗ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಭಾರತ ತಂಡ, ಹಾಕಿ ಟೂರ್ನಿಯಲ್ಲಿ ಪದಕದೆಡೆಗಿನ ಅಭಿಯಾನವನ್ನು ಭರ್ಜರಿಯಾಗಿ ಆರಂಭಿಸಿತು.

ಭಾನುವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ 16–0 ಗೋಲುಗಳಿಂದ ಉಜ್ಬೇಕಿಸ್ತಾನ ತಂಡವನ್ನು ಪರಾಭವಗೊಳಿಸಿತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಭಾರತ ತಂಡವು 66ನೇ ರ‍್ಯಾಂಕ್‌ನ ತಂಡಕ್ಕೆ ಅಲ್ಪ ಪೈಪೋಟಿ ನೀಡುವ ಅವಕಾಶವನ್ನೂ ಕೊಡಲಿಲ್ಲ.

ಲಲಿತ್ (7, 24, 37 ಮತ್ತು 53ನೇ ನಿ.) ಹಾಗೂ ವರುಣ್ (12, 36, 50 ಮತ್ತು 52ನೇ ನಿ.) ತಲಾ ನಾಲ್ಕು ಗೋಲುಗಳನ್ನು ತಂದಿತ್ತರೆ, ಮನ್‌ದೀಪ್ (18, 27 ಮತ್ತು 28) ಮೂರು ಗೋಲುಗಳನ್ನು ಗಳಿಸಿದರು.

ಇತರ ಗೋಲುಗಳನ್ನು ಅಭಿಷೇಕ್ (17), ಅಮಿತ್ ರೋಹಿದಾಸ್ (38), ಸುಖ್‌ಜೀತ್ (42), ಶಂಶೇರ್ ಸಿಂಗ್ (43) ಮತ್ತು ಸಂಜಯ್ (57) ಅವರು ತಂದಿತ್ತರು.

ಕೂಟದ ಉದ್ಘಾಟನಾ ಸಮಾ ರಂಭದ ಪಥಸಂಚಲನದಲ್ಲಿ ಧ್ವಜಧಾರಿಯಾಗಿದ್ದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು ಈ ಪಂದ್ಯದಲ್ಲಿ ಆಡಲಿಲ್ಲ.

ಆರಂಭದಿಂದಲೇ ಪಂದ್ಯದ ಮೇಲೆ ಹಿಡಿತ ಸಾಧಿಸಿದ ಭಾರತ, ಏಳನೇ ನಿಮಿಷದಲ್ಲಿ ಮೊದಲ ಗೋಲು ಗಳಿಸಿತು. ಆ ಬಳಿಕ ಬೆನ್ನುಬೆನ್ನಿಗೆ ಉಜ್ಬೇಕಿಸ್ತಾನ ರಕ್ಷಣಾ ವ್ಯೂಹವನ್ನು ಬೇಧಿಸಿ ಗೋಲಿನ ಮಳೆಗರೆಯಿತು.

ಆದರೆ ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗೋಲಾಗಿ ಪರಿವರ್ತಿಸುವ ವಿಚಾರದಲ್ಲಿ ಭಾರತ ಎಡವಿತು. 14 ಪೆನಾಲ್ಟಿ ಕಾರ್ನರ್‌ಗಳಲ್ಲಿ ಐದರಲ್ಲಿ ಮಾತ್ರ ಯಶ ಕಂಡಿತು.

ಮಂಗಳವಾರ ನಡೆಯುವ ತನ್ನ ಮುಂದಿನ ಪಂದ್ಯದಲ್ಲಿ ಭಾರತ ತಂಡ, ಸಿಂಗಪುರ ತಂಡವನ್ನು ಎದುರಿಸಲಿದೆ.



ಲಲಿತ್ ಉಪಾಧ್ಯಾಯ